REGISTERED NO. M. 1393. ೨೪ ಪುಟಗಳು. ಈ ಪ್ರತಿ ಒಂದಾಣೆ

ಕಂಠೀರವ

KANTEERAVA
THE ONLY KANARESE
BI-WEEKLY.

ಶ್ರೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಪಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ।
ಶಸ್ತ್ರಸ್ತ್ರದ್ವದಖಿಷು ಸಂಯ್ಯವಹೃತಿಪ್ರಾಗಲ್ಭ್ಯಮಾತ್ಕೋಽನ್ವಹಂ
ಜೀಯಾದ್ವಿಶ್ವಜನೀನನೃತ್ತಿಚತುರಶ್ಮ್ರೀಕಂಠಕಂಠೀರವಃ ॥

ಎರಡು ಕುಲಗಳೊಳಾರ್ಯವಂಶವು। ಧರೆಯ ದೇಶಗಳೊಳಗೆ ಭಾರತ
ವಸುಕನಗಳೊಳಗಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತರುಳಗನ್ನಡವೊಂದಕೊಂದೊ। ಪ್ಪಿರುವೆ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ ॥

ಸಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ಜೂನ್ ತಾರೀಕು ೨೩ನೇ ಮಂಗಳವಾರ ಸಂಚಿಕೆ ೨೫
VOL. XVIII MANGALORE, TUESDAY, JUNE 23, 1936. NO. 25.

ಅಮೃತಾಂಜನ

(Regd.)

ತಲೆನೋವು, ಶಿರೋನೋವು, ಉಳುಕು, ಕುತ್ತಿಗೆ, ಭುಜ, ಹಲ್ಲುನೋವಿಗೆಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿನು ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ.

ಮಂಗಳೂರಲ್ಲಿ ಶಾಕಂಪೆನಿಯಲ್ಲಿ ದೊರೆಯುವುದು.

ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು

ಮತ್ತು

ಬೊಂಬಾಯಿ ನಗರ ಮತ್ತು ಅದರ ಉಪನಗರಗಳಿಗೆ ಚೀಫ್ ಏಜಂಟರು.

13-12-1935—ನಮ್ಮ ರಜತೋತ್ಸವ ವರುಷ.

——ಪ್ರಕಟಣೆ.——

ಪುತ್ತಿಯಾರದಲ್ಲಿ, ತಾಲೂಕು ಆಫೀಸು ರಸ್ತೆಯಲ್ಲಿ, ಪುತ್ತಿಯಾರಾ ಪೋಸ್ಟಾಫೀಸಿನ ಎದುರುಗಡೆಯಲ್ಲಿರುವ "ಸೌಮ್ಯಾಲಯಂ" ಎಂಬ ಹೊಸ ಬಂಗಲೆಯನ್ನು ನಾವು ಪಡಕೊಂಡು, ನಮ್ಮ ಕಲ್ಲಿಕೋಟೆ ಬ್ರಾಂಚ್ ಆಫೀಸನ್ನು ಅಲ್ಲಿ ತಾ. 14-3-36ರಲ್ಲಿ ತೆರೆದಿರುವೆವೆಂದು ನಮ್ಮ ಯಾವತ್ತೂ ಕೆಲಸಗಾರರಿಗೂ ಏಜಂಟರಿಗೂ ಪೊಲಿಸಿದಾರರಿಗೂ ತಿಳಿಸಲು ಸಂತೋಷಪಡುತ್ತೇವೆ. ನಮ್ಮ ಮಲಬಾರು ಜಿಲ್ಲಾ ಏಜಂಟರಾದ ಮಿ. ಸಿ. ಶಂಕರನ್ ನಾಯರರ ಆಫೀಸು, ಹಜೂರು ರಸ್ತೆಯಲ್ಲಿದ್ದುದು ಮೊಕೂಪು ಮಾಡಲ್ಪಟ್ಟು, ಈ ಹೊಸ ಬ್ರಾಂಚ್ ಆಫೀಸಿನಲ್ಲಿಯೇ ಸಮ್ಮಿಲನವಾಗುವುದು. ಈ ಹೊಸ ಆಫೀಸು ಅನುಕೂಲ ಸ್ಥಳದಲ್ಲಿದ್ದು, ವಿಶಾಲವಾಗಿ ಸೌಕರ್ಯಗಳುಳ್ಳುದಾದ್ದರಿಂದ, ದಿನೇ ದಿನೇ ಮಲಬಾರು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ನಮ್ಮ ವಿಮಾಕಾರ್ಯದ ದೆಸೆಯಿಂದ ಈ ಹೊಸ ಕಟ್ಟಡವನ್ನು ಪಡೆಯುವ ಆವಶ್ಯಕತೆ ಕಂಡಿದ್ದು, ನಮ್ಮ ಪೊಲಿಸಿದಾರರಿಗೆ ಮತ್ತಷ್ಟು ಒಳ್ಳೆಯದಾಗಿ ನಮ್ಮ ಕಾರ್ಯಸೇವೆಯನ್ನು ಸಲಿಸಲನುಕೂಲವಾಗುವುದೆಂಬ ಭರವಸೆ ಇದೆ. ನಮ್ಮ ಆಶ್ರಯದಾತರೂ ಹಿತಚಿಂತಕರೂ ಆದಷ್ಟು ತ್ವರ್ಯದಲ್ಲಿ "ಸೌಮ್ಯಾಲಯ" ವನ್ನು ಸಂದರ್ಶಿಸಬೇಕಾಗಿ ವಿನಂತಿ. ಎಲ್ಲ ಪತ್ರವ್ಯವಹಾರವನ್ನೂ ಹಣಪಾವತಿಗಳನ್ನೂ ಚೆಕ್ಕುಗಳನ್ನೂ ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕುದು.

ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್,
ಬೊಂಬೇ ಲೈಫ್ ಆಫೀಸು,
ಪುತ್ತಿಯಾರ ಪೋಸ್ಟು (ಕಲ್ಲಿಕೋಟೆ—ಮಲಬಾರು)

ನಮ್ಮ ಕಂಪೆನಿಯೊಂದಿಗೆ ವ್ಯವಹಾರವಿರುವವರ ಸೌಕರ್ಯಕ್ಕಾಗಿ ನಮ್ಮ ಟೆಲಿಗ್ರಾಫ್ ವಿಳಾಸವನ್ನು "Kochikar—Calicut" ಎಂದು ರಿಜಿಸ್ಟರ್ ಸಹ ಮಾಡಿಸಿರುವೆವು.

ಸಿ. ಶಂಕರನ್ ನಾಯರ್, ಮಲಬಾರ್ ಜಿಲ್ಲಾ ಏಜಂಟ್,
ಇವರ ಸವಿನಯ ಆಮಂತ್ರಣ.

ಕೊಚ್ಚಿಕಾರ್ ಬ್ರದರ್ಸ್,
ತಾ. 1—3—1936.

ESTD:—1906.

THE CANARA BANKING CORPORATION UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed	Rs. 3,50,000—0—0
Paid up	Rs. 2,88,840—0—0
Reserve and other funds	Rs. 3,72,337—0—0
Deposits	Rs. 29,50,717—0—0.

Fixed deposit rates up to 5% p. a.

16/6/1936.

Head Office:— UDIPI.

Branches:—1. Udipi, 2. Coondapoor, 3. Car Street—Mangalore, 4. Shimoga, 5. Madras. 6. Bunder—Mangalore, 7. Mercara and 8. Virarajendrapet.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಜೀವಾಮೃತವು ಒಲಹೀನತೆಯಿಂದುಂಟಾಗುವ ನೋವ್ಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು:—

ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಪ್ಪಿಬ್ಯೂಟರರು:—**ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚಡುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Pomona Sprayers

Here is a very useful Sprayer for Agriculturists, landholders, farmers, for spraying chemicals to the infected trees even to the height of 80 ft. from the ground level. It is strongly built so as to give a satisfactory service for many



years and is imported from Germany specially to meet the needs of Estate owners for spraying chemicals to the infected trees.

Price each Sprayer Rs. 33—0—0

Spray Controller ,, 7—8—0

BASEL MISSION BOOK DEPOT,
MANGALORE.

ಕಸಿ ಗಿಡಗಳು.

ಸಫೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲ ಭಾಗದಲ್ಲಿಯೂ ಸರಿಯಾಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತವೆ. ಒಂದು ಮರದಲ್ಲಿ ಸಾವಿರಗಟ್ಟಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ರುಚಿಕರ; ಕ್ಯಾಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣಸತ್ವ ಮತ್ತು ವಿಟಮಿನ್ ತುಂಬಾ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿಗಿಡಗಳೂ ದೊರೆಯುತ್ತವೆ.

ಕ್ರಯ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು:—

ಮಂಗಳೂರಿನಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಡ್ಲ ಶೋಪ್ ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಅಂಡ್ ಕೊ., ರಥಬೀದಿಯಲ್ಲಿಯೂ, ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿವೋನ್ ಸ್ಟೇಟರಲ್ಲಿಯೂ, ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಕಾಪು ಪೋಸ್ಟು, ಉ. ಕನ್ನಡ.

12, 9—6.

VASANTHI HARMONIUMS FOR MELODY AND DURABILITY.

ಶುದ್ಧ ಮತ್ತು ಮಂಜುಳ ಧ್ವನಿಯಿಂದ ಕೂಡಿರುವ ವಸಂತಿ ಹಾರ್ಮೋನಿಯಂನ್ನು ನಿಮ್ಮ ಗೃಹಗಳಲ್ಲಿ ಉಪಯೋಗಿಸಿ, ಸಂಗೀತಸುಖವನ್ನು ಪಡೆಯಿರಿ. ಸಿಂಗಲ್, ಡಬ್ಬಲ್, ಟ್ರಿಬ್ಲ್, ಪೊರ್ಟಬ್ಲ್, ಕಾಲಿನ ಫೊಲ್ಡಿಂಗ್ ವಗೈರೆ ಎಲ್ಲಾ ತರದ ಹಾರ್ಮೋನಿಯಂಗಳು ತಯಾರಿಸಲ್ಪಡುವುವು.

ವಸಂತಿ
ಹಾರ್ಮೋನಿಯಂ ವರ್ಕ್ಸ್,
ಹಂಪನಕಟ್ಟೆ, ಮಂಗಳೂರು.

MUSIC IS THE CHARM OF LIFE

and Vasanthi Harmoniums supply that charm.

VASANTHI HARMONIUM WORKS,
Hampankatta, Mangalore.

Specially constructed in our workshop. Well Tuned & Fitted to withstand Indian Climate.

Proprietor:—

ATTAVAR BABOO.

ಕಾರಣ ಮತ್ತು ಪರಿಣಾಮ

● ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶಾರೀರಕ ಯೋಗ್ಯತೆಯು ರಮ್ಯವಾದ ಅನುಭವವಾಗಿದೆ ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣ್ಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ, ಬಿ. ಪಿ. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರುವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಿಂಗಳೂರು.

GOVT. SOAP FACTORY, BANGALORE.

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/-ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು, ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ನ್ಯಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವೆಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ಮೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ಸಿಟಿ.



THE CENTRAL

Mutual Life Assurance Society, Ltd.

BOMBAY

(POLICY-HOLDERS' OWN)

(Incorporated in India under Co's Act 1913)

WHICH OFFERS, WHAT IS BEST IN INSURANCE

WISE MEN INSURE

With The Central Mutual Because

The Policy-holders are themselves the share-holders of the Company & all the profits go with policy-holders only.

For Particulars & Agency terms please apply to:—

The Pioneer General Insurance Agency of West Coast,

Car Street, MANGALORE, South India.

OR

The Secretaries, Graham Building, Bombay No. 1.

ಈ ವಾರದ ಕಥೆ—

ಪಶ್ಚಾತ್ತಾಪ

(ಶ್ರೀ. ಬಿ. ಶಂಕರ ಭಟ್ಟ, ವಿದ್ವಾನ್)

ತಮಗೆ ಈ ಕತೆಯ ವಿಷಯವಾಗಿ ವಿಶ್ವಾಸ ಹುಟ್ಟಲಾರದು. ಇದು ಅಸಂಬದ್ಧ ಪ್ರಲಾಪನೆಂದು ತಾವು ಹೇಳಬಹುದು. ಇದು ಸತ್ಯವೆಂದು ಗೊತ್ತಿರದಿದ್ದರೆ ನಾನು ಕೂಡಾ ಹೀಗೆ ಹೇಳುತ್ತಿದ್ದೆನು. ನನಗೆ ಆ ಮುದಿ ಲಾಓವಿುಂಗನ ಶಾಂತಿ ಪೂರ್ಣ ಮುಖಚರ್ಯೆಯು ನೆನಪಿದೆ. ಆ ಮುದುಕನು ಈಗ ತನ್ನ ಪೂರ್ವಜರೊಂದಿಗೆ ಶೆನ್ಸಿ ಪರ್ವತದಲ್ಲಿ ಮಲಗಿರಬಹುದು. ಶಂಘಾಯಿಯ ಇಲಿಯ ಬಿಲದಂತಿರುವ ಸಮಾಧಿಯಲ್ಲಲ್ಲ.

ಕೆಲವು ವರ್ಷಗಳ ಹಿಂದೆ ನಾನು ಸಮಾಜವಾದಿಯಾದ್ದರಿಂದ ದೇಶದ ಹೊರಗೆ ವಾಸಿಸಬೇಕಾಗಿ ಬಂತು. ಆ ಸಮಯದಲ್ಲಿ ನನಗೆ ಲಾಓವಿುಂಗನೊಡನೆ ಪರಿಚಯವಾದುದು. ತಾನು ಶೆನ್ಸಿಯಲ್ಲಿ ಹುಟ್ಟಿ ಬೆಳೆದು ಮಂಚೂರಾಜರ ಕಾಲದಲ್ಲಿ ಉಚ್ಚ ಅಧಿಕಾರದಲ್ಲಿ ಕೆಲಸ ಮಾಡುತ್ತಿದ್ದು ವಿಪ್ಲವದ ಅನಂತರ ಶಂಘಾಯಿಗೆ ಬಂದು ವಾಸಿಸತೊಡಗಿದೆನೆಂದು ಹೇಳಿದ್ದನು. ಚಳಿಗಾಲದಲ್ಲಿ ಎಷ್ಟೋ ಹೊತ್ತು ನಾನು ಅವನ ಕೋಣೆಯಲ್ಲೇ ಸಮಯ ಕಳೆದಿದ್ದೆನು. ಆತನಿಗೆ ಶೆನ್ಸಿಯ ಸುದ್ದಿ ಮಾತಾಡುವುದೆಂದರೆ ಬಹಳ ಸಂತೋಷ. ಜನ್ಮಭೂಮಿಗೆ ಹಿಂದಿರುಗ ಬೇಕೆಂಬ ಆಸೆಯು ಅವನಲ್ಲಿ ಬಲವಾಗಿತ್ತು. ಆದರೆ ಅಷ್ಟು ಪ್ರಾಯದಲ್ಲಿ ಅಲ್ಲಿಗೆ ಹಿಂದಿರುಗುವುದು ಅಸಂಭವವಾಗಿತ್ತು. ಆತನಿಗೆ ಶಾಸ್ತ್ರಗಳ ಪರಿಚಯವು ಚೆನ್ನಾಗಿತ್ತು. ಬೌದ್ಧಧರ್ಮದ ಅಭಿಮಾನವು ಆತನಲ್ಲಿ ಉಕ್ಕಿ ಹರಿಯುತ್ತಿತ್ತು. ಅವನು ಒಂದು ದಿನ ಒಬ್ಬ ಐಂದ್ರಜಾಲಿಕನೊಡನೆ ನನ್ನ ಪರಿಚಯ ಮಾಡಿಸಿದನು.

ಅವರಿಬ್ಬರ ಮಾತು ಕೇಳುವಾಗ ನಾನು ಇಪ್ಪತ್ತನೇ ಶತಮಾನದಲ್ಲಿಲ್ಲದೆ ಇತಿಹಾಸದ ಮಧ್ಯಕಾಲದ ಇಬ್ಬರು ಐಂದ್ರಜಾಲಿಕರ ಮಧ್ಯದಲ್ಲಿದ್ದೇನೋ ಎಂಬಂತೆ ಭಾಸವಾಗುತ್ತಿತ್ತು. 'ಇದನ್ನು ಯಾರಾದರೂ ರಾತ್ರೆ ಸೇವಿಸಿದರೆ ಮಕ್ಕಳಾಗುವದು. ಇದನ್ನು ಅರೆದು ಗೋಡೆಗೆ ಹಚ್ಚಿದರೆ ವಾಂತಿಭೇದಿ ಬರಲಾರದು.' ಒಂದು ದಿವಸ ಮಂತ್ರವಾದ ಮಾಡಿ ಶವಗಳನ್ನು ನಡೆಸುವ ಸುದ್ದಿಯನ್ನೆತ್ತಿದರು. ನಾನು ಆ ವಿಷಯವಾಗಿ ನನ್ನ ಅವಿಶ್ವಾಸವನ್ನು ಸ್ಪಷ್ಟವಾಗಿ ಪ್ರಕಟಿಸಿದ್ದರಿಂದ ಆ ಮಾತನ್ನು ಅವರು ಅಲ್ಲಿಗೇ ನಿಲ್ಲಿಸಿದರು.

ಆ ಮೇಲೆ ನನ್ನ ಹಳ್ಳಿಗೆ ಹಿಂದಿರುಗುವ ದಿನ ಲಾಓವಿುಂಗನನ್ನು ಬೀಳ್ಕೊಳ್ಳಲು ಹೋದೆನು. ಆಗ ಅವನು ಬಹಳ ಅಸ್ವಸ್ಥನಾಗಿದ್ದನು. ಅವನ ಐಂದ್ರಜಾಲಿಕ ಮಿತ್ರನು ಸ್ವಲ್ಪ ದೂರದ ವರೆಗೆ ನನ್ನೊಂದಿಗೆ ಬಂದನು. ನಾನು ಅವನೊಡನೆ—'ಈ ಮುದುಕನು ಪುನಃ ಶೆನ್ಸಿ ಪರ್ವತಗಳನ್ನು ನೋಡುವಂತಿಲ್ಲ ವೆಂದು ನನಗೆ ತೋರುತ್ತದೆ' ಎಂದೆನು. ಆಗ ಆತನ ಮುಖವು ವಿಚಿತ್ರವಾಗಿ ಕಂಡಿತು. ನಾನೊಂದು ಬೇಡವಾದ ಕೆಲಸ ಮಾಡಿದೆನು. 'ನೀನು ಲಾಓವಿುಂಗನನ್ನು ಶೆನ್ಸಿ ಪರ್ವತಗಳಲ್ಲಿ ಹೂಳುವ ವಚನ ಕೊಟ್ಟರೆ ನಾನು ನಿನಗೆ ೫೦ ಡಾಲರುಗಳನ್ನು ಕೊಡುತ್ತೇನೆ' ಎಂದುದಕ್ಕೆ ಅವನು ತಲೆಯಲ್ಲಾಡಿಸಿ ಒಪ್ಪಿ ಕೊಂಡನು. ನಾನು ೫೦ ಡಾಲರುಗಳನ್ನು ಅವನ ಕೈಮೇಲೆ ಎಣಿಸಿ ಹಾಕಿದೆನು. ಆ ಮೇಲೆ ನನಗೆ ಆ ಕೆಲಸ ಬೇಕಿದ್ದಿಲ್ಲವೆಂದು ಪಶ್ಚಾತ್ತಾಪವಾಯಿತು.

ರಾತ್ರೆಯು ಬಹಳ ಸುಂದರವಾಗಿತ್ತು. ನನ್ನ ಕೂಲಿಯಾಳುಗಳು ಇನ್ನೊಂದು ಶಿಬಿರಕ್ಕೆ ಹೋಗಲು ಒಪ್ಪಿಗೆಯಿತ್ತಿದ್ದರು. ಅವರಿಗೂ ಆದಷ್ಟು ಬೇಗನೆ ಹೋಗುವ ಆಸೆಯಿತ್ತು. ಅವರು ಬಾಯಿಯಲ್ಲಿ ಏನೋ ಹರಟುತ್ತಾ ವೇಗವಾಗಿ ಹೋಗುತ್ತಿದ್ದರು. ನಾನು ಅವರ ಹಿಂದಿನಿಂದ ಹೋಗುತ್ತಿದ್ದೆನು. ತಿಂಗಳುಬೆಳಕಿನಲ್ಲಿ ಗದ್ದೆಯ ಪೈರೂ, ಗುಡ್ಡದ ಮರಮಟ್ಟೂ ಬಹಳ ಸುಂದರವಾಗಿ ತೋರುತ್ತಿದ್ದುವು. ಫಕ್ಕನೆ ಮುಂದಿನಿಂದ ಹೋಗುತ್ತಿದ್ದ ಆಳು ಹೆದರಿ ಚೀರಿಕೊಂಡು ತಲೆಯ ಹೊರೆಯನ್ನು ಅಲ್ಲೇ ಕೆಳಗೆ ಹಾಕಿ ಗದ್ದೆಗಳ ನಡುವಿಗೆ ಓಡಿದನು. ಎರಡನೆಯವನೂ ಅದೇ ಹಾದಿ ಹಿಡಿದನು. ನಾನು ಕಾರಣ ಗೊತ್ತಾಗದೆ ಬೆಪ್ಪನಂತಾದೆನು. ಅಷ್ಟಾಗುವಾಗ ಜನರ ಒಂದು ಸ್ವಾರಿಯು ನಮ್ಮ ಕಡೆಗೆ ಬರುತ್ತಿರುವುದು ಕಂಡುಬಂತು. ನಾನು ಯಾರೋ ಹಳ್ಳಿಯ ಜನರಾಗಿರಬೇಕೆಂದು ಯೋಚಿಸಿದೆನು. ಮುಂದುಗಡೆಯ ಮನುಷ್ಯನ ಕೈಯಲ್ಲಿ ಒಂದು ಮಣ್ಣಿನ ಮಡಕೆಯಿತ್ತು. ಬೇರೆಯವರ ಕೈಯಲ್ಲಿ ಏನೂ ಇರಲಿಲ್ಲ. ಮುಂದಿನವನನ್ನು ಬಿಟ್ಟು ಉಳಿದವರೆಲ್ಲಾ ವಿಕಾರವಾಗಿ ನಡೆಯುತ್ತಿದ್ದರು. ಅವರ ತಲೆ ನೆಟ್ಟಗಿತ್ತು. ಆಚೆ ಈಚೆ ಅಲ್ಲಾಡುತ್ತಿರಲಿಲ್ಲ. ನಾನು ಅವರಿಗೆ ದಾರಿ ಬಿಡಲಿಕ್ಕಾಗಿ ಬದಿಗೆ ಸರಿದೆನು. ಅವರಿಗೆ ನಮಸ್ಕಾರ ಕೂಡಾ ಮಾಡಿದೆನು. ಯಾರೂ ಉತ್ತರಕೊಡಲಿಲ್ಲ. ಆ ಸಾಲಿನಲ್ಲಿ ಎರಡನೆಯವಳು ಬೆನ್ನಿನಲ್ಲಿ ಒಂದು ಮಗುವನ್ನು ಕಟ್ಟಿಕೊಂಡಿರುವ ಹೆಂಗಸು. ಮೂರನೆಯವನು ಒಬ್ಬ ಶಿಪಾಯಿಯು. ಅವನ ಕಾಲಿಗೊಂದು ಗಾಯವಿತ್ತು. ಇನ್ನು ನಾ ಲ್ಕನೆಯವನೋ? ನನ್ನ ಸ್ನೇಹಿತ ಲಾಓವಿುಂಗ? ನಾನು ಒಂದೊರ್ಭಟಿ ಕೊಟ್ಟು ಗದ್ದೆಯಲ್ಲಿ ಓಡಿಬಿಟ್ಟೆನು. ಐಂದ್ರಜಾಲಿಕನು 'ಲಾಓವಿುಂಗನನ್ನು ಶೆನ್ಸಿ ಪರ್ವತದಲ್ಲಿ ಹೂಳುವೆನೆ'ಂದು ಮಾತುಕೊಟ್ಟದ್ದು ನೆನಪಾಯಿತು.

ಕೂಲಿಗಳೂ ನಾನೂ ರಾತ್ರೆಯಲ್ಲಿ ಅಗ್ನಿಷ್ಟಿಕೆಯ ಸುತ್ತು ಕುಳಿತುಕೊಂಡು ಹರಟುತ್ತಿದ್ದೆವು. ಆಗ ಕೂಲಿಗಳಲ್ಲೊಬ್ಬನು 'ಅದು ಪ್ರೇತಗಳ ಮೆರವಣಿಗೆ'ಯೆಂದನು. ಶವಗಳು ಕೊಳೆಯದಂತೆ ಮಾಡಬಲ್ಲ ಜನರಿದ್ದಾರೆ. ಮತ್ತು ಆ ಶವಗಳನ್ನು ತಮಗೆ ಬೇಕಾದಂತೆ ಬೇಕಾದಲ್ಲಿಗೆ ನಡೆಸಿಕೊಂಡು ಹೋಗುತ್ತಾರೆ. ಯಾರಾದರೂ ತಮ್ಮ ಮನೆ ಬಿಟ್ಟು ದೂರದಲ್ಲಿ ಸತ್ತರೆ, ಅವರ ಬಂಧುಗಳು ಐಂದ್ರಜಾಲಿಕರನ್ನು ಕರೆದು ಅವರಿಗೆ ತಕ್ಕಷ್ಟು ಹಣ ಕೊಟ್ಟು ಆ ಶವವನ್ನು ಅವರ ಮೂಲಕ ಸ್ವಂತ ಮನೆಗೆ ತರಿಸುತ್ತಾರೆ. ಐಂದ್ರಜಾಲಿಕರು ಕೆಲವು ಶವಗಳನ್ನು ಒಟ್ಟು ಮಾಡಿ ಆ ಮೇಲೆ ಅವುಗಳನ್ನು ಪ್ರಯಾಣಕ್ಕೆ ಹೊಂಡಿಸುತ್ತಾರೆ. ಐಂದ್ರಜಾಲಿಕರ ಕೈಯಲ್ಲಿ ನೀರು ತುಂಬಿದ ಒಂದು ಮಣ್ಣಿನ ಪಾತ್ರೆಯಿರುತ್ತದೆ. ಅದನ್ನು ಹಿಡಿದುಕೊಂಡು ಅವರು ಮುಂದೆ ನಡೆಯುವಾಗ ಶವಗಳು ಹಿಂದಿನಿಂದ ಹೋಗುತ್ತವೆ. ಈ ಪ್ರಯಾಣವು ಯಾವಾಗಲೂ ರಾತ್ರೆಯಲ್ಲೇ ನಡೆಯುತ್ತದೆ. ಹಗಲಿನಲ್ಲಿ ಎಲ್ಲಿಯಾದರೂ ಒಂದು ಏಕಾಂತ ಸ್ಥಳದಲ್ಲಿ ಆ ಶವಗಳನ್ನಿರಿಸುತ್ತಾರೆ. ಬೇಕಾದ ಕಡೆಗೆ ಶವಗಳನ್ನು ತಲಪಿಸಿಯಾದ ಮೇಲೆ ಆ ಪಾತ್ರೆಯ ನೀರನ್ನು ನೆಲಕ್ಕೆ ಚೆಲ್ಲಿ ಆ ಮಡಕೆಯನ್ನು ಒಡೆದುಹಾಕುತ್ತಾರೆ. ಆ ಮಡಕೆಯನ್ನು ಒಡೆಯದಿದ್ದರೆ ಹೆಣವು ಕೊಳೆಯಲಾರದು ಮತ್ತು ಮೃತಾತ್ಮನಿಗೆ ಶಾಂತಿ ದೊರಕಲಾರದು, ಎಂದು ಸುದ್ದಿ ಹೇಳಿ ಮುಗಿಸಿದನು.

ಈ ಮಾತಿನ ಸತ್ಯಾಂಶವನ್ನು ತಿಳಿಯಲಿಕ್ಕಾಗಿ ಶೆನ್ಸಿಯಲ್ಲಿರುವ ಮಿತ್ರನಿಗೆ ನಾನು ಪತ್ರ ಬರೆದೆನು. ಅವನು ಶೆನ್ಸಿ ಸಮಾಧಿ ಸ್ಥಳದಲ್ಲಿ ಹೊಸ ದೂಪೆಯು ಕಾಣುತ್ತದೆಂದೂ ಆದರೆ ಈ ಊರಲ್ಲಿ ಸದ್ಯ ಯಾರೂ ಸತ್ತಿಲ್ಲವೆಂದೂ ಬರೆದನು.

ಆಗ ಹಣ ಕಳೆದುಕೊಂಡ ಪಶ್ಚಾತ್ತಾಪವು ಪ್ರಹಾರವಾಯಿತು.

(ಒಂದು ಚೀನೀ ಕತೆ)

ಯೋಗಸಾಧನ.

[ಈ ಎರಡು ಸಣ್ಣ ಕೃತಿಗಳನ್ನು ಬರೆದವರು ನೂರಾರು ವರ್ಷಗಳ ಹಿಂದೆ ಯೋಗಾಭ್ಯಾಸದಿಂದ ಪರಮಜ್ಞಾನಿಯಾಗಿ ಜೀವಿಸಿದ್ದ ಭಟಕಳ ಅಪ್ಪಯ್ಯನವರೆಂಬ ಸಾರಸ್ವತ ಮಹಾಶಯರು. ಮೊದಲನೆಯ ಕವಿತೆಯನ್ನು 'ಕವಿಯಾದರೆ ಈ ಗುಡುಗುಡಿಯ ಮೇಲೆ ಕವಿತೆ ಹೇಳು' ಎಂದ ರಾಜಸ್ಥಾನದ ದ್ವಾರಪಾಲಕನಿಗೆ ಉತ್ತರವಾಗಿ ಅಲ್ಲೇ ರಚಿಸಿದರಂತೆ. ಗುಡುಗುಡಿಯಲ್ಲೂ ತತ್ವಜ್ಞಾನವಿದೆ. ಬೀಡಿಯಲ್ಲೂ? 'ಬುದ್ಧಿಗೆ ವಾಗರ್ಗ ತೋರುವುದು.' M. Narasing Rao.]

I. ಭಕ್ತಿಯೋಗ.

ಗುಡುಗುಡಿಯನು ಸೇದಿ ನೋಡು–ನಿನ್ನ ।
ಒಡಲೊಳಗಿದ್ದ ರೋಗವನೀಡಾಡೂ ॥ ಪಲ್ಲ ॥
ಬುರುಡೆಯೆಂಬುದು ಈ ಶರೀರಾ–ದೃಢ ।
ತರ ಭಕತಿಯು ತಾನೆ ಕೋವೆಯಾಕಾರಾ ॥
ಹರಿನಾರಾಯಣವೆಂಬ ನೀರಾ–ಅದ– ।
ನರಿತು ಸೇದುವವನೆ ಬಲು ವೋಜುಗಾರಾ ॥ ೧ ॥

ಮನವೆಂಬ ಸಂಚಯ ಬಿಚ್ಚಿ–ದಿನ– ।
ದಿನದ ಪಾತಕವೆಂಬ ಬಂಗಿಯ ಕೊಚ್ಚೀ ॥
ತನುವಿನ ಚಿಲುಮೆಯೊಳೊಚ್ಚಿ–ಅಚ್ಯು– ।
ತನ ಧ್ಯಾನವೆಂಬ ಕಿಚ್ಚನು ತಂದ್ಹಚ್ಚೀ ॥ ೨ ॥

ಸದ್ಯದೊಳಮಲು ಏರುವುದು–ದಾ– ।
ರಿದ್ರ್ಯದುಃಖವು ಸುಟ್ಟು ಹೊಗೆಯೇಳುವುದೂ ॥
ಬುದ್ಧಿಗೆ ವಾಗರ್ಗ ತೋರುವುದೂ–ಗುರು– ।
ಸಿದ್ಧಾಮಲಾನಂದಪದಕೆ ಕೂಡುವುದೂ ॥ ೩ ॥

II. ಜ್ಞಾನಯೋಗ.

ಅಂಗವೇ ಮಹಾಂಗಿರೀಶಲಿಂಗವಾದುದು ।
ಸಂಗಸುಖದ ದುರಿತವೆಲ್ಲ ಪಿಂಗಿ ಪೋದುದೂ ॥ ಪಲ್ಲ ॥

ವರ್ಮದಿಂದ ಗುರುಕಟಾಕ್ಷನರ್ಮ ಸಿಕ್ಕಿತು ।
ಕರ್ಮ ಹರಿದು ಜ್ಞಾನಜ್ಯೋತಿ ಬೆಳಕು ಮಿಕ್ಕಿತೂ ॥
ಧರ್ಮತತ್ವವೆಂಬ ಅಮ್ಮಳಶರಧಿಯುಕ್ಕಿತು ।
ಮರ್ಮದಿಂದ ಪ್ರಕಟವಾದ ಬ್ರಹ್ಮ ದಕ್ಕಿತೂ ॥ ೧ ॥

ಮಾಯೆಯಿಂದ ಮುಮತೆಯೆಲ್ಲ ಸತ್ಯವಾದುದು ।
ನ್ಯಾಯಪಥವ ತಿಳಿಯೆ ಸರ್ವ ವಿಧ್ಯವಾದುದೂ ॥
ಕಾಯದೊಳಗೆ ದಿವ್ಯಜ್ಯೋತಿ ಪಥ್ಯವಾದುದು ।
ಸಾಯುವಂತ ಪುಟ್ಟುವಂತ ಭೀತಿ ಪೋದುದೂ ॥ ೨ ॥

ಪರಶಿವಾತ್ಮಲಿಂಗವೆನ್ನ ಮನಕೆ ಸೇರಿತು ।
ಬೆರೆದು ಸ್ವಯಂಜ್ಯೋತಿ ತುಂಬಿ ತುಳುಕಿ ಬೀರಿತೂ ॥
ಪರಮಾನಂದರಸದ ಲಹರಿ ಉಕ್ಕಿ ಏರಿತು ।
ಗುರು ವಿಮಲಾನಂದಪದದ ಮಿರುಕು ಮಿಾರಿತೂ ॥ ೩ ॥

ರಾಮಮೋಹನ ಕಂಪೆನಿಯವರ

ಉತ್ತರ ಹಿಂದೂಸ್ಥಾನದ

ಯಾತ್ರಾಪ್ರವಾಸ.

ಜುಲಾಯಿ–ಸೆಪ್ಟೆಂಬರ್ ೧೯೪೬.

ಜುಲಾಯಿ ತಿಂಗಳು ೨೯ನೇ ತಾರೀಕು ಬೆಂಗಳೂರು ಸಿಟಿ ಸ್ಟೇಶನ್ ಬಿಟ್ಟು—ತುಂಗಭದ್ರ (ಮಂತ್ರಾಲಯ), ಪಂಢರಪುರ, ನಾಸಿಕ (ಪಂಚವಟಿ, ತ್ರಿಯಂಬಕ), ಬೊಂಬಾಯಿ, ಬ್ರೋಚ್ (ನರ್ಮದೆ), ಬರೋಡಾ, ಡಾಕೂರು (ಶ್ರೀ ಕೃಷ್ಣ ತುಲಾಭಾರ), ಜಾಂಸಗರ, ಹ್ವಾರಕೆ, ಸಿದಪೂರ (ಮಾತೃಗಯೆ), ಅಬು, ಅಜ್ಮೀರ್ (ಪುಷ್ಕರ), ಜಯಪೂರ, ಆಗ್ರಾ, ಮಥುರಾ (ಬೃಂದಾವನ, ಗೋಕುಲ, ಗೋವರ್ಧನ), ಸ್ಯೂ ಡಿಲ್ಲಿ (ಹಸ್ತಿನಾಪುರ), ಕುರುಕ್ಷೇತ್ರ, ಹರಿದ್ವಾರ (ಹೃಷೀಕೇಶ), ನೈಮಿಶಾರಣ್ಯ, ಅಯೋಧ್ಯೆ (ನಂದಿಗ್ರಾಮ), ಪ್ರಯಾಗ (ತ್ರಿವೇಣಿ, ಅಲಹಾಬಾದು), ಚಿತ್ರಕೂಟ, ವಿಂಧ್ಯಾಚಲ, ಶ್ರೀ ಕಾಶಿ, ಗಯೆ, ಕಲ್ಕತ್ತೆ, ಪೂರಿ ಜಗನ್ನಾಥ, ಸಿಂಹಾಚಲ, ರಾಜಮಂಡ್ರಿ (ಗೋದಾವರಿ), ಮದರಾಸು ಇವುಗಳನ್ನೆಲ್ಲಾ ಸುತ್ತಿಕೊಂಡು ಸೆಪ್ಟೆಂಬರ್ ೨೪ನೇ ತಾರೀಕು ಬೆಂಗಳೂರು ಸಿಟಿಗೆ ವಾಪಸು ಬಂದು ಸೇರುವುದು.

ಮೂರನೇ ತರಗತಿ ಛಾರ್ಜು ರೂ. ೧೧೦.

ಹೆಚ್ಚು ಮಾಹಿತಿಗೆ:— ರಾಮಮೋಹನ ಕಂಪೆನಿ,

4, 16-6. ೨೫, ತಂಬುಚೆಟ್ಟಿ ಬೀದಿ, ಮದರಾಸು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆರಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ. ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ಸನ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಆಸುಳಿವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ, ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆರುಪು ಹರಿಯುವಪದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ಎ. ಪಿ. ಛಾರ್ಜ್ ಬೇರೆ.

GONO ORIGINAL KILLER REGD TRADE MARK

ಸಕಲ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ಮೊಡರ್ನ್ ಡ್ಯಾಮಂಡ್ಸ್.

MODERN DIAMONDS

ಆಧುನಿಕ ಕ್ರಮದಂತೆ ಸಾಣೆ ಹಿಡಿದ ಈ 'ನವೀನ ಮಾದರಿಯ ವಜ್ರಗಳು' ಮೈಮರೆಯಿಸುವಂಥ ಶುಭ್ರ ಪ್ರಕಾಶದಿಂದ ಹೊಳೆಯುತ್ತಿದ್ದು ಅವನ್ನು ಧರಿಸುವವರ ಅಂಗಸೌಂದರ್ಯವನ್ನು ಅತಿಶಯವಾಗಿ ಹೆಚ್ಚಿಸುತ್ತಿವೆ.

ಕಲ್ಕತ್ತೆಯ ಹಂಗಾಮಿ ಚೀಫ್ ಜಸ್ಟೀಸರಾದ ಮಾನ್ಯ ಸರ್. ಎಮ್. ಎನ್. ಮುಖರ್ಜಿಯವರ ಅಭಿಪ್ರಾಯ:

ಈ ಅತ್ಯಪೂರ್ವವಾದ ವಜ್ರಗಳು, ಸ್ವಾಭಾವಿಕವಾದ, ಬಹಳ ಬೆಲೆಯುಳ್ಳ, ಅಪರೂಪವಾದ, ಅಮೂಲ್ಯ ರತ್ನಗಳಿಗೇ ಸರಿಸರಿಯಾಗಿವೆ ಎಂಬೀ ಸಂಗತಿಯು ನನ್ನ ಅನುಭವಕ್ಕೆ ಬಂದಿದೆ, ಸಂತೋಷವಾಗಿದೆ ಎಂಬುದನ್ನು ನಿಮಗೆ ನಾನು ತಿಳಿಸಬೇಕಾಗಿದೆ. ಈ ನಿಮ್ಮ ನಿರ್ಮಾಣವು ಎಲ್ಲರಿಂದಲೂ ಏಕರೀತಿಯಾದ ಮನ್ನಣೆಯನ್ನು ಪಡೆಯುವುದಲ್ಲದೆ, ನಿಮ್ಮ ಉದ್ಯೋಗಕ್ಕೂ, ಹಿಂದೀ ಸಾಹಸಕಾರ್ಯಕ್ಕೂ ಯಶಸ್ಸನ್ನೂ ಸಂಪಾದಿಸಿ ಕೊಡುವಲ್ಲಿಯೂ ಎಂದೂ ವಿಫಲವಾಗಲಾರದೆಂದೂ ನಾನು ನಂಬುತ್ತೇನೆ.

ವಿಚಾರಿಸಿದಲ್ಲಿ ಎಲ್ಲ ವಿವರಗಳನ್ನೂ ಉಚಿತವಾಗಿ ಒದಗಿಸಲಾಗುವುದು.

C. C. Acharyulu & Son,
Jewellers and Gem Experts,
Post Box No. 543, Park Town, Madras.

ಅಶೋಕ

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾತಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡ್ರೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಜೋದ್‌ಲಾಲ್', ಕಟ್ನಿಯ ಸಿಮೆಂಟ್ ಮತ್ತೂ ಇಂಡಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ಎ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜಿ. ಎಸ್. ಮರಾತೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಪ್ಪದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚುತಿರಬೇಕೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,
9, Forbes Street, Fort, BOMBAY. Raikhad, AHMEDABAD.
ಅಥವಾ
ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಅಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ
"ಕಾಫಿ ಕಲ್ಲರ್"
ಸೀರೆಗಳನ್ನೇ ಉಪಯೋಗಿಸಿರಿ!
ಕಡಿಮೆ ಬೆಲೆಗೆ-ತರತರದ ಬಣ್ಣದ-ನಮೂನೆವಾರು ಅಂಚಿನ-ಸೀರೆಗಳು!
ಒಮ್ಮೆ ಬಂದು ನಮ್ಮ ಅಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಪೈ ಬ್ರದರ್ಸ್—ಉಡುಪಿ.
ದಿ ಕರ್ನಾಟಕ ಡ್ಯಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್
ಏಜಂಟರು:—**ಸೂಜಿಕರ್ನಾರ್ ಬ್ರದರ್ಸ್—ಮಂಗಳೂರು.**



ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪—೦—೦
೨೫ " ಯುರೋಪ " " ೫—೦—೦
೨೫ " ಹೂವಿನ ಬೀಜಗಳು ೫—೦—೦

ಗಿಡಗಳು.

೧೨ ಜಾತಿ ಮೂವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦—೦—೦

ನಿಂಬೆ, ಕೊಡಗು ಕಿತ್ತಳೆ, ಚೀಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೇವು, ಪಿಚ್ಚೀಸ್, ಅಂಜೂರ, ಪ್ರಾಪ್ತಿ ಗಿಡಗಳು ಡಜನ್ ೧ಕ್ಕೆ ೯—೦—೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨—೦—೦

ಪಾರಿಜಾತ, ನಂದಿವರ್ಧನ, ದಾಸಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬—೦—೦

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್‌ನ್ಯಾಷನಲ್ ಸೀಡ್ ಕಂಪೆನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರು ಸಿಟಿ.

ಲೋಧ್ರ

ಸ್ತ್ರೀಯರಿಗೆ ಆರೋಗ್ಯಭಾಗ್ಯವನ್ನು ಪ್ರಸಾದಿಸುವ 'ಅದೃಷ್ಟಮಣಿ'.

ಕೇಸರೀ ಕುಟೀರಂ, ಎಗ್ಮೋರು, ಮದ್ರಾಸ್.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನವಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ
ಕಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ

ದ್ರಾಕ್ಷಾಮೃತ

ಮೊದಲನೇ ದರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಮಸ್ತವಿಧ ಸರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀ ಯಂತ್ರಗಳಿಂದ ಶಾಸ್ತ್ರೀಕ್ಕ, ಸದ್ಯತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವೈತ್ತೆಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೇಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮುಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಸುಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರ ತಿಳಿದೀತು.

ಪ್ರಮಾಣ:—ಸಸಿಕಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೪ ಬಾ. ಬೆಲೆ ೫॥ ರೂ.
೧ ಡಜನ್ ಬಾ. ಬೆಲೆ ೧೪ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಷ್ಟ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು-ಮಿಜಾರಕರ ಬ್ರದರ್ಸ್, ಶೆಣೈ ಬ್ರದರ್ಸ್,
ವ ಗಜಾನನ ಮೇಡಿಕಲ್ ಹಾಲ, ಕಾರ ಸ್ಟ್ರೀಟ,
ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ,
ತಂಕಪೇಟೆ.

ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ-ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮ ನಾಯ್ಕ ಮತ್ತು ಭಕ್ತ ಬ್ರದರ್ಸ್.

ಪ್ರಸಿದ್ಧ ಔಷಧಿಸ್ಥ ಮತ್ತು ಸ್ಟೋರ್ಸ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

ಪಾಶ್ಚಿಮಾತ್ಯ ಮಹಾಪುರುಷರು—೬.

ಥಾಮಸ್ ಗ್ಯಾರಿಗ್ ಮಸರಿಕ್

(ಶ್ರೀ. ಆರ್. ಎಸ್. ಆರಾಧ್ಯ, ತುಂಕೂರು.)

ಥಾಮಸ್ ಗ್ಯಾರಿಗ್ ಮಸರಿಕ್‌ನು ಕಡು ಬಡವನ ಪುತ್ರ. ಈತನ ತಂದೆಯು ಗಾಡಿ ಜವಾನ. ಅವನ ಜೀವನಕ್ಕೆ ಗಾಡಿ ಹೊಡೆಯುವುದನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಆದರೆ ಮಸರಿಕ್‌ನು ತನ್ನ ಜ್ಞಾನಪ್ರಭೆಯಿಂದ ದೂರದೃಷ್ಟಿಯ ವೈಶಿಷ್ಟ್ಯದಿಂದ ಜೀವನದ ಕಷ್ಟ-ಸುಖಗಳನ್ನು ಲೆಕ್ಕಿಸಿ ತನ್ನ ಸ್ವದೇಶಾಭಿಮಾನವನ್ನು ಯುಕ್ತವಾಗಿ ಪ್ರಕಾಶಪಡಿಸಿ ಯುಕ್ತವಾದ ಮನ್ನಣೆಯನ್ನು ಪಡೆದಿದ್ದಾನೆ.

ಜೆಕೋಸ್ಲೋವೇಕಿಯಾದ 'ಹಾಪ್ಸ್‌ಬರ್ಗ್' ಕೋಮು ವಾರು ರಾಜಕೀಯ ಪಂಗಡವು ಆಗಾಗ್ಗೆ ಘೋರ ಕೃತ್ಯಗಳನ್ನು ನಡೆಯಿಸುತ್ತಿದ್ದಿತು. ಮಸರಿಕ್‌ನು ತನ್ನ ಬಾಲ್ಯದಲ್ಲಿ ಇವರ ಅಕೃತ್ಯಗಳನ್ನು ನೋಡಿ ಶಾಂತಿಸ್ಥಾಪನೆಗೆ ಆತುರಿಸುತ್ತಿದ್ದನು. ಆದರೇನು? ಇವನೊಬ್ಬ ಏನೂ ಕೈಲಾಗದ ಬಡ ಕೂಲಿಗಾರನ ಮಗನು. ಇಂದಿನ ಪ್ರಜಾಕ್ಷೇಮಕ್ಕೆ, ಇಂದಿನ ಉಚ್ಛ್ರಾಯಸ್ಥಿತಿಗೆ ಮಸರಿಕ್‌ನು ಸುಮಾರು ೬೫ ವರ್ಷಗಳ ದೀರ್ಘಕಾಲ ಕಷ್ಟ ಪಟ್ಟು ದುಡಿದಿದ್ದಾನೆ. ಅಂತೂ ತನ್ನ ಧ್ಯೇಯವನ್ನು ಸಾಧಿಸದೆ ಬಿಡಲಿಲ್ಲ. ತನ್ನ ದೇಶದಲ್ಲಿ ಇದ್ದ ಕ್ಷೋಭೆಯನ್ನು ತಪ್ಪಿಸಿ ಶಾಂತಿಯ ವಾತಾವರಣವನ್ನು ಕಲ್ಪಿಸಿದ್ದಾನೆ. ತನ್ನ ಮಾತೃ ಭೂಮಿಯ ರಾಜ್ಯಭಾರಕ್ರಮವನ್ನು ಶಿಸ್ತಿಗೆ ಒಳಪಡಿಸಿ ನ್ಯಾಯ ಪಕ್ಷಪಾತಿ ಎನ್ನಿಸಿಕೊಂಡಿದ್ದಾನೆ. ಎಲ್ಲಕ್ಕೂ ಮಿಗಿಲಾಗಿ ತನ್ನ ಮಾತೃಭೂಮಿಗೆ ತಾನು ತನ್ನ ಸೇವೆಯನ್ನು ನಿಜ ಸ್ವಾರ್ಥತ್ಯಾಗಿಯಂತೆ ಸಲ್ಲಿಸಿದನು.

ಮಸರಿಕ್‌ನೇ ಜೆಕೋಸ್ಲೋವೇಕಿಯಾದಲ್ಲಿ ರಿಪಬ್ಲಿಕ್ ಸರಕಾರವನ್ನು ನೇಮಿಸಿದವನು. ಆತನ ಸ್ವದೇಶಾಭಿಮಾನಕ್ಕೂ ನ್ಯಾಯಪಕ್ಷಪಾತಿತ್ವಕ್ಕೂ ಸ್ವದೇಶಾಭಿಮಾನಿಗಳು ಸನ್ಮಾನವಿತ್ತು ನಾಲ್ಕು ಸಲ ರಾಜ್ಯದ ಅಧ್ಯಕ್ಷಸ್ಥಾನವನ್ನಿತ್ತರು. ಆತನೂ ಸಂತೋಷದಿಂದ ವೃದ್ಧಾಪ್ಯದಲ್ಲಿಯೂ ತನ್ನ ಸೇವೆಯನ್ನು ಕೈಲಾದ ಮಟ್ಟಿಗೂ ಸಲ್ಲಿಸುತ್ತಿರುವನು. ಮಸರಿಕ್‌ನು ಈಗ ಬಹಳ ವೃದ್ಧನಾದರೂ ಕೂಡ ತನ್ನ ಕೆಲಸಕಾರ್ಯಗಳನ್ನು ನಿರ್ದಿಷ್ಟವಾದ ಕಾಲದಲ್ಲಿ ಯಾವ ರೀತಿಯ ಲೋಪವೂ ಇಲ್ಲದೆ ಮಾಡುತ್ತಿರುವನು. ಈತನು ವಾರದಲ್ಲಿ ಐದು ದಿವಸಗಳನ್ನು ಪ್ರೇಗಿಗೆ ಸುಮಾರು ೧೫ ಮೈಲು ದೂರದಲ್ಲಿರುವ 'ಚಾಟೋ ಆಫ್ ಲಾನಿ' ಎಂಬಲ್ಲಿ ಕಾಲವನ್ನು ಕಳೆಯುತ್ತಾನೆ. ಸಾಮಾನ್ಯವಾಗಿ ಪ್ರತಿನಿತ್ಯವೂ ಒಂದು ಗಂಟೆಯ ವರೆವಿಗೂ ಕುದುರೆಸವಾರಿ ಮಾಡುವನು. ಅಲ್ಲಿನ ಕಾರ್ಯಾಲಯವು ಗುಡ್ಡದ ಮೇಲಿದೆ. ಇದರ ರಾಷ್ಟ್ರೀಯ ಇತಿಹಾಸವು ರೋಮಾಂಚನವನ್ನುಂಟುಮಾಡುವಂತಹುದು. ಈತನು ವಿರಾಮಕಾಲದಲ್ಲಿ ತಕ್ಕ ಶಾಸ್ತ್ರದ ಸಂಬಂಧವಾಗಿ ಗ್ರಂಥವನ್ನು ಬರೆಯುವನು. ಇಲ್ಲಿನ ಅರಮನೆಯು ಪೂರ್ವದಲ್ಲಿ ರಾಡ್ಕೆನಿ ಅರಮನೆಯಾಗಿತ್ತು. ಈ ಅರಮನೆಯ ಶಿಖರವು ಈ ಪ್ರಾಂತ್ಯದಲೆಲ್ಲಾ ಅತ್ಯಂತ ಎತ್ತರವುಳ್ಳದ್ದಾಗಿಯೂ ಬಹಳ ಸುಂದರವಾಗಿಯೂ ಇರತಕ್ಕದಾಗಿದೆ. ಈ ಶಿಖರದ ಮೇಲೆ ಬಿಳಿ, ಕೆಂಪು, ನೀಲಿ ಕೂಡಿದ ಅಧ್ಯಕ್ಷಧ್ವಜ ನಭೋಮಂಡಲದಲ್ಲಿ ಹಕ್ಕಿಯಂತೆ ಹಾರಾಡುತ್ತಿರುವುದು. ಈ ಅರಮನೆಯಿರುವ ಗುಡ್ಡವನ್ನು ಹತ್ತಿದೊಡನೆಯೇ ಆ ಧ್ವಜದ ಮೇಲೆ ಜೆಕೋಸ್ಲೋವೇಕಿಯನರ ಜೀವನಧ್ಯೇಯವನ್ನು ಸೂಚಿಸುವ ಪದಗಳು ಕಂಡುಬರುವುವು.

ಈ ರಾಡ್ಕೆನಿ ಅರಮನೆಯು ಪುರಾತನವಾದುದು. ಈ ಕಟ್ಟಡವನ್ನು ೧೩ನೇ ಶತಮಾನದಲ್ಲಿ ಪ್ರಾರಂಭಿಸಿದ್ದರಂತೆ. ಈ ಸ್ಥಳದಲ್ಲಿಯೇ ಪ್ರಖ್ಯಾತವಾದ ಮೂವತ್ತು ವರ್ಷಗಳ ಯುದ್ಧ ನಡೆದಿದ್ದು ಮಸರಿಕ್‌ನನ್ನು ಈಗಲೂ ವಿದ್ಯಾರ್ಥಿಯಂತೆ ತನ್ನ ಪುಸ್ತಕಭಂಡಾರದಲ್ಲಿ ಪರಿಸುತ್ತ ಕುಳಿತಿರುವುದನ್ನು ನೋಡಬಹುದು. ಇವನು ಈ ರೀತಿ ಕೂತು ಓದುವುದರಲ್ಲಿಯೂ ಒಂದು ವಿಶೇಷವಾದ ರೀತಿಯುಂಟು. ತಾನು ಓದುವ ಪುಸ್ತಕದಲ್ಲಿ ತನಗೆ ಬೇಕಾದ ಸಂಗತಿಯೊಂದು ಕಂಡುಬಂದಲ್ಲಿ ಬೇರೆ ಒಂದು ಕಾಗದದಲ್ಲಿ ಬರೆದು ಅದರ ಮೇಲೆ ತನ್ನ ಟೀಕೆಯನ್ನಾಗಲೀ ಅಥವಾ ಖಂಡನೆಯನ್ನಾಗಲಿ ಬರೆಯುತ್ತಾನೆ.

ಮಸರಿಕ್‌ನ ವಾಕ್ಸ್ಫುರಣಿಯು ಆಕರ್ಷಣೀಯವಾದುದು. ಅವನ ಧ್ವನಿಯಲ್ಲಿ ಹಿತಕರವಾದ ಒಂದು ನಾದವಿದೆ. ಅವನ ಮಾತುಗಳಲ್ಲಿ ರಾಜತಂತ್ರಜ್ಞನೆಂತಲೂ, ಪಂಡಿತನೆಂತಲೂ ಯಾವ ಮೂಢನಿಗಾದರೂ ತಿಳಿಯುತ್ತಿದೆ. ಅವನಿಗೆ ಸಾಮಾನ್ಯವಾಗಿ ಐರೋಪ್ಯ ದೇಶದ ಎಲ್ಲಾ ಭಾಷೆಗಳು ಬರುತ್ತವೆ. ಆತನ ವಿಶಾಲ ದೃಷ್ಟಿಯು ಅದ್ಭುತವಾದುದು. ಆತನು ತನ್ನ ದೇಶವನ್ನೂ ಮತ್ತು ತನ್ನ ಜನರನ್ನೂ ಪ್ರೀತಿಸುವನಾದರೂ, ಅವರ ಕುಂದುಗಳನ್ನು ಆಗಾಗ್ಗೆ ಉದ್ಘಾಟಿಸದೆ ಬಿಡುತ್ತಿರಲಿಲ್ಲ. ಈತನ ಮಿತ್ರನಾದ ಡಾ॥ ಎಡೂರ್ಡ್ ಬೇನ್ಸ್‌ರವರ ಸಾಮರ್ಥ್ಯವು ದೇಶದ ಉನ್ನತಿಗೆ ಬಹಳ ಸಹಕಾರಿಯಾಗಿದೆ.

ಮಸರಿಕ್‌ನ ಆಶೋತ್ತರಗಳು ಅಗಾಧವಾದವುಗಳು. ಆತನ ಸಾಮ್ಯ ರೂಪವೂ, ಜ್ಞಾನಪ್ರಭೆಯೂ, ಕಾರ್ಯನಿರ್ವಾಹಕ ಶಕ್ತಿಯೂ ಎಲ್ಲರನ್ನು ಮುಗ್ಧರನ್ನಾಗಿ ಮಾಡುವಂತಹವುಗಳು. ಜೆಕೋಸ್ಲೋವೇಕಿಯದ ವೀರಾಗ್ರಣಿಯೆಂದರೆ ಈತನೇ. ಯುವಕರಿಗೆ ಆದರ್ಶ ಪುರುಷನೆಂದರೆ ಥಾಮಸ್ ಗ್ಯಾರಿಗ್ ಮಸರಿಕ್.

ಬೇಕಾಗಿದ್ದಾರೆ.

ಇಂಡೋ ಬಾವರ್ ಮತ್ತು ಕರ್ಣಿಕ್ಸ್ ಎಗ್ಯ್ ಮಿಕ್ಶ್ಚರಿನ ವಿಕ್ರಯವನ್ನು ಹೆಚ್ಚಿಸಲು ಅನುಭವಸ್ಥ ಟ್ರಾವಲಿಂಗ್ ಏಜಂಟರುಗಳು ಬೇಕಾಗಿದ್ದಾರೆ.

ಸಂಬಳ ಮತ್ತು ಕಮಿಶನ್ ಎಷ್ಟು ಬೇಕೆಂದು ಬರೆಯುವರೆ ವಿಳಾಸ:—

Karnik Brothers,
Bombay No. 4.

3, 23-6.

ಬಳ್ಳಾರಿ ಜಿಲ್ಲಾ ಕೊಡ್ಲಿಗಿಯಲ್ಲಿ ಈಚೆಗೆ ಸುಮಾರು ೫೦,೦೦೦ ಮಂದಿ ಭಕ್ತವೃಂದದ ಮುಂದೆ ವೀರಶೈವ ಸಮಾಜದ ಉಜ್ಜಯಿನಿ ಪೀಠದ ಅಧಿಪತಿಗಳಾಗಿ ಶ್ರೀ. ತ್ರಿಲೋಚನ ಶಿವಾಚಾರ್ಯ ಮಹಾಸ್ವಾಮಿಗಳನ್ನು ಪಟ್ಟಕ್ಕೇರಿಸಿದ ಸಮಾರಂಭ. ಬಾಳೆಹೊನ್ನೂರು ಮಠದ ಜಗದ್ಗುರುಗಳವರು (ಎಡದಲ್ಲಿರುವವರು) ಕೇದಾರನಾಥ ಮಠದ ಸ್ವಾಮಿಗಳವರ ಸಹಾಯದೊಡನೆ ಈ ಪಟ್ಟಾಭಿಷೇಕಮಹೋತ್ಸವವನ್ನು ನೆರವೇರಿಸುವಂಥವರಾದರು.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದರಿದುದು)

ರೂ. ೨೦೦೦:—ರಾವ್‌ಸಾಹೇಬ್: ಎಕ್ಸ್. ಕುಲಾಸೊ, ಎ. ವರದರಾವ್ ಬಿ. ಎ.ಬಿ. ಎಲ್, ಸಿ. ಜೆ. ಡಿ' ಸೋಜಾ, ಸುಬ್ಬಣ್ಣ ಅಸೋಡಿ, ಪಿ. ವಿಕ್ರಯನ್, ತ್ಯಾಂಪು ಪೂಜಾರಿ, ಕೆ. ಹಸನ್ ಸಾಹೇಬ್, ಎಂ. ಶಿವಯ್ಯ, ಜಮಿ ಫೆರ್ನಾಂಡಿಸ್. ಪಿ. ರಾಮಕೃಷ್ಣ ರಾವ್, ಎಂ. ಕೃಷ್ಣ ನಾಯರ್, ಎಂ. ಗೋಪಾಲಕೃಷ್ಣ ಬಂಗೇರ, ಹೆಚ್. ಆರ್. ಶೆಟ್ಟಿ, ಹೆಚ್. ರಾಮಣ್ಣ, ಬಿ. ತುರಾಬ್ ಖಾನ್, ಎನ್. ರಾಮಚಂದ್ರ ಅಡ್ಯಂತಾಯ, ಟಿ. ವೆಂಕಟ್ರಾವ್, ರೋಕ್ ಫೆರ್ನಾಂಡಿಸ್, ಕೆ. ಶ್ರೀನಿವಾಸ ಕಿಣಿ, ಬಿ. ಕೃಷ್ಣ ಶೆಟ್ಟಿ, ಎಂ. ಡಾವೋದರಾಚಾರಿ, ಆರ್. ಗುರುರಾಜ ಭಟ್, ಎಂ. ಕೆ. ಗೋಪಾಲಕೃಷ್ಣರಾವ್, ಕೆ. ಕೃಷ್ಣರಾಯ ಶ್ಯಾನುಭೋಗ್, ಮಿಸ್. ಕೆ. ಗುಲಾಬಿ ಬ್ಯಾ, ಬಿ. ಭುಜಂಗ ಶೆಟ್ಟಿ, ಕೆ. ಪಾಂಡುರಂಗ ಶ್ಯಾನುಭಾಗ, ಈ. ಕೃಷ್ಣ ಶೆಟ್ಟಿ, ಕೆ. ಕೃಷ್ಣರಾವ್, ಸಾಂತು ಮಾಣ್ಯಾ, ಈ. ಮಸ್ಕರೇಂಞಾಸ್, ಕಾಂತಪ್ಪ ಸಮಿತ, ಜಾರು ಪಕ್ಕಳ, ರಾಮಯ್ಯ ಭಂಡಾರಿ, ದೇವಮಾಡ, ಕೆ. ರಾಮು ಆಳ್ವ, ತಿಮ್ಮಪ್ಪ ಮಲ್ಲಿ, ಇಬ್ರಾಹಿಂ ಸಾಹೇಬ್, ಶೇಶು ಚೌಟ, ನಾರಾಯಣ ಶೆಟ್ಟಿ, ಟಿ. ಕಿಟ್ಟಪ್ಪ ಶೆಟ್ಟಿ ಮತ್ತು ಕೆ. ಅಚ್ಚಣ್ಣ ಶೆಟ್ಟಿ, ರೂ. ೧೫೦೦ ಕೊಟ್ಟವರು—ಎಂ. ರಾಮ ಹೆಗ್ಡೆ, ಎಸೆಸ್. ಯು. ಪಾಪೆಕ್ಕಿ ಬ್ಯಾ, ಎಸ್. ಚಂದ್ರಶೇಖರ, ಎನ್. ಜಿ. ಭುಜಂಗ, ಮಿಸೆಸ್ ಪದ್ಮಾ ಬ್ಯಾ, ಎಂ. ಅಬ್ದುರಹಿಮಾನ್, ಎನ್. ಆರ್. ಸುವರ್ಣ, ಕೆ. ಗೋವಿಂದನ್, ಕೆ. ಮಾಧವ, ಟಿ. ಪಿ. ಕರುವನ್, ಎಸ್. ವೆಂಕಟ್ರಮಣ ಭಟ್ಟ, ಪಿ. ನರಸಿಂಹ ಶ್ಯಾನುಭಾಗ, ಎಂ. ಅಂದ್ರಾದೆ, ಎಂ. ಪಾರ್ವತಿ ಬ್ಯಾ, ಪಿ. ಆರ್. ಕಾಮತ್, ಎ. ಕೃಷ್ಣೋಜಿರಾವ್, ಎಂ. ಪದ್ಮಪ್ಪ, ಸೂಜೀರ್ಕಾರ್ ಬ್ರದರ್ಸ್, ಕಾಮತ್ ಎಂಡ್ ಕೊ, ಸಾಲ್ವದೋರ್ ಡಿ'ಸೋಜಾ, ಎ. ಎಸ್. ಕಾಮತ್ ಎಂಡ್ ಕೊ, ಎ. ಪಿ. ಮುಟ್ಟಾಡಿ ಎಂಡ್ ಬ್ರದರ್ಸ್, ಡಾ ಶೇಖರನ್, ಕಾಂತಪ್ಪ ನಾಯಕ್, ಪೀಟರ್ ನಜರೆತ್, ಮಿಸೆಸ್ ಎಮಿಲ್ ಫ್ರಾಂಕ್ಸ್, ಜಿ. ಪಿ. ಆರ್. ವಾಸ್ಕರೇಂಞಾಸ್, ಮಿಸೆಸ್ ಡೀನ್, ಕೆ. ರಮೇಶರಾವ್, ಎ. ಎ. ಮತ್ತು ಜೆ. ಎ. ಸಲ್ದಾನಾ, ಎಚ್. ನರಸಿಂಹಯ್ಯ, ಎಚ್. ಎಂ. ಕಲಾವರ್, ಅನೋಡು ಕವಲಾಪ್ಪ ಶೆಡ್ತಿ, ಬ್ರಹ್ಮಾವರ ಪಾಲ್ತಮನೆ ನಾಗಯ್ಯ ಶೆಟ್ಟಿ, ಆನೋಡು ನಾರಾಯಣ ಶೆಟ್ಟಿ, ಮಾವಿನ ಕೆರೆ ಅನಂತ ಉಪಾಧ್ಯ, ಚೆಕ್ಕಾಡಿ ರಾಮಣ್ಣ ಹೆಗ್ಗಡೆ, ಬಿ. ವಿಠಲ ಪೈ, ವೆಂಕಯ್ಯ ಹೆಗಡೆ, ಹೆರಿಂಜೆ ಎಲ್ಲಪ್ಪ ಹೆಗಡೆ, ಹಾಲ್ತಮನೆ ಮಹಾಬಲೇಶ್ವರ ಶೆಟ್ಟಿ, ದೊಡ್ಡ ಮನೆ ಹಿರಿಯಣ್ಣ ಶೆಟ್ಟಿ, ದೊಡ್ಡ ಮನೆ ಮೋನಪ್ಪ ಹೆಗಡೆ, ಬಿ. ವಿಶ್ವೇಶ್ವರ ಶೆಟ್ಟಿ, ಕೃಷ್ಣಯ್ಯ ಶೆಟ್ಟಿ, ವೀರಣ್ಣ ಹೆಗಡೆ, ಎಚ್. ಮೂಸೆಬ್ಯಾರಿ, ಎಸ್. ಗೋಪಾಲರಾವ್, ಪಿ. ಲಕ್ಷ್ಮಣರಾವ್, ಕೆ. ಪದ್ಮನಾಭರಾವ್ ಕೆ. ಮುಕುಂದರಾವ್, ಎ. ಹಮೀದ್ ಖಾನ್, ಪಿ. ನಾರಾಯಣ ನಂಬಿಯಾರ್, ಡಿ. ಎಂ. ಶಾಂಸುದ್ದೀನ್, ಕೆ. ಅಣ್ಣಾಜಿರಾವ್, ಕೆ. ನಾರಾಯಣ ಮಲ್ಯ, ಎ. ನಿತ್ಯಾನಂದ, ಎಲ್. ಮಂಜಪ್ಪ ಹೆಗಡೆ, ಬಿ. ಗೋಪಾಲಕೃಷ್ಣಯ್ಯ, ಎಸ್. ವಿ. ಮಾಧವರಾವ್, ವ್ಯಾ. ರಾಮು ಪಡಿಯಾರ, ವ್ಯಾ. ಹನುಮಂತ ಶೆಟ್ಟಿ, ಕೊತ್ವಾಲ ಶೇಶ ಶೆರಿಗಾರ, ಕೆ. ರಾಮರಾವ್, ಮಂಜಯ ಶೆರಿಗಾರ, ಎ. ಎ. ಸಾಲಿನ್ಸ್, ಕೆ. ಆನಂದರಾವ್, ಆರ್. ಎಂ. ಅಂದ್ರಾದೆ ದಾನಾ ಮಾಡ್ತಿಸ್, ಕೆ. ಮಹಾಬಲ ಹೆಗಡೆ, ಪಿ. ಸಂಕು ಪೂಜಾರಿ, ಬಿ. ರಘುರಾಮ ಹೆಗಡೆ, ಐ. ಸದಾಶಿವ ಶೆಟ್ಟಿ, ಸಿ. ಮೋನಪ್ಪ ಹೆಗಡೆ, ಕೆ. ರುದ್ರಪ್ಪ ಶೆಟ್ಟಿ, ಕೆ. ರಾಮಯ್ಯ ಹೆಗಡೆ, ಹೆಚ್. ದೇವರಾವ್, ವಿ. ಗಣೇಶ ಶಂಕರರಾವ್, ಸೂಜೀರ್ ಸಂಜೀವರಾವ್, ಯು. ಗೋಪಾಲಕೃಷ್ಣಾಚಾರ್, ಕೆ. ಶ್ರೀನಿವಾಸ ರಾವ್, ಎಂ. ಪಿ. ದೇವರಾವ್, ಎಂ. ವೆಂಕಟ್ರಾವ್, ಯು. ನರಸಿಂಗರಾವ್, ಎನ್. ರಾಘವೇಂದ್ರ ಬಲ್ಲಾಳ.

(ಮುಂದರಿಸಲಾಗುವುದು)

Have you heard of THE GOLDEN SCHEME
OF
The Guardian of India Insurance Co., Ltd., Madras?

A scheme best suited for the middle and poor class who cannot insure for a large sum.

Another unique scheme is the **SPLENDID FAMILY PROTECTION POLICY** under which the interests of your wife and children are best safeguarded—by an immediate cash payment of ¼ of the insured amount if the assured dies and an annual pension of $\frac{1}{10}$ the insured amount to the wife till the expiry of the period of the policy and **then, the payment of the full insured amount** over and above the preceeding two benefits! If the assured survives the period of the policy, he gets the insured amount or a free paid-up policy for a large amount.

IS NOT THIS SCHEME AN IDEAL ONE FOR EVERY FAMILY MAN?

Full details can be had, without any obligation, from:—

V. D. Heranjal,
District Organizer,
MANGALORE.

OR FROM

M. T. Kordale & Co.,
Hampankatta,
MANGALORE.

ಹೊಸ ಪುಸ್ತಕ.

೧. **ನನ್ನ ಗೃಹಿಣಿ**:-(ಸೋಸಲ) ಪುಟ ೧೫೦; ಬೆಲೆ ೧೦ ಆಣೆ.
೨. **ಚೋದ್ಯಪುರದ ಚೋಜಿಗರಾಯ**:—(ಪೊಲಿಟಿಕಲ್) ಪುಟ ೪೩೨; ಬೆಲೆ ೨ ರೂ.
೩. **ಮೋಜಿನ ಜೀವನ**:—(ಡಿಟೆಕ್ಟಿವ್) ಪುಟ ೨೨೪; ಬೆಲೆ ೧—೪—೦ ರೂ.

ಇವುಗಳ ಜೊರತು ಸಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೆದಾರಿ ನಾವೆಲ್ಲುಗಳೂ, ಚರಿತ್ರೆ, ನಾಟಕ, ಪಾರಮಾರ್ಥಿಕ ಪುಸ್ತಕಗಳೂ ದೊರೆಯುತ್ತಿವೆ.

ಶ್ರೀ ಶೇಷಾಚಲ ಪ್ರೆಸ್ಸು,
ಪೋಸ್ಟು ಆನಂದವನ, (ಜಿ. ಧಾರವಾಡ.)

ಸೂಚನೆ:—ಆರ್ಡರು ಕಳುಹಿಸುವವರು 'ಕಂಠೀರವ' ಪತ್ರಿಕೆಯ ಹೆಸರು ಬರೆಯಬೇಕು.

ತೊನ್ನಿಗೆ ಅದ್ಭುತ ಔಷಧಿ

(ರಿಜಿಸ್ಟರ್ಡ್)

ಗುಣ ಜೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಟ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ಮೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಚಿ ಕ್ಯಾನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಟ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:—**ನಾನು ನಿಮ್ಮ ಅತ್ಯಾಶ್ಚರ್ಯ ಕುಷ್ಟರೋಗ ನಿರ್ಮೂಲಿನಿ** ಯನ್ನು ಇಬ್ಬರು ಕುಷ್ಟರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧ ಇಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಟ ರೋಗದ ಮೊಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಬೇಕು.
ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರೆ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಪೇರ್, ಆರ್. ಎಸ್. ಪೋಸ್ಟ್.

ಬಿಳೇ ತೊನ್ನು—

ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidiya Raj Akhila Kishori Ram,
No. 223, P. O., Katri Sarai. (GAYA).
8, 11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಆರ್. ಮಾರ್ಟಿನ್ಸರ

ಆಸ್ತಮೊಡಾಯನ್

ಈ ಪಮ್ಮು ಔಷಧವು ಬಹಳ ಕಾಲದಿಂದ ಉಪ್ಪುವಿಸಿದ ಪುಪ್ಪು ಅತಿ ಭಯಂಕರವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ಎಷ್ಟೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಶುಟ್ಟಿ ಮಾಡುತ್ತದೆ. ಈ ಔಷಧದ ಪೂರ್ಣ ಗುಣಸಿಕ್ಕಬೇಕಾದರೆ ಒಂದೇ ಬಾಟ್ಲಿ ಮುಸ್ಸು ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ಕೆಗೆಮುಳ್ಳೊಂಡವರಿಗೆ ಮೇಲೆ ವಿವರಿಸಿದ ಕಾಯಿಲೆಗಳು ಪುನಃ ಹೀಡಿಸು ವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0 12 ಬಾಟ್ಲಿಗಳಿಗೆ ಕ್ರಯ ರೂ. 13—8—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರೆಯರ್ ರೋಡ್,
ಫೋರ್ಟ್ ಮಾರ್ಕೇಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.

Head Office: **MADRAS.** { ESTABLISHED: 1906. } Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

THE TRAVANCORE NATIONAL BANK, LIMITED.

Head Office: ALLEPPEY.
London Agents: MIDLAND BANK LTD.

Bombay Office:—25-27, Church Gate Street, Fort, BOMBAY. MADRAS OFFICES: (1) 164, Broadway, (2) 183, Mount Road, (3) Luz-Corner, Mylapore & (4) Vepery (No. 1, Purasawalkam High Road).

BRANCHES EVERYWHERE IN SOUTH INDIA.

We have pleasure to announce that this Bank is now in a position to handle business on the following centres also:—

AGRA	CALCUTTA	HYDERABAD (Deccan)	LUCKNOW
AHMEDABAD	CAWNPORE	HYDERABAD (Sind)	RAICHUR
AMINABAD (Lucknow)	DACCA	JAMNAGAR	RANGOON
AMRITSAR	DELHI	KARACHI	SAMBHAR LAKE
AURANGABAD	GORAKHPORE	LAHORE	SECUNDERABAD

SURAT and other centres in Northern India.

ENQUIRIES SOLICITED.

Alleppey, 10th January 1936. K. C. Eapen, B. A., Managing Director.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. **ಕೋಲಿನ್ ವಾಟರ್** (ರಿ. ನಂ. ೧೪೭೭) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯೌಷಧ.

೨. **ಮುಸ್ಕ್-ಲವೆಂಡರ್**—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯುಳ್ಳ ಸೆಂಟು.

೩. **ಅನಂಸ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ರಿಲಿಯೆಂಟಾಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. **ದ್ರಾಕ್ಷಾಸವ**—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ್ಮು, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಅರಾಮೇತಿಹಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಪೈನ್-ಹಂಟರ್**—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕೂಡಿಯತಕ್ಕ ಔಷಧ.

೯. **ರಕ್ತಾಂಜನ ಹೇನ್ ಬಾಮ್**—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. **ಕ್ರೀಸೋರಿಂಗಾ**—ಕಪ್ಪು ಆಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. **ಪಿಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—

K. R. GURU, *Managing Director.*

ಡಿಸ್ಟ್ರಿಕ್ಟ ಬೋರ್ಡಿನ ಆಯ್ಯವಯ ಪಟ್ಟಿ

೧೯೩೬—೩೭.

(ಮುಂದುವರಿಸಿದುದು.)

ಪ್ರಾಥಮಿಕ ಶಿಕ್ಷಣ:—೧೯೩೫—೩೬ನ್ನಲ್ಲಿ ಪ್ರಾರಂಭದ ತಿಲುಕು ರೂ. ೧೪೪೬೦ ಎಂದು ಅಂದಾಜು ಮಾಡಿ ಇದ್ದರೂ ತಿದ್ದುಪಡಿ ಪಟ್ಟಿಯಲ್ಲಿ ರೂ. ೧೯೫೨೦ ಆಯಿತು. ಇದೆಲ್ಲ ವೆಚ್ಚ ಫಾಗಿ ೧೯೩೬—೩೭ಕ್ಕೆ ರೂ. ೪೩೬೬೦ ಹಿಂದಿನ ನಷ್ಟವೆಂದು ಎಣಿ ಸಲ್ಪಟ್ಟಿದೆ. ವಿದ್ಯಾಭ್ಯಾಸದ ತೆರಿಗೆಯಿಂದ ರೂ. ೫೨೨೦೦ ಅಂದಾಜು ಮಾಡಿದ್ದರೂ ವರ್ಷಾಂತ್ಯಕ್ಕೆ ರೂ. ೫೦೫೦೦ ಮಾತ್ರ ಜಮೆ. ಮುಂದಿನ ವರ್ಷಕ್ಕೆ ರೂ. ೫೧೯೦೦ ಎಂದು ಅಂದಾಜು ಮಾಡಿದೆ.

ಶಾಲಾ ಫೀಸಿನಿಂದ ರೂ. ೧೬೦೦೦ ಅಂದಾಜು ಮಾಡಿದ್ದರೂ ರೂ. ೪೪೪೦ ಕಡಿಮೆ ಜಮೆಯಾಗಿ ರೂ. ೧೧೫೬೦ ಮಾತ್ರ ವಸೂ ಲಾಗಿದೆ. ೧೯೩೬—೩೭ಕ್ಕೆ ರೂ. ೧೨೦೦೦ ಮಾತ್ರ ಜಮೆಯ ಅಂದಾಜು ಇದೆ. ಹೀಗೆ ಜಮೆ ಕಡಿಮೆಯಾಗಲಿಕ್ಕೆ ಕೆಳಗಿನ ೪ ದರ್ಜೆಗಳಲ್ಲಿ ಸಂಬಳ ಮಾಫಿ ಮಾಡಿದ್ದೂ ಮಕ್ಕಳ ಸಂಖ್ಯೆ ಕಡಿಮೆಯಾದದ್ದೂ ಕಾರಣವೆಂದು ತಿಳಿದುಬರುತ್ತದೆ. ಹಿಂದಿನ ತಾಲೂಕುಬೋರ್ಡುಗಳಲ್ಲಿ ಒಂದೊಂದು ರೀತಿಯಿತ್ತು. ಒಂದೆ ರಡು ಬೋರ್ಡುಗಳಲ್ಲಿ ಫೀಸು ೫ನೇ ದರ್ಜೆ ವರೆಗೆ ಮಾಫಿ ಯಾಗಿತ್ತು. ಫೀಸಿಲ್ಲದೆ ಶಿಕ್ಷಣ ಸಿಗಬೇಕಾದ ಧ್ಯೇಯವೇನೋ ನ್ಯಾಯವೇ ಸರಿ. ಆದರೆ ಕಡ್ಡಾಯಶಿಕ್ಷಣ, ಮಾಫಿಶಿಕ್ಷಣ ಎಂದು ದೊಡ್ಡ ದೊಡ್ಡ ಮಾತುಗಳನ್ನು ಉದ್ಘೋಷಿಸುತ್ತ, ನಮ್ಮ ಪ್ರವ್ಯಾನುಕೂಲ ನೋಡದೆ, ಮೆಂಬರರು ಸುಲಭವಾಗಿ ಕೀರ್ತಿ ಪಡೆಯುವ ಲವಲವಿಕೆ ತೋರಿಸಿದುದರ ಪರಿಣಾಮವಿದು.

ಸರಕಾರಿ ಗ್ರೆಂಟು ೩೭ನೇ ಸೆಕ್ಷನ್ ಮೇರೆಗೆ ಸಿಗಬೇಕಾ ಗುದು ಅಂದರೆ ವಿದ್ಯಾಭ್ಯಾಸದ ತೆರಿಗೆಯಷ್ಟಕ್ಕೆ ಸರಕಾರವು ಕೊಡುವ ಸಹಾಯಧನವು ರೂ. ೪೯೦೬೦ ಅಂದಾಜು ಇದ್ದರೂ ಸಿಕ್ಕಿದ್ದು ರೂ. ೪೮೪೬೦. ೧೯೩೬—೩೭ಕ್ಕೆ ರೂ. ೫೦೫೦೦ ಅಂದಾಜು ಮಾಡಿಯದೆ.

ಸರಕಾರದಿಂದ ಪ್ರತ್ಯೇಕವಾಗಿ ಸಿಗುವ ಧನವು ೧೯೩೫—೩೬ಕ್ಕೆ ರೂ. ೨೬೦೬೦೦ ಆಗಿದ್ದರೂ ರೂ. ೨೩೬೪೫೦ ಮಾತ್ರ ಸಿಕ್ಕಿತು. ಕೆಲವು ಶಾಲೆಗಳ ಬಗ್ಗೆ ಸಿಗುತ್ತಿದ್ದ ಸಬ್‌ಸಿಡಿ ಕಡಿಮೆ ಯಾದುದರಿಂದ ಈ ರೀತಿ ರೂ. ೩೨೫೦ ಕಡಿಮೆಯಾಯಿತು. ೧೯೩೬—೩೭ಕ್ಕೆ ರೂ. ೨೨೯೬೫೦ ಅಂದಾಜು ಮಾಡಿಯದೆ.

ರೂ. ೪ ರಂತೆ ತಾತ್ಕಾಲಿಕ ಬತ್ತೆಗಳ ಬಗ್ಗೆ ರೂ. ೨೪೯೦ ವಿಂಗಡಿಸಿದ್ದರೂ ರೂ. ೩೬೭೦೦ ಜಮೆಯಾಗಿತ್ತು. ಮುಂದಿನ ವರ್ಷಕ್ಕೆ ರೂ. ೨೪೯೦ ಆದಾಯವೆಂದು ಹಾರೈಸಿದೆ. ಈಗ ಸಂಗ್ರಹವಾಗಿ ಹೇಳುವುದಾದರೆ ೧೯೩೬—೩೭ಕ್ಕೆ

I	ವಿದ್ಯಾಭ್ಯಾಸದ ತೆರಿಗೆ	ರೂ.	೫೧೯೦೦
II	ಶಾಲಾ ಫೀಸು	,,	೧೨೦೦೦
III	ಸರಕಾರಿ ಗ್ರೆಂಟು	,,	೩೩೦೧೫೦
IV	ಬೋರ್ಡಿನ ಜನರಲ್ ಫಂಡಿನಿಂದ	,,	೨೪೯೦
V	ಸ್ಕೂಲ್ ಫೀಸು ನಷ್ಟದ ಬಗ್ಗೆ ಜನರಲ್ ಫಂಡಿನಿಂದ	,,	೪೬೦೦
		ರೂ.	೪೨೬೬೩೦

ವಸೂಲಾದ ಎಡ್ವಾನ್ಸ್ ಕೂಡಾ ೪೦೦೦, ರಿಫಂಡು ರೂ. ೧೦೦೦ ಕೂಡಾ ಸುಮಾರು ರೂ. ೪,೩೦,೦೦೦ಕ್ಕೆ ವಿಕ್ಕುತ್ತದೆ.

ಖರ್ಚಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಎಡ್ಯುಕೇಶನಲ್ ಆಫಿಸ ರರ ಸಂಬಳ ೧೯೩೫—೩೬ಕ್ಕೆ ೨೬೩೦ ಅಂದಾಜು ಮಾಡಿದ್ದರೂ ರೂ. ೨೩೭೦ ಖರ್ಚಾಗಿತ್ತು. ೧೯೩೬—೩೭ಕ್ಕೆ ಈಗಿನ ಆಫಿಸರರ ಸಂಬಳದ ದರ ಕಡಿಮೆಯಾದ್ದರಿಂದ ರೂ. ೧೯೬೦ ಮಾತ್ರ ಎಣಿಸಿದೆ. ಇಲ್ಲಿ ಒಂದೆರಡು ಎಡ್ಯುಕೇಶನಲ್ ಆಫಿಸರರ ಆವಶ್ಯಕತೆಯನ್ನು ಕುರಿತು ಒಂದೆರಡು ಮಾತು ಹೇಳಬೇಕಾಗಿದೆ. ಇವರು ಆಫೀಸಿನಲ್ಲಿ ಕುಳಿತು ಕೆಲಸಮಾಡುವುದಾದರೆ ಎಕೌಂಟು ಟೆಸ್ಟ್ ವಗೈರೆ ಪಾಸಾದ ಒಬ್ಬ ಹೆಡ್ ಗುಮಾಸ್ತರು ಇದ್ದರೆ ಸಾಲದೇ ಎಂದು ಹಲವರ ಅಭಿಪ್ರಾಯವಿದೆ. ಇವರಿಗೆ ಶಿಕ್ಷಣ ಸಂಬಂಧವಾದ ಕಾನೂನುಗಳ ಪರಿಚಯ ಮತ್ತು ಶಾಲಾ ಪರೀ ಕ್ಷೆಯ ಅನುಭವ ಇದ್ದು ಅವರು ಪ್ರೆಸಿಡೆಂಟರಿಗೆ ವಿದ್ಯಾಸಂಬಂಧ ವಾದ ತಜ್ಞಸಹಾಯವನ್ನು ಕೊಡುವವರಾಗಿದ್ದಾರೆ. ಹೆಲ್ತ್ ಇಂಜಿನಿಯರಿಂಗ್ ಇತ್ಯಾದಿ ಇಲಾಖೆಗಳಿಗೆ ತಜ್ಞರಿರುವಂತೆ ವಿದ್ಯಾ ಖಾತೆಗೂ ಒಬ್ಬ ತಜ್ಞರು ಬೇಕು. ಇತ್ತೀಚೆಗೆ ಹೊರಟ ಒಂದು ಸರಕಾರಿ ಹುಕುಮಿನ ಮೇರೆಗೆ ಇವರು ಫಕ್ಕನೆ ಶಾಲಾ ಸಂದರ್ಶಣೆ ಮಾಡಿ ಶಾಲಾಸ್ಥಿತಿ ವಗೈರೆ ಶೋಧನಮಾಡಬಹುದೆಂದು ಇದೆ. ಆದರೆ ತಿಂಗಳಿಗೆ ಇಂತಿಷ್ಟೆ ನಿರ್ದಿಷ್ಟ ದಿನಗಳಲ್ಲಿ ಇವರು ಸರ್ಕಿಟು ಮಾಡಬೇಕೆಂಬ ನಿರ್ಬಂಧವಿಲ್ಲ. ಆದರೆ ಇವರು ಆಗಾಗ ಸಂದಿ ಮೂಲೆಯ ಶಾಲೆಗಳಿಗೆ ಫಕ್ಕನೆ ಪ್ರವೇಶಿಸಿ ಶಾಲಾಸ್ಥಿತಿಯನ್ನು ನೋಡಿಕೊಳ್ಳುವ ಅವಶ್ಯವಿದೆ. ಇದಲ್ಲದೆ ಎಷ್ಟು ಶಾಲೆಗಳಲ್ಲಿ ಕ್ರಮವಾಗಿ ಮಕ್ಕಳ ಹಾಜರಿ ಹಾಕುವ ಅಭ್ಯಾಸವಿಲ್ಲ, ಎಲ್ಲಿ ಹಾಜರಿ ತೆಗ್ಗಿದೆ, ತಗ್ಗಲು ಕಾರಣವೇನು, ಎಂಬ ಹಲವು ವಿಚಾರ ಗಳನ್ನು ಶೋಧಿಸುವುದು ಆಗತ್ಯವಾಗಿದೆ. ಇದಲ್ಲದೆ ಸ್ವಭಾವ ಜನ್ಯವಾಗಿ ಶಾಲೆಗಳಲ್ಲಿ ಉಪಾಧ್ಯಾಯರೊಳಗೆ ಬರುವ ಜಗಳ ಗಳ ಇತ್ಯರ್ಥಕ್ಕೆ ಕೆಲವು ಸಲ ಪ್ರತ್ಯೇಕ ಸಿಬಂದಿಯೇ ಬೇಕಾ ದೀತೋ ಎಂಬ ಸಂದೇಹ ಬರುತ್ತದೆ.

ಉಪಾಧ್ಯಾಯರ ಸಂಬಳಕ್ಕೆ ೧೯೩೫—೩೬ನ್ನಲ್ಲಿ ರೂ. ೪೦೧೪೦೦ ಅಂದಾಜು ಮಾಡಿದ್ದರೂ ರೂ. ೪೦೬೦೦೦ ವೆಚ್ಚವಾ ಯಿತು. ೭೩ ಉಪಾಧ್ಯಾಯರನ್ನು ತೆಗೆದುಹಾಕಿದ್ದರಿಂದಲೂ ಉಪಾಧ್ಯಾಯರ ಸಂಬಳದಲ್ಲಿ ಹೆಚ್ಚಿಗೆ ೧ ಆಣೆ ಕಡಿಮೆ ಮಾಡುವ ನಿರೀಕ್ಷಣೆಯಿಂದಲೂ ರೂ. ೩,೫೪,೪೦೦ ಮಾತ್ರ ಅಂದಾಜು ಮಾಡಿತ್ತು. ಬೋರ್ಡು ವಿೂಟಿಂಗಿನಲ್ಲಿ ಅರ್ಧಾಣೆ ಮಾತ್ರ ಹೆಚ್ಚಿಗೆ ಕಡಿತ ಮಾಡಿದ್ದರಿಂದ ಇದಕ್ಕಿಂತಲೂ ಹೆಚ್ಚು ಹಣ ಬೇಕಾದೀತು.

ಈ ಇಲಾಖೆಯ ಬಗ್ಗೆ ಇದ್ದ ೪ ಗುಮಾಸ್ತರು ಸಾಕಾಗದ್ದ ರಿಂದ ೧೯೩೫-೩೬ರಲ್ಲಿ ಅಂದಾಜು ರೂ. ೪೫೦೦, ರೂ. ೪೪೬೦ ೬ ಗುಮಾಸ್ತರ ಬಗ್ಗೆ ಖರ್ಚಾಯಿತು. ೧೯೩೬—೩೭ಕ್ಕೆ ರೂ. ೪೪೬೦ನ್ನು ಪ್ರತ್ಯೇಕಿಸಿಟ್ಟಿದೆ.

ಉಪಾಧ್ಯಾಯರ ಪ್ರೊವಿಡೆಂಟ ಫಂಡಿನ ಬಗ್ಗೆ ರೂ. ೨೪೦೦೦ ಬೇಕಾಗುತ್ತದೆ.

ವರ್ಗಾವರ್ಗಿಯ ಪ್ರಯಾಣ ಬತ್ತೆಗೆ ರೂ. ೪೦೦ನ್ನು ವಿಂಗ ಡಿಸಿಟ್ಟಿದೆ.

ಶಾಲಾಮನೆಗಳ ಬಾಡಿಗೆಗೆ ರೂ. ೧೯೫೦೦ನ್ನು ೧೯೩೫-೩೬ನ್ನಲ್ಲಿ ವಿಂಗಡಿಸಿದ್ದರೂ ರೂ. ೨೦೪೬೦ ಸಂದಿತು. ೧೯೩೬-೩೭ಕ್ಕೆ ರೂ. ೧೯೫೦೦ನ್ನು ವಿಂಗಡಿಸಿದೆ. ಈ ಮೊಬಲಗು ಅತೀ ಹೆಚ್ಚು ಎಂದು ಹೇಳಬೇಕು. ಉಪಾಧ್ಯಾಯರ ಸಂಬಳದ ೧೧೫ನ್ನು ಬಾಡಿಗೆಗೆ ತೆರುವುದೆಂದರೆ ಇದು ಭಯಂಕರ ಅವಸ್ಥೆಯೇ ಸರಿ. ಇದರಲ್ಲಿ ಎಷ್ಟು ಶಾಲೆಗಳು ಗ್ರಾಮಸ್ಥರ ವಂತಿಗೆಯ ಸಹಾಯ ದಿಂದ ಕಟ್ಟಲ್ಪಟ್ಟು ಒಬ್ಬಿಬ್ಬರೆ ಬಾಯಿ ಗಟ್ಟಿದ್ದವರು ಬಾಡಿಗೆ ತಿನ್ನು ತ್ತಾರೆ, ಈ ಬಾಡಿಗೆ ಹಳ್ಳಿಯ ಕಟ್ಟಡದ ಖರ್ಚಿಗೆ ನ್ಯಾಯವಾದ ಬಾಡಿಗೆಯೊ, ಅಥವಾ ಖರ್ಚಿಗೆ ಹಳ್ಳಿಯ ಬಡ್ಡಿಯ ಧಾರಣೆ ವ್ಹಾಲಿಕರಿಗೆ ಸಿಗುತ್ತದೊ, ಸಾಹಸ ಮಾಡಿದರೆ ಎಷ್ಟು ಮಂದಿ ವಂತಿಗೆಯಿಂದ ಬಾಡಿಗೆಯಿಲ್ಲದೆ ಕಟ್ಟಿಕೊಡುವವರು ಇದ್ದಾರೆ ಎಂಬದರ ಕೂಲಂಕಷ ತನಖಿ ನಡಿಸಬೇಕು. ಬಾಡಿಗೆ ಸಲ್ಲುವ ಡಿಸ್ಟ್ರಿಕ್ಟ ಬೋರ್ಡ ಮೆಂಬರರಾದರೂ ಸ್ವಲ್ಪ ಉದಾರ ಬುದ್ಧಿ ಯನ್ನು ತೋರಿಸ್ಯಾರೇ, ಬಾಡಿಗೆಯ ದರವನ್ನು ತಗ್ಗಿಸುವ ವಿಷ ಯದಲ್ಲಿ ಪರೋಪಕಾರದೃಷ್ಟಿಯಿಂದ ಬೋರ್ಡಿನೊಳಕ್ಕೆ ಬಂದ ಕೊಂಗ್ರೆಸ ಪಕ್ಷದವರು ಎಷ್ಟರ ಮಟ್ಟಿಗೆ ಸಾಹಸ ಮಾಡ ಬಹುದು ಎಂಬದನ್ನು ನೋಡಲಿಕ್ಕೆ ಇದೆ.

ಖರ್ಚನ್ನು ೧೯೩೬—೩೭ಕ್ಕೆ ಮಾಡಿದ ಅಂದಾಜಿನ ಮೇರೆಗೆ:—

ಎಡ್ಯುಕೇಶನಲ್ ಆಫಿಸರ್	ರೂ.	೧೯೬೦
ಉಪಾಧ್ಯಾಯರ ಸಂಬಳ	,,	೪೫೪೪೦೦
ಗುಮಾಸ್ತರು ಇತ್ಯಾದಿ	,,	೪೫೬೦
ಪ್ರೊವಿಡೆಂಟ ಫಂಡು	,,	೨೪೦೦೦
ಪ್ರಯಾಣದ ಬಗ್ಗೆ	,,	೪೦೦
ಬಾಡಿಗೆ	,,	೧೯೫೦೦
ಸಾದಿಲವಾರು	,,	೧೪೦೦೦
ಕುರ್ಚಿ ಬೆಂಚು ವಗೈರೆ	,,	೨೦೦೦
ಪುಸ್ತಕಭಂಡಾರ ವಗೈರೆ	,,	೯೦೦
ಕಟ್ಟಡಗಳ ದುರುಸ್ತಿ	,,	೪೦೦೦
ಪಂಚಾಯತುಗಳಿಗೆ ಸಹಾಯಧನ	,,	೧೧೪೦
ಎಡ್ವಾನ್ಸು	,,	೪೦೦೦

ಜುಮಲಾ ಸುಮಾರು ರೂ. ೪,೪೦,೦೦೦ಕ್ಕೆ ವಿಕ್ಕಿಹೋಗುತ್ತದೆ. ಹೀಗಾಗಿ ರೂ. ೪೪೬೨೦ ನಷ್ಟವನ್ನು ಭರ್ತಿಮಾಡಬೇಕಾಗಿದೆ. ಇದು ಬಹಳ ಶೋಚನೀಯ ಸಂಗತಿ. ಈಗ ಉಪಾಧ್ಯಾಯರ ಸಂಬಳದಲ್ಲಿ ೧॥ ಆಣೆಯಂತೆ ಕಡಿತವು ಕಾಯಮಾಗಿ ನಿಲ್ಲಬೇಕೊ, ಅಥವಾ ಸಬ್ಸಿಡಿ ಹಣವು ಸಮುದಾಯವಾಗಿ ಸಿಗುವ ಏರ್ಪಾಡು ಆದ ನಿಮಿತ್ತ, ಆದಕ್ಕೆ ಬಾಧೆ ಬಾರದಂತೆ, ಮತ್ತು ಶಾಲೆ ನಡಿಯುವುದಕ್ಕೆ ಸೌಕರ್ಯಗಳು ಇಲ್ಲದ್ದಲ್ಲಿ ಬರೀ ಪರೋಪ ಕಾರಬುದ್ಧಿಯಿಂದ ಹಣ ದುರ್ವ್ಯಯಮಾಡುವ ಬದಲಾಗಿ ಇನ್ನು ಕೆಲವು ಶಾಲೆಗಳನ್ನು ತೆಗೆದುಹಾಕಿ ಅಥವಾ ಖಾಸಗಿ ಶಾಲೆಗಳಾಗಿ ವ್ಯಾಪರ್ತಿಸಿ ಹಣ ಉಳಿತಾಯ ಮಾಡುವುದು ಶ್ರೇಯಸ್ಕರವೊ ಎಂಬದು ವಿಚಾರಾರ್ಹವಾಗಿದೆ. ಇದರಿಂದ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತದೆ ಎಂಬುದೇನೊ ನಿಜ. ಆದರೆ ಈ ಉಪಾಧ್ಯಾಯರ ಬೆನ್ನ ಮೇಲೆ ಚಾಟಿಯನ್ನು ತಿರುಗಿಸುತ್ತ ಓಡ್ಯಾಡುವ ಸಿಬಂದಿ ಸಾಕಷ್ಟು ಇಲ್ಲದಾಗ, ಈ ಉಪಾಧ್ಯಾಯ ರಲ್ಲಿ ಕರ್ತವ್ಯಬುದ್ಧಿ ಇನ್ನೂ ಜನಿಸದಿದ್ದಾಗ ಅವರ ಅಶ್ರದ್ಧೆಯ ಪಾಪಕ್ಕೆ ಅವರು ಉದ್ಯೋಗನಿವೃತ್ತಿಯಿಂದ ಪ್ರಾಯಶ್ಚಿತ್ತ ಮಾಡುವುದು ನ್ಯಾಯವಲ್ಲವೇ? ತಾನು ಸರ್ಕಿಟು ಮಾಡಿದ ಕಾಲದಲ್ಲಿ ನೋಡಿದ ಹಲವು ಶಾಲೆಗಳ ಮೇಲೆ ಹಣ ದುರ್ವ್ಯಯ ಮಾಡುವ ಬದಲಾಗಿ ನಿರ್ನಾಮವಾಗುವುದೇ ಲೇಸು ಎಂದು ಪ್ರೆಸಿಡೆಂಟರು ಉದ್ಗಾರ ತೆಗೆಯುತ್ತಾರೆ. 'ಕೊಡೋದು ಕೊಡಿ, ಅಡಿಗೆಮನೆಗೆ ಹೋಗುತ್ತೇನೆ' ಎಂದು ಹೇಳುವ ಬಾಣಸಿಗನಂತೆ ಕೆಲಸ ಮಾಡುವ ಉಪಾಧ್ಯಾಯರು ಇದ್ದರೇನು? ಇಲ್ಲದಿದ್ದರೇನು?

ಹೊಟ್ಟೆ ಮತ್ತು ಪಿತ್ತಕೋಶ ಗಳ ಎಲ್ಲ ಬಗೆಯ ಬೇನೆ ಗಳಿಗೂ ಅಲೆಂಬಿಕ್ ಫ್ರೂಟ್ ಲ್ಯಾಕ್ಸೆಟಿವ್ ಸೇವಿಸಿ.

ಫ್ರೂಟ್ ಲಾಕ್ಸೆಟಿವ್

ಪ್ರತಿದಿನವೂ ಉಪಯೋಗಿಸಿ

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್. ಮುಂಬಯಿ ಬರೂದಾ ಮದರಾಸು

THE NEDUNGADI BANK, LIMITED.

ದಿ ನೆಡುಙಾಡಿ ಬೇಂಕ್, ಲಿಮಿಟೆಡ್,

ಹೆಡ್ ಆಫೀಸ್:—ಕಲ್ಲಿಕೋಟೆ.

ಯಾವತ್ತೂ ಬಗೆಯ ಬೇಂಕಿಂಗಿನ ವಹಿವಾಟುಗಳು

ಆಕರ್ಷಣೀಯವಾದ ದರಗಳು.

ಐದು ರೂಪಾಯಿಗಳ ಒಂದೇ ನೋಟು ಒಂದು ಸೇವಿಂಗ್ಸ್ ಬೇಂಕ್ ಎಕೌಂಟನ್ನು ತೆರೆಯುತ್ತದೆ.

ಇಂದೇ ಅದನ್ನು ಆರಂಭಿಸಬಾರದೆ?

ನಿರಖು ಠೇವಣಾತಿ.

3 ತಿಂಗಳ ಠೇವಣಾತಿಯ ಮೇಲೆ ವರ್ಷಕ್ಕೆ 3½% | 12 ತಿಂಗಳ ಠೇವಣಾತಿಯ ಮೇಲೆ ವರ್ಷಕ್ಕೆ 6 %

6 ,, ,, ,, ,, 5½% | 24 ,, ,, ,, ,, 6½%

ಸೇವಿಂಗ್ಸ್ ಬ್ಯಾಂಕ್ 4½%ಯಂತೆ. ಚಾಲ್ತಿ ಲೆಕ್ಕ 2½%ಯಂತೆ.

"ನಸುನಗೆಯೊಡನೆ ನಿಮ್ಮ ಸೇವೆ."

DIAMONDS! DIAMONDS!

BEST BRILLIANCY!

K. R. K. SHET.

Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್ಸ್ಟ್ಡವ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಳ್ಳೆಯ ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶ್ಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಅಪೂರ್ವ ಲಾಭ! ಒಳ್ಳೇ ಸಮಯ!! ತೀರಾ ಬೆಲೆ ಕಡಿಮೆ!!!

ಜಾತಕ ಪತ್ರಿಕೆ.

ಕ್ರಯ ರೂ. ೨-೦-೦.

ತಮ್ಮ ತಮ್ಮ ಮನೆಯಲ್ಲಿ ಜನಿಸಿರುವ ಬಾಲಕರ ಹುಟ್ಟಿದ ಸಂವತ್ಸರ, ಮಾಸ, ತಿಥಿ, ವಾರ, ಜನನವೇಳೆಯನ್ನು ಬರೆದು ಕಳಿಸಿದರೆ ನಾವು ಜನನ ಕಾಲವನ್ನು ಸ್ಥಿರ ಮಾಡಿಕೊಂಡು ಜನ್ಮಲಗ್ನ ಕುಂಡಲಿ ಅಂಶಕುಂಡಲಿ ದಶನಿರ್ಣಯ ಮೊದಲಾದ ಗಣಿತಗಳನ್ನು ಮಾಡಿಕೊಂಡು ಮೊಗುವಿಗೆ ನಕ್ಷತ್ರ ದೋಷ, ಬಾಲಾರಿಷ್ಟ ದೋಷವನ್ನು ಶೋಧಿಸಿ, ಇದ್ದರೆ ಶಾಂತಿಮಾಡುವ ಕ್ರಮ, ಮೊಗುವಿಗೆ ಜನನಾದಿಯಾಗಿ ಆಯುಷ್ಯದ ಪರಿಗೂ ಇಪ್ಪತ್ತೆನೇ ವರುಷಗಳಲ್ಲಿ ಉಂಟಾಗುವ ಬಾಲಾರಿಷ್ಟ ನೈಲಿ ದಡಾರ ಮುಟ್ಟುದೋಷ ಕಾಮಿಲೆ ಯಾವತ್ತು ಪೀಡೆಗಳ ವಿಷಯವನ್ನು ಯಾವ ಮೂಲಕ ಉಂಟಾಗುವ ಕಂಟಕಗಳ ವಿಷಯವನ್ನು ತಂದೆ ತಾಯಿಗೆ ಉಂಟಾಗುವ ಪೀಡೆ ವಿಷಯವನ್ನು ಬರೆದು ಜಾತಕ ಪತ್ರಿಕೆಯನ್ನು ತಯಾರುಮಾಡಿ ಕಳಿಸುತ್ತೇವೆ. ಪ್ರತಿ ಒಬ್ಬರು ತಮ್ಮ ತಮ್ಮ ಮಕ್ಕಳ ಜಾತಕ ಪತ್ರಿಕೆಯನ್ನು ಬರೆಯಿಸಿ ಮನೆಯಲ್ಲಿ ಇಟ್ಟುಕೊಂಡರೆ ಮುಂದೆ ಆ ಮಕ್ಕಳ ವಿವಾಹ ಮುಂತಾದ ಸಮಸ್ತ ಕಾರ್ಯಗಳಿಗೆ ಬಹಳ ಅನುಕೂಲವಾಗುತ್ತೆ. ಪ್ರತಿ ಒಬ್ಬರು ತಮ್ಮ ಮಕ್ಕಳಿಗೆ ಬರೆಯಿಸಿ ಇಟ್ಟುಕೊಳ್ಳುವ ದೆಶೆಯಿಂದ ಚಾರ್ಜನ್ನು **ಬಹಳೇ ಕಡಿಮೆ** ಇಟ್ಟಿರುತ್ತದೆ. ಅಲ್ಲದೆ ಈ ಜಾತಕ ಪತ್ರಿಕೆಗಳಿಂದ ಬಂದ ಹಣದಲ್ಲಿ ಕೆಲವು ಭಾಗ ಹಣವನ್ನು ಇಲ್ಲಿ ಸ್ಥಾಪಿಸಿರುವ ಶ್ರೀ ಪಂಚಮ ಜಾರ್ಜ ಸ್ಮಾರಕದ ಪಾಠಶಾಲಾಕ್ಕೆ ಏರ್ಪಡಿಸಿರುತ್ತೇವೆ. ಬಾಲಕರ ಎಲ್ಲಾ ಪೀಡೆಗಳ ಪರಿಹಾರದ ಉದ್ಧರಣೆಯನ್ನು ಕ್ರಯವಿಲ್ಲದೆ ಕಳಿಸುತ್ತೇವೆ. ಉದ್ಧರಣೆ ಸಹಿತ ಜಾತಕ ಪತ್ರಿಕೆಗೆ ಚಾರ್ಜು ರೂ. ೨-೦-೦.

ವಿಳಾಸ:— ಮೇನೇಜರ್,
ಟಿ. ಹೆಚ್. ಎಂ. ಅಂಡು ಕೊ.,
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಪ್ರತ್ಯಕ್ಷಫಲ ಪಂಚ ಸಿದ್ಧಿ

ಇದು ರಾಯಚೂರು ಭೀಮಾವಧೂತರು

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಸಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಿ ಮಾಡಿಕೊಂಡು ಬರೆದಿರುವರು.

೧-ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ ಮಂತ್ರ ಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳ ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨-ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು, ವ್ಯಾಪಾರ ವೃದ್ಧಿ, ದಾರಿದ್ರ್ಯ ನಿವಾರಣ, ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩-ನೇದು ಜ್ಯೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜ್ಯೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪-ನೇದು ಔಷಧ ಪ್ರಕರಣದಲ್ಲಿ ಯಾವಯಾವ ಗಿಡಮೂಲಿಕೆಗಳಿಂದ ಯಾವಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾಜಿಗಳ ಚುಟ್ಟಾ ಸಹ ಇದರಲ್ಲಿ ಉಂಟು. ಇದು ಪ್ರತಿಯೊಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿವಾಸವು ತಿಳಿಸಿರುವರು.

೫ನೇದು ಯಂತ್ರಪ್ರಕರಣದಲ್ಲಿ ವಶೀಕರಣ, ಗ್ರಹಪೀಡಾ ನಿವಾರಣ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನೂ ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ, ದ್ರವ್ಯಗಳೂ ವೈದ್ಯರೂ, ಜ್ಯೋತಿಷ್ಯರೂ, ಮಾಂತ್ರಿಕರೂ, ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾ ಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರಾ ಕಡಿಮೆ ಮಾಡಿ ಇರುವೆವು. ಬೆಲೆ ಎರಡು ರೂಪಾಯಿ, ಟಪಾಲು ಹಾಸಲು ಸೇರಿ. ಸಮ್ಮ ವಿಳಾಸ:—

ಕೆ. ಸುಬ್ರಮಣ್ಯ ಪ್ರಭು,
ಶ್ರೀ ವೆಂಕಟೇಶ್ವರ ಬುಕ್ ಡಿಪೋ, ಬಳ್ಳಾರಿ.

3 ಚಿಹ್ನೆಗಳು ಗುರುತು ಹಿಡಿಯಲಿಕ್ಕೂ ಇವೇ ಎಂದು ನೀವು ನಿಶ್ಚೈಸಲಿಕ್ಕೂ

● ತಾಜಾ ಸಾಧನವಾದ ಎವರೆಡಿ ಯುನಿಟ್ ಸೆಲ್ಲುಗಳೇ—ಪ್ರಪಂಚದಲ್ಲಿ ಉತ್ಕೃಷ್ಟ—ನಿಮಗೆ ದೊರಕಿದುದೆಂದು ಖಚಿತಮಾಡಿಕೊಳ್ಳಿ. ಗುರುತಿನ 3 ಚಿಹ್ನೆಗಳಿಗಾಗಿ ನೋಡಿ. ನಕಲಿ ಸಾಮುಗ್ರಿಗಳನ್ನು ತಿರಸ್ಕರಿಸಿ. ಇದುವರೆಗಿನ ಯಾವತ್ತು ಫ್ಲಾಶ್ ಲೈಟ್, ಬ್ಯಾಟರಿಗಳಿಗಿಂತಲೂ ಎವರೆಡಿ ಯುನಿಟ್ ಸೆಲ್ಲುಗಳು ಹೆಚ್ಚು ಶುಭ್ರಪ್ರಕಾಶವೂ ಹೆಚ್ಚು ಬಾಳಿಕೆಯೂ ಇವೆ.

ಫ್ಯಾಕ್ಟರಿ ಪ್ರತಿನಿಧಿಗಳು: ಡೋಜ್ ಎಂಡ್ ಸೈನೂರ್, ಲಿಮಿಟೆಡ್, ಕಲ್ಕತ್ತಾ, ಬೊಂಬಾಯಿ, ಮದ್ರಾಸು, ಕರಾಚಿ, ಲಾಹೋರು, ಡಿಲ್ಲಿ

ಕೇರಳದ ಸಾಬೂನುಗಳು

ಪೂರ್ಣವಾಗಿಯೂ ಅವು ಸ್ವದೇಶಿಯಾದುದರಿಂದಲೇ ನೀವು ಉಪಯೋಗಿಸಿರೆನ್ನುವುದಲ್ಲ; ಅವೇ ಉತ್ಕೃಷ್ಟವಾದುವು. ಅವು ಉತ್ಕೃಷ್ಟವಾದ ಸಾಧನಗಳಿಂದ, ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:—ಆರ್. ಸಿ. ದಲಾಲ್, ಕಲ್ಲಿಕೋಟೆ.

WANTED

In the South Kanara District young and ambitious men on very liberal terms, to represent the BHARAT INSURANCE COMPANY, LTD., LAHORE. An excellent opportunity to earn a decent living.

Apply to:—

DUTT & CO., *Chief Agents,* KARWAR.

ಕಳೆದ ವಾರ

ಪಂಡಿತ ಜವ್ಹರಲಾಲರವರೂ, ನಿರುದ್ಯೋಗವೂ.

ನಮ್ಮ ಪಂಡಿತರು 'ಡಿಪ್ಲೊಮೇಟ್'ರಲ್ಲ; ಅವರ ಮಾತು ಯಾವಾಗಲೂ ಕಣ್ಣಿಗೆ ಕೈ ಹಾಕಿದಂತೆ. ಸಂಯುಕ್ತ ಪ್ರಾಂತದ ರಾಜಕೀಯ ಮಹಾಸಭೆಯಲ್ಲಿ ನಿರುದ್ಯೋಗದ ಠರಾವನ್ನು ಸಮರ್ಥಿಸುವಾಗಲೂ ಅವರು ಹಾಗೇ ಮಾತಾಡಿದರು,—ಸ್ವಲ್ಪ ನಿಷ್ಠುರವಾಗಿ; ಕೊಂಚ ಕಠಿನವಾಗಿ. ಅವರಾಡಿದುದರಲ್ಲಿ ತಪ್ಪೇನೂ ಇರಲಾರದು. ಆದರೆ ನಿಷ್ಠುರದ ಈ ನುಡಿಗಳಿಗೆ ಅಧಿಕಾರಿಗಳು ಕಿವಿ ಕೊಡುವ ಭರವಸೆ ಇಲ್ಲ. ನಿರುದ್ಯೋಗವು ದಿನೇ ದಿನೇ ಮಹಾಮಾರಿಕಾ ಉಪದ್ರವದಂತೆ ಬೆಳೆದುಬರುತ್ತಿದೆ; ಅದರ ನಿವಾರಣೆಗಾಗಿ ಶೀಘ್ರಗತಿಯ, ವಿಸ್ತಾರಪ್ರಮಾಣದ ಉಪಾಯಗಳೇನನ್ನೂ ಇನ್ನೂ ಕೈಕೊಂಡಿಲ್ಲ. ನಮ್ಮ ಪ್ರಭುತ್ವಕ್ಕೆ ಈ ವಿಷಯದಲ್ಲಿ ನಮ್ಮ ಮೇಲೆ ಕನಿಕರವೇನೋ ಉಂಟು. ಆದರೆ ಈ ಸಹಾನುಭೂತಿಯ ಸತ್ಪರಿಣಾಮವೇನು? ಸಪ್ರೂಗಳ ಕೈವಾಡವಾದ ಆ ವರದಿ ನಮ್ಮ ಭಾರತದ ನಿರುದ್ಯೋಗಿಗಳಿಗೆ ಎಷ್ಟು ಮಟ್ಟಿಗೆ ಅನ್ನ ಕೊಡುವುದೋ ತಿಳಿದಿಲ್ಲ. ಅದು ನಮ್ಮ ಪ್ರಭುತ್ವಕ್ಕೇ ಗೊತ್ತು!

* * * * *

ನಿರುದ್ಯೋಗವು ವಿದೇಶಗಳಲ್ಲಿಯೂ ಬೇಕಾದಷ್ಟಿಲ್ಲವೆ?

ಇದೆ. ಆದರೆ ಆ ಸರಕಾರಗಳೇನು ಮಾಡುತ್ತಿವೆ? ನಿರುದ್ಯೋಗಿಗಳಿಗೆ, ಒಂದೋ, ಉದ್ಯೋಗಗಳನ್ನು ಕಲ್ಪಿಸಿ ಕೊಡುತ್ತಿವೆ; ಅಥವಾ ಅವರಿಗೆ ಅನ್ನವಸ್ತ್ರಗಳನ್ನು ಒದಗಿಸಿಡುತ್ತಿವೆ. ಆ ರೀತಿ ಮಾಡದಿದ್ದರೆ, ಆ ಸರಕಾರಗಳ ರಾಜ್ಯಭಾರದ ರಥ ಸಾಗದಂತೆ ಪ್ರಜೆಗಳು ತಡೆಕಟ್ಟುವರು. ಇಲ್ಲಿಯಾದರೆ ಅಂತಹ ಭಯವೇನೂ ಇಲ್ಲ. ಪ್ರಜೆಗಳ ಮಾತಿಗೆ, ಅನೇಕ ವೇಳೆ, ಮಾನ ದೊರೆಯುವುದಿಲ್ಲ. ದೊರಕಿದರೂ ವರಹದಲ್ಲಿ ಕಾಸಿನಷ್ಟು. ಮಿಕ್ಕ ಮಾತಂತಿರಲಿ; ಇಂಡಿಯದಲ್ಲಿ ಈಗ ನಿರುದ್ಯೋಗಿಗಳ ಸಂಖ್ಯೆ ಎಷ್ಟಿದೆ? ಅದೇನು, ಪ್ರತಿ ತಿಂಗಳಲ್ಲಿ ಹೆಚ್ಚುತ್ತಿದೆಯೇ? ಕಡಿಮೆಯಾಗುತ್ತಿದೆಯೇ? ಈ ಲೆಕ್ಕವನ್ನಾದರೂ ಕಂಡವರಿದ್ದಾರೆಯೇ? ಮಾತೆತ್ತಿದರೆ, 'ಅಮೆರಿಕದಲ್ಲಿ ಶಿಕ್ಷಣಕ್ರಮ ಹೀಗಿದೆ; ಇಂಗ್ಲೆಂಡಿನಲ್ಲಿ ಚುನಾವಣೆಯ ಪದ್ಧತಿ ಹಾಗಿದೆ' ಎಂದು ಅದೇ ಪಾಶ್ಚಾತ್ಯ ಕ್ರಮಗಳನ್ನೇ ಇಲ್ಲಿಯೂ ಆಚರಣೆಗೆ ತರಲು ಒತ್ತಾಯವಡಿಸುತ್ತಿರುವವರು ಅನೇಕ ಮಂದಿ; ಆದರೆ ಅವರು ಈ ವಿಷಯದಲ್ಲಿ ಮಾತ್ರ ಸುಮ್ಮನಿದ್ದಾರೆ, ಏಕೆ?

* * * * *

ಬ್ರಿಟಿಶ್ ಬಜೇಟಿನ ರಹಸ್ಯದ ಕುರಿತು, ವಿಚಾರಣೆ ನಡೆದು

ಆ ನ್ಯಾಯಾಧೀಶರ ಮಂಡಲಿಯು ಕೊಟ್ಟ ತೀರ್ಮಾನವು ಸ್ಪಷ್ಟವಾಗಿಯೂ, ಖಂಡಿತವಾಗಿಯೂ ಇದ್ದಿತಾದರೂ, ಎಟೊರ್ನಿ ಜನರಲರವರು ಮಿ. ಥೋಮಸರವರ ಮೇಲೆ ಕ್ರಿಮಿನಲ್ ಕ್ರಮಗಳನ್ನು ಜರುಗಿಸುವಲ್ಲಿ ಫಲವಿಲ್ಲವೆಂದು ಸಂದೇಹವನ್ನು ತಂದೊಡ್ಡಿದರು. ಇದರಲ್ಲಿ ಎಟೊರ್ನಿ ಜನರಲರವರ ವಿಶೇಷವಾದ ಕಾನೂನಿನ ಪಾಂಡಿತ್ಯಕ್ಕೆ ಮನ್ನಣೆ ಸಲ್ಲಬೇಕು; ನಿಜ. ಆದರೆ ಸಾಕ್ಷ್ಯಗಳ ಮೇಲಿಂದ ತೀರ್ಮಾನ ಮಾಡಿದ, ಆ ಪ್ರಸಿದ್ಧ ವಕೀಲರ ಅಭಿಪ್ರಾಯದ ಮೇರೆಗೆ ಕೂಡ, ಕ್ರಿಮಿನಲ್ ಕ್ರಮಕ್ಕೆ ದಾರಿ ಇಲ್ಲದೆ ಹೋಯಿತೆಂದರೆ—ಅದೀಗ ಆಶ್ಚರ್ಯ!

* * * * *

ಬಂಗಾಳದ ಭಯೋತ್ಪಾದಕರ ಚಳವಳಿದ ಕಾನೂನಿನಂತೆ

ಕೆಳ ಕೋರ್ಟಿನಲ್ಲಿ ೬-೭ ವರ್ಷಗಳ ದಂಡನೆಗೆ ಗುರಿಯಾಗಿದ್ದ ಎರಡು ಮೊಕದ್ದಮೆಗಳ ಮಿಡ್ನಾಪುರದ ಅಪರಾಧಿಗಳು ಹೈಕೋರ್ಟಿಗೆ ಅಪೀಲ್ ಮಾಡಲು, ನ್ಯಾಯಾಧೀಶರು ರುಜುವಾತು ಸಾಲದೆಂದು, ಅಪರಾಧಿಗಳನ್ನು ಬಿಟ್ಟುಬಿಟ್ಟರು. ನ್ಯಾಯಸ್ಥಾಪನೆಯ ಕಾರ್ಯವನ್ನು ಸುಸೂತ್ರವಾಗಿ ಸಾಗಿಸಿ, ಜನತೆಯ ಶ್ಲಾಘನೆಗೆ ಪಾತ್ರರಾದರು. ಆದರೆ ಈ ವಿಷಯದಲ್ಲಿ ಮೊಕದ್ದಮೆ ಹೂಡಿದ ಪೊಲೀಸರ ಚಾತುರ್ಯಕ್ಕೂ, ಆಲೋಚನೆ ಹೇಳಿದ ಸರಕಾರೀ ವಕೀಲರ ಕಾನೂನಿನ ಪಾಂಡಿತ್ಯಕ್ಕೂ ಏನೆನ್ನಬೇಕು? ಹಾಗೂ, ಕೆಳ ಕೋರ್ಟುಗಳಲ್ಲಿ ಶಿಕ್ಷೆವಿಧಿಸುವ ತೀರ್ಮಾನಗಳನ್ನು ಬರೆದ ಸುಜ್ಞಾನಿಗಳಾದ ಮ್ಯಾಜಿಸ್ಟ್ರೇಟರ ವಿಷಯದಲ್ಲಿಯಾದರೂ ನಾವು ಹೇಗೆಂದು ಭಾವಿಸಬೇಕು? ಈಗ ನಿರಪರಾಧಿಗಳೆಂದು ಪರಿಗಣಿತರಾದ ಆ ಅಪರಾಧಿಗಳು ಇದುವರೆಗೆ ಸಹಿಸಿದ ಕಷ್ಟಕ್ಲೇಶಗಳಿಗೆ ಯಾರಿಂದಾದರೂ ಪರಿಹಾರವೇನಾದರೂ ಇದ್ದೀತೇ?

* * * * *

ಒಟ್ಟಾವಾ ಕರಾರಿನ ವಿಸರ್ಜನೆಯಾಯಿತು.

ಇನ್ನು ನಮಗೆ ಹೊಸ ಕರಾರು. ಅದು 'ಬ್ರಿಟನಿಗೂ, ಇಂಡಿಯಕ್ಕೂ ಪರಸ್ಪರ ಪ್ರಯೋಜನಕ್ಕೆ ಬೀಳುವಂತದು' ಎಂದು ವ್ಯಾಪಾರದ ಸಂಘದ ಪ್ರೆಸಿಡೆಂಟರಾದ ಮಿ. ರನ್ಸಿಮ್ಯಾನರು ಅಭಯ ಹೇಳಿ, ಲಂಕಾಶಹರಿನವರಿಗೆ ಸಮಾಧಾನಮಾಡಿದ್ದಾರೆ. ಆ ಹೊಸ ಕರಾರೀಗ ಗರ್ಭವಾಸದಲ್ಲಿದೆ. ಪ್ರಕೃತ, ಈ ಕರಾರಿಗೆ ಪೊದಲು, ಜಪಾನಿಗೂ ನಮಗೂ ಒಂದು ವ್ಯಾಪಾರದ ಸಂಧಾನಪತ್ರವಾಗಲಿದೆ. ಅದಾದ ಒಳಿಕ, ಇಂಡಿಯಾ ಸರಕಾರದ ವಾಣಿಜ್ಯಶಾಖೆಯ ಕಾರ್ಯದರ್ಶಿಗಳಾದ ಮಿ. ಸ್ಟುವರ್ಟರು ನಮ್ಮ ವ್ಯಾಪಾರಪ್ರಪಂಚದ ವಿಧಾತರಾಗಿ, ಲಂಡನಿಗೆ ತೆರಳಿ, ಅಲ್ಲಿ ಇಂಡಿಯಾ—ಜಪಾನಿನ ವ್ಯಾಪಾರದ ಕರಾರನ್ನು ವಿೂರಿಸುವುದೊಂದು ಹೊಸ ಕರಾರನ್ನು ಹೊಸೆಯಲು ಸಹಾಯ ಮಾಡುವರು. ಆದರೆ ಆ ಕರಾರು ಇಂಡಿಯದ ಹಿತಕ್ಕೋ, ಲಂಕಾಶಹರಿನವರ ಉದ್ಧಾರಕ್ಕೋ ಎಂದು ಮಾತ್ರ ನೋಡಬೇಕಾಗಿದೆ.

* * * * *

ನಮ್ಮ ಚಕ್ರವರ್ತಿಗಳಾದ ಎಡ್ವರ್ಡ್ ಮಹಾಪ್ರಭುಗಳವರ

ಜನ್ಮಮಹೋತ್ಸವದ ಆಚರಣೆಯು ಇಂದು, ಪ್ರಥಮ ಬಾರಿಯಾಗಿ, ಸಾವಯ್ರಾಜ್ಯದಲ್ಲೆಲ್ಲಿಯೂ ಸಂಭ್ರಮಪೂರ್ವಕವಾಗಿ ನಡೆಯಲಿದೆ. ದೇವಾಂಶಸಂಭೂತರೇ ಅರಸರೆಂದು ನಂಬಿರುವ ನಮ್ಮ ಭಾರತಭೂಮಿಯ ರಾಜಭಕ್ತ ಪ್ರಜೆಗಳಾದರೂ,

ಈ ಮಹೋತ್ಸವದಲ್ಲಿ ಭಕ್ತಿಭಾವದಿಂದ ಸಹಭಾಗಿಗಳಾಗಿ, ಇಂದು ನಮ್ಮ ಪ್ರಭುಗಳ ದೀರ್ಘ ಆಯುರಾರೋಗ್ಯಕ್ಕಾಗಿ, ರಾಜಕುಟುಂಬದ ಶ್ರೇಯಸ್ಸಿಗಾಗಿ ಜಗದೀಶ್ವರನಲ್ಲಿ ಪ್ರಾರ್ಥಿಸುವರು. ಅವರ ಆಳಿಕೆಯು ಸಾವಾಜ್ಯದ ಪ್ರಜೆಗಳಿಗೆಲ್ಲ ಶುಭಪ್ರದವಾಗಿರುವಂತೆ ಹಾರೈಸುವರು. ತಥಾಸ್ತು!

* * * * *

ಇಟಲಿಯ ಮೇಲಿನ ಸ್ಯಾಂಕ್ಶನುಗಳಿಗೆ

ಇನ್ನು ಅಪ್ಪಣೆಯೇ? ಅದೇ ವಾಸಿಯೆಂದು ಬ್ರಿಟಿಶ್ ಪ್ರಭೃತಿಗಳಲ್ಲಿ ಹಲವರ ಅಭಿಪ್ರಾಯ. ಲಾರ್ಡ್ ಸಿಸಿಲ್‌ನಂತವರು ಮಾತ್ರ 'ಸ್ಯಾಂಕ್ಶನುಗಳನ್ನು ಕೈಬಿಡಬೇಡಿ; ಜೋರು ಮಾಡಿ' ಎನ್ನುತ್ತಿರುವರಾದರೂ, 'ಬೇಡ'ವೆನ್ನುವ ರಾಗ ಪಾಡುವ ಮಿ. ಚೇಂಬರ್‌ಲೆನ್ನರ ಮುಂದೆ ಅವರ ಹಾರಾಟವೇ? ಚೇಂಬರ್‌ಲೆನ್ನರ ಅಭಿಮತದಂತೆ, 'ಈ 'ಸ್ಯಾಂಕ್ಶನುಗಳು' 'ಸಾಮುದಾಯಿಕ ರಕ್ಷಣೆ'ಯ ಹೆಸರಲ್ಲಿ ಹುಟ್ಟಿದುವು; ಜನಾಂಗಸಂಘದ ಆಶ್ರಯದಲ್ಲಿ ಬೆಳೆದುವು. ಆದರೂ ಏನು? ಈ ಸ್ಯಾಂಕ್ಶನುಗಳ ಗಿಡ ಹೂ ಬಿಡಲಿಲ್ಲ; ಕಾಯಾಗಲಿಲ್ಲ; ಆದ್ದರಿಂದ ಈ ಬರಡು ಮರವನ್ನು ಕಡಿದುಬಿಡೋಣ!' ಈ ತರ್ಕಸರಣಿಯು ಎಷ್ಟು ಸೊಗಸಾಗಿದೆ! ಮುಸಲೋನಿಯವರು ಅಬಿಸೀನಿಯವನ್ನು ಜಯಿಸಿದುದಾದರೂ ದೊಡ್ಡದಲ್ಲ; ಸ್ಯಾಂಕ್ಶನಿನ ಅವರ ದಿಗ್ವಿಜಯವಿದು ಯಾವ ಅದೃಷ್ಟದ ಶುಭಫಲವೋ!

ರಾಮುದಾಸ ವಜ್ರಕಾಯ ಗುಟಿಕಾ

(STERN-VIGOUR)

ಈ ಔಷಧದಲ್ಲಿ ಬಂಗಾರ, ಕಸ್ತೂರಿ, ಕೇಸರ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಸ್ವಪ್ನೇಂದ್ರಿಯ ಮುಂತಾದ ಧಾತು ವಿಕಾರಗಳನ್ನು ಗುಣವಡಿಸಿ, ಧಾತುಸ್ತಂಬನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದವನ್ನು ಕೊಡುವುದು. ಅಲ್ಲದೆ ಅತ್ಯಾಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವುದು.

ಕ್ರಯ 12 ಗುಳಿಗೆಗಳ ಬಾಟ್ಲಿ 1ಕ್ಕೆ 1—4—0.
50ಕ್ಕೆ 4—8—0.

ಇದಲ್ಲದೆ ನಮ್ಮ ಇತರ ಅನುಭವಸಿದ್ಧ ಔಷಧಗಳ ಮಾಹಿತಿ-ಪತ್ರಕಗಳನ್ನು ನಮ್ಮ ಏಜಂಟರಿಂದ ಪಡಕೊಂಡು ಅನುಭವಹೊಂದಿರಿ.

ದ. ಕ. ಜಿಲ್ಲೆಯ ಎಲ್ಲಾ ಪ್ರಮುಖ ಊರುಗಳಲ್ಲಿ ನಮ್ಮ ಏಜಂಟರಿರುವರು.

ತಯಾರಿಸುವವರು:—
ರಾಮುದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.
ಜಿಲ್ಲಾ ಏಜಂಟರು:—
ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.

INSURE WITH
CONFIDENCE
IN
INDIA
EQUITABLE
THE BEST
Life Office of its Age.
(Estd: 1908).
INDIA EQUITABLE INSURANCE CO. LTD. CALCUTTA.

The MAN behind the RUPEE

is a power to be reckoned with in every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

ವಿದೇಶ

ಅಬಿಸೀನಿಯದ ಮಾಜಿ ಚಕ್ರವರ್ತಿಗಳಿಗೆ, ಪಾರ್ಲಿಮೆಂಟ್ ಮೆಂಬರರು ಅನೇಕರು ಸೇರಿ ಒಂದು ಔತಣ ಮಾಡಿಸಿದರು. ಇಟಲಿಯ ಮೇಲಿನ ಸ್ಯಾಂಕ್ಷನುಗಳು ಅಲ್ಲಾಡುವಾಗ, ಇಂತಹ ಔತಣಗಳಾದರೂ ಸಾರೋದ್ಧಾರವಾಗಿ ಸಾಗಲಿ.

ಲಂಡನ್ನಿನಲ್ಲಿ ಅಸಾಮಿನ ವಸಾಹತಧಿಯ ಸಮಾರಾಧನೆಯ ಕಾಲ ಚಲ್ಲಿ, 'ಇಂಟರ್‌ನ್ಯಾಶನಲ್ ಟೀ ಮಾರ್ಕೆಟ್ ಎಕ್ಸ್‌ಪಾನ್‌ಶನ್ ಬೋರ್ಡ್'ನ ಜೆಯಂಟ್‌ಮ್ಯಾನೆರಾದ ಸರ್ ಆಲ್ಫ್ರೆಡ್ ಪಿಕ್‌ಫೋರ್ಡ್‌ರವರು, ಅಮೆರಿಕದವರು ಪ್ರತಿ ವರ್ಷವೂ ೯೦,೦೦೦,೦೦೦ ಪೌಂಡು ಟೀಯನ್ನು ಉಪಯೋಗಿಸುತ್ತಾರೆಂದರು. ಮಿತವ್ಯಯದ ಅಸ್ತ್ರವಾರದ ಮೇಲೆ ಚಹದ ಕೈಗಾರಿಕೆಯನ್ನು ಸ್ಥಾಪಿಸಬೇಕೆಂದರು. ಅಸಾಮಿನ ಮಾಜಿ ಗವರ್ನರಾದ ಸರ್ ಅಬ್ರಹಾಂ ಲೇಸ್‌ರವರು ಅತಿಥಿಗಳಿಗೆ ಸುಸ್ವಾಗತವನ್ನು ಬಯಸುತ್ತ, 'ಹಿಂದೀಯರಂತೆ ಇತರ ಜನರು ಪ್ರಾತಃಕಾಲದಲ್ಲಿಯೇ ಟೀ ಕುಡಿಯುವ ಅಭ್ಯಾಸ ಮಾಡಬೇಕು; ಅಸಾಮಿನ ಜನರು ತಮ್ಮ ವೃದ್ಧಿಗಾಗಿ ಈ ಕೈಗಾರಿಕೆಯನ್ನೇ ನಂಬಿಕೊಂಡಿರುವರು' ಎಂದರು.

'ಫ್ಯಾಲಸ್ತೈನೂ ಉಂಟು; ನಮ್ಮ ಹ್ಯಾ ಕಮಿಶನರೂ ಉಂಟು; ಅವರನ್ನು ನಂಬಿ' ಎಂದು ಕಾಮನ್ಸರ ಮುಂದಿರದಲ್ಲಿ ಕೊಲೊನಿಯಲ್ ಸೆಕ್ರಿಟರಿಗಳ ಉತ್ತರವಾಯಿತು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿಗೆ ಹಾಜರಿರುವಂತೆ ಶ್ರೀ. ಭಲ್ಲೂಭಾಯಿ ದೇಸಾಯಿಯವರು ಪ್ಯಾರಿಸಿನಿಂದ ಹೊರಟಿರುತ್ತಾರೆ. ಅವರು ಜೂನ್ ತಾ. ೨೫ಕ್ಕೆ ಇಂಡಿಯಕ್ಕೆ ಬರಬಹುದು.

ಕಾಮನ್ಸ್ ಮಂದಿರದಲ್ಲಿ 'ಸ್ಯಾಂಕ್ಷನು'ಗಳನ್ನು ಮುಂದಕ್ಕೂ ಊರ್ಜಿತವಿರಿಸಬೇಕೇ, ಬೇಡವೇ ಎನ್ನುವ ಕುರಿತು ಮಾತು ಬಂತಿತು. ವಾತಾವರಣವು ಬಹು ಉದ್ವೇಗಕರವಾಗಿದ್ದಿತು. ವಿದೇಶೀ ಕಾರ್ಯಭಾರಗಳ ಸೆಕ್ರಟರಿಗಳಾದ ಮಿ. ಏಡನ್‌ರವರು, 'ಇಟಲಿಯ ಮೇಲೆ ಸ್ಯಾಂಕ್ಷನುಗಳನ್ನು ಪ್ರಯೋಗಿಸಿಯೂ ಯಶಸ್ವಿಯಾಗಲಿಲ್ಲ. ಇಟಲಿಯ ಮಿಲಿಟರಿಗೇ ಜಯವಾಯಿತು. ಅಬಿಸೀನಿಯದ ಪ್ರಾಮುಖ್ಯ ಭಾಗವು ಇಟಲಿಯವರ ಕೈವಶವಾಯಿತು. ಒಟ್ಟಿನಲ್ಲಿ ಯುದ್ಧಕ್ಕೆ ಯುದ್ಧವೇ ಹೊರತು ಪ್ರತಿಕ್ರಿಯೆ ಸ್ಯಾಂಕ್ಷನುಗಳಲ್ಲ' ಎಂದು ಮುಂತಾಗಿ ಭಾಷಣ ಮಾಡಿ, ಇನ್ನೂ ಸ್ಯಾಂಕ್ಷನುಗಳನ್ನು ಊರ್ಜಿತವಿರಿಸಿ ಫಲವಿಲ್ಲವೆಂದರು. ಕೂಡಲೇ ಪ್ರತಿಪಕ್ಷದವರು, 'ಲಜ್ಜಾಸ್ಪದ' 'ರಾಜೀನಾಮೆ ಬರಲಿ' ಎಂದು ಕೂಗಿದರು. ಮಿ. ಬಾಲ್ಡ್ವಿನರು, ಸ್ವಮಾಯಾಚನೆಯ ನುಡಿಗಳನ್ನು ನುಡಿಯುತ್ತ, 'ಸಾಮುಹಾಯಿಕ ಭದ್ರತೆಯನ್ನು ದೊರಕಿಸಿಕೊಳ್ಳುವ ಪ್ರಯತ್ನವೀಗ ವಿಫಲವಾಗಿದೆ. ಆ ಕುರಿತು ಜನಾಂಗಸಂಘದ ಮುಂದಿನ ಸಿಟಿಂಗಿನಲ್ಲಿ ಯೋಚಿಸೋಣ. ಯುರೋಪಿನ ಶಾಂತಿಸ್ಥಾಪನೆಗಾಗಿ ಹೊಸ ಪ್ರಯತ್ನಗಳು ನಡೆಯಬೇಕಾಗಿವೆ' ಎಂದರು. ಇದರ ಚರ್ಚೆ ಮುಂದುವರಿಸಲಾಗಿದೆ.

ಕಾಮನ್ಸ್ ಮಂದಿರದ ಪ್ರತಿಪಕ್ಷದ ನಾಯಕರಾದ ಮೆ। ಎಟಲಿಯವರು ಸದ್ಯ ಒಂದು 'ಸೆನ್ಸರ್ ಮೋಶನ'ನ್ನು ತರಲಿರುವರು. ಅದು ಮಿ। ಬಾಲ್ಡ್ವಿನರ ಭಾಷಣದ ವಿರುದ್ಧವಾಗಿ. ಅದರ ಸಾರಾಂಶ ಹೀಗಿದೆ:— 'ಸರಕಾರದ ನಿರ್ಧಾರವಾದ, ನೇರವಾದ ವ್ಯವಹಾರದ ನೀತಿ ಸಡಿಲವಾಗಿ, ಬ್ರಿಟಿಷರ ಕೀರ್ತಿಗೆ ಕುಂದು ಉಂಟಾಗಿದೆ; ಆ ನೀತಿ ಜನಾಂಗಸಂಘವನ್ನು ದುರ್ಬಲಗೊಳಿಸಿದೆ; ಶಾಂತಿಯನ್ನು ಆಪಾಯಕ್ಕೀಡಾಗಿಸಿದೆ; ಆದುದರಿಂದ ಸರಕಾರವು ಈ ಮಂದಿರದ ವಿಶ್ವಾಸವನ್ನು ಕಳೆದುಕೊಂಡಿದೆ'

ಲಂಡನ್ನಿನ ಲಿಂಕಾನ್ ಮಂದಿರದಲ್ಲಿ ಮಹಿಳೆಯರ ಕೆಲ ಸಂಘಗಳ ಪ್ರತಿನಿಧಿಗಳೊಡನೆ ಸೇರಿದ ಒಂದು ಸಭೆಯು, ಚಕ್ರವರ್ತಿ ನೇಗಸರಿಗೂ ಅವರ ಮಗಳಿಗೂ ಉತ್ಸಾಹಪೂರ್ಣವಾದ ಸ್ವಾಗತವನ್ನು ಕೊಟ್ಟು ಗೌರವಿಸಿತು. ಅನೇಕ ಮಂದಿ ಅಧ್ಯ ಹಿಂದೂ ಮಹಿಳೆಯರೂ ಇದಕ್ಕೆ ಪಟೆಯಮಾಡಿಸಿದ್ದರು. ಮಾಜಿ ಅಬಿಸೀನಿಯಾ ಚಕ್ರವರ್ತಿಗಳೂ ಅವರ ಪುತ್ರಿಯವರೂ ಹಿಂದೂದೇಶದವರು ತಮ್ಮ ವಿಷಯದಲ್ಲಿ ತೋರಿದ ಸ್ನೇಹಪೂರ್ವಕವಾದ ಆದರಗೌರವಗಳನ್ನು ಮೆಚ್ಚಿ ಭಾರತೀಯರಿಗೆ ವಂದನೆಗಳನ್ನು ಅರ್ಪಿಸಿದರು.

ಲೆವೀಡಿಯಾ ಪ್ರಾಂತದಲ್ಲಿ ಸುಮಾರು ೨೦೦ ರಣಹದ್ದುಗಳ ಒಂದು ಸೈನ್ಯವು ಒಂದು ಲಾರಿಯನ್ನಾಕ್ರಮಿಸಿ, ಡ್ರೈವರನನ್ನು ತುಂಬ ಗಾಯಪಡಿಸಿ ಕೊಲ್ಲಲು ಯತ್ನಿಸುವಷ್ಟರಲ್ಲಿ ಅಥೆನ್ಸಿನಿಂದ ಬಂದ ಒಂದು ಬಸ್ಸಿನ ಪ್ರಯಾಣಿಕರು ಸೇರಿ ಕೆಲವು ಹದ್ದುಗಳನ್ನು ಕೊಂದು ಮಿಕ್ಕವುಗಳನ್ನು ಓಡಿಸಿದರು.

ರಷ್ಯದ ಮುಖಂಡರೂ, ಸಾಹಿತಿಯೂ ಪತ್ರಿಕಾ ಉದ್ಯೋಗಿಯೂ ಆಗಿದ್ದ ಜಗತ್ಪ್ರಸಿದ್ಧರಾದ ಮೆಕ್ಸಿಮ್ ಗೋರ್ಕಿಯವರು ತಮ್ಮ ೬೮ನೆ ವಯಸ್ಸಿನಲ್ಲಿ ದಿವಂಗತರಾದರು.

ಅಮೆರಿಕದಲ್ಲಿ ಕಳೆದ ೬ ವರ್ಷಗಳಲ್ಲೆಲ್ಲ ಇಪ್ಪತ್ತೊಂದು ವಿಶೇಷವಾದ ಉಕ್ಕಿನ ನಿರ್ಮಾಣವಾಗಿರಲಿಲ್ಲ. ಆ ಸಂಬಂಧವಾಗಿ ಉಂಟಾಗಿರುವ ಲಾಭದಲ್ಲಿ ಸೇಕಡಾ ೧೦ರ ಸಲೆಯ ಕೂಲಿಯನ್ನು ಹೆಚ್ಚಿಸಲಾಗಿದೆ. ಇದರಿಂದ ೫ ಲಕ್ಷ ಕೂಲಿಗಾರರಿಗೆ ಪ್ರಯೋಜನವಾಗಿದೆ.

ದಿವಂಗತ ಸಾರ್ವಭೌಮರ ಸ್ಮಾರಕನಿಧಿಗೆ ಬ್ಯಾಂಕ್ ಆಫ್ ಇಂಗ್ಲೆಂಡಿನ ಗವರ್ನರರ ಮೂಲಕ ಬಂದ ೫ ಸಾವಿರ ಪವನಿನ ಕೂಡ ಒಟ್ಟಿಗೆ ೬೫ ಸಾವಿರವಾಗಿದೆ. ಇದರಲ್ಲಿ ಸೇಕಡಾ ೫೦ರಷ್ಟು ಕ್ರೀಡಾಭೂಮಿಗಳಿಗಾಗಿ ವಿನಿಯೋಗವಾಗುವುದು.

ಬ್ರಿಟನು, ಸ್ಥಿತಿಕಾರ್ಯಗಳಿಗಿಂತಲೂ ಲಯಕಾರ್ಯಗಳಿಗಾಗಿ ಹೆಚ್ಚು ಖರ್ಚು ಮಾಡುತ್ತಿದೆ ಎಂಬ ದೂರಿದೆ. ಬ್ರಿಟನು ಔಷಧದ ಪರಿಶೋಧನೆಗೆ ೧ ಲಕ್ಷ ೬೦ ಸಾವಿರ ಪವನು, ಕೈಗಾರಿಕೆಯ ಪರಿಶೋಧನೆಗೆ ೪ ಲಕ್ಷ ೪೦ ಸಾವಿರ ಪೌಂಡುಗಳನ್ನು ಖರ್ಚು ಮಾಡುತ್ತಿದ್ದರೆ ಮಿಲಿಟರಿಯವರ ಪರಿಶೋಧನೆಗಳಿಗಾಗಿ ೨೭ ಲಕ್ಷ ೫೦ ಸಾವಿರ ಪೌಂಡು ಖರ್ಚಾಗುತ್ತಿದೆ. ಇದರಲ್ಲಿ ಗ್ಯಾಸಿನ ಸಂಬಂಧ ೧೫ ಸಾವಿರ ಪೌಂಡು.

NATIONAL INSURANCE CO., LTD.
ನ್ಯಾಶನಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಸಂಸ್ಥೆಯವರು ನಮಗೆ ದಯವಿಟ್ಟು ಕಳುಹಿಸಿರುವ ಅವರ ೧೯೪೫ನೇ ಇಸವಿಯ ವರದಿಯನ್ನು ನಾವು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ. ಈ ಸಂಸ್ಥೆಯ ಪಾಲುಗಾರರ ೨೯ನೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಮರ್ಪಿಸಲಾದ ವರದಿಯು ಇದೇ.

ವರ್ಷದಿಂದ ವರ್ಷಕ್ಕೆ ವೃದ್ಧಿಗತಿಯನ್ನು ತೋರುತ್ತ, ಸರ್ವತೋಮುಖವಾದ ಶಾಶ್ವತ ಯಶಸ್ಸನ್ನು ಸ್ಥಿರವಾದ, ಕ್ರಮವಾದ, ಸುಭದ್ರವಾದ ಹೆಜ್ಜೆಗಳ ಮೂಲಕ ಪಡೆಯುತ್ತ ಬರುತ್ತಿರುವ ಕೆಲವು ದೇಶೀಯ ಸಂಸ್ಥೆಗಳಲ್ಲಿ ಇದೂ ಒಂದಾಗಿದೆ. ಇದರ ಅಂಕೆಸಂಖ್ಯೆಗಳೂ, ವ್ಯವಹಾರವಹಿವಾಟುಗಳೂ ಬಹು ಸಮರ್ಪಕವಾಗಿದ್ದು, ದೇಶೀಯರ ಸಮಾದರಣೆಗೂ, ಪ್ರೋತ್ಸಾಹಕ್ಕೂ ಅರ್ಹವಾಗಿದೆ.

೧೯೪೫ನೆಯ ವರ್ಷದ ಈ ಕಂಪೆನಿಯು ವಿದ್ಯಮಾನಗಳನ್ನು ಪರಿಶೀಲಿಸುವಲ್ಲಿ, ಕಂಪೆನಿಯು ವೃದ್ಧಿಸೂಚಕವಾದ ಒಂದು ವರ್ಷವನ್ನು ಕಂಡಿದೆ ಎಂದು ದೃಢವಾಗುತ್ತೆದೆ. ಹಿಂದಿನ ಒಂದು ವರ್ಷದಲ್ಲಿ ಲ್ಯಾಫ್ ಫಂಡು ೨೧ ಲಕ್ಷವಾಗಿದ್ದರೆ, ವರದಿಯ ವರ್ಷದಲ್ಲಿ ಅದು ೨೮ ಲಕ್ಷಕ್ಕೇರಿದೆ ಎಂಬುದೂ; ಅದೇ ವರ್ಷ ಪ್ರೀಮಿಯಮ್ಮಿನ ಉತ್ಪತ್ತಿ ಸುಮಾರು ೩ ಲಕ್ಷ ರೂಪಾಯಿಗಳಷ್ಟಿದೆ ಎಂಬುದೂ; ಬಡ್ಡಿಯ ಉತ್ಪತ್ತಿಯು ೧೧॥ ಲಕ್ಷಗಳಿಗೇರಿ, ಹಿಂದಿನ ವರ್ಷಕ್ಕಿಂತ ೨ ಲಕ್ಷದಷ್ಟು ಹೆಚ್ಚಿದೆ ಎಂಬುದೂ; ಒಪ್ಪಿಸಿಕೊಡಲಾಗುವ ಪಾಲಿಸಿಗಳ ಸಂಖ್ಯೆಯು ಕಡಿಮೆಯಾಗುತ್ತ ಬಂದು, ಖರ್ಚಿನ ದಾಮಾಶಾಯಿಯೂ ಪ್ರೀಮಿಯಮಿನ ಸೇಕಡಾ ೨೬.೪%ರಿಂದ ೨೫.೪%ಕ್ಕೆ ಇಳಿದಿದೆ ಎಂಬುದೂ ಗತವರ್ಷದ ವರದಿಯ ಶ್ಲಾಘನೀಯವಾದ ಗುಣಲಕ್ಷಣವಾಗಿದೆ.

ಸ್ಟಾಕ್ ಎಕ್ಸ್‌ಚೇಂಜಿನ ಭದ್ರತೆಗಳ ಬೆಲೆ ಈಗ ಹೆಚ್ಚಿದೆಯಾದರೂ ಅದನ್ನು ಹಾಗೇ ಇರಿಸಿದುದು ವಿವೇಕದೃಷ್ಟಿಯ ಗುರುತಾಗಿದೆ. ಈ ಭದ್ರತೆಗಳ ಬೆಲೆ ರೂ. ೧೨,೭೪,೨೬೪—೧—೦ ಎಂಬುದು ಮುಂದೆ ಲಾಭದಾಯಕವಾಗಿ ಪರಿಣಮಿಸಬಹುದಾಗಿ ಆ ಏರಿಕೆಯ ಮೊತ್ತವನ್ನೀಗ ನಾವು ಗುಪ್ತವಾದ ನಿಧಿ ಎಂದೇ ಎಣಿಸಬೇಕಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಕಂಪೆನಿಗೆ ದೊರಕಿದ ಹೊಸ ವ್ಯವಹಾರದಲ್ಲಿ, ಒಟ್ಟು ಮೊತ್ತವು, ಸಾಮಾನ್ಯ ಕೆಲವು ಸಾವಿರದ ಮಟ್ಟಿಗೆ, ವರದಿಯ ವರ್ಷದಲ್ಲಿ, ಹಿಂದಿನ ವರ್ಷಕ್ಕಿಂತಲೂ ಹೆಚ್ಚಾಗಿ ದೊರಕಿತೆಂದು ಕಂಡುಬರುತ್ತದೆ. ಅಂದರೆ ೧೯೩೪ರಲ್ಲಿ ರೂ. ೧,೬೯,೫೮,೨೮೦ಗಳ ಪಾಲಿಸಿಗಳೂ, ೧೯೩೫ರಲ್ಲಿ ರೂ. ೧,೭೩,೦೬,೧೩೪ಗಳ ಪಾಲಿಸಿಗಳೂ ಕಂಪೆನಿಗೆ ದೊರಕಿವೆ. ಇಲ್ಲಿ ನಾವು ನೋಡಬೇಕಾದುದು ಕೇವಲ ಅಂಕೆಸಂಖ್ಯೆಗಳನ್ನೇ ಅಲ್ಲ; ಕಂಪೆನಿಯು ಈ ವರ್ಷ ಪ್ರಥಮ ಬಾರಿಯಾಗಿ, ಹೆಚ್ಚಿಸಿದ ಪ್ರೀಮಿಯಮ್ ದರಗಳನ್ನೇ ಜ್ಯಾರಿಗೆ ತಂದಿದ್ದರೂ, ಸಾರ್ವಜನಿಕರ ಸಹಾಯವೂ ಸಹಾನುಭೂತಿಯೂ ಕುಂದಿ, ಕಡಿಮೆಯಾಗದೆ, ಏರಿದ ಪ್ರೀಮಿಯಮಿನ ದರದಲ್ಲಿಯೇ ನಡೆದ ಈ ಹೊಸ ವರ್ಷವೂ, ಎಂದಿನಂತೆ ಇಷ್ಟೊಂದು ಯಶಸ್ಸನ್ನು ಸಂಪಾದಿಸಿತಲ್ಲ ಎಂದು ನಾವು ಕಂಪೆನಿಯನ್ನು ಸರ್ವಪ್ರಕಾರದಿಂದಲೂ ಅಭಿನಂದಿಸಬೇಕಾಗಿದೆ.

ಗತವರ್ಷದಲ್ಲಿ ಕೆಲವು ಉಪಯುಕ್ತವೂ, ಯೋಗ್ಯವೂ ಆದ ಹೊಸ ಕ್ರಮಗಳನ್ನು ಈ ಸಂಸ್ಥೆಯು ಜಾರಿಗೆ ತಂದಿದೆ. ಕಂಪೆನಿಯ ಏರಿದ ಪ್ರೀಮಿಯಮ್ ದರಗಳಿಂದ, ಕಂಪೆನಿಯ ವಾಡಿಕೆಯ ಹೊಸ ವ್ಯವಹಾರವನ್ನು ಸಂಪಾದಿಸಲು, ಈ ಸಂಸ್ಥೆಯ ಕೆಲಸಗಾರರು ಶ್ರಮಪೂರ್ವಕವಾಗಿ ಕೆಲಸ ಮಾಡಬೇಕಾಯಿತು. ಪಾಲಿಸಿಗಳ ಮೇಲಿನ ಸಾಲವು ಒಂದೇ ವರ್ಷದಲ್ಲಿ ರೂ. ೪ ಲಕ್ಷದಷ್ಟು ಹೆಚ್ಚಿತು. ಕಂಪೆನಿಯ ತಾಕ್ಕರರುಗಳ ಪಟ್ಟಿಯನ್ನು ಪುನರ್ವ್ಯವಸ್ಥೆಗೊಳಿಸಲಾಯಿತು. ಅಲ್ಲದೆ ಇದರ ಏಜನ್ಸಿಕ್ಷೇತ್ರದಲ್ಲಿ ಕೆಲಸಮಾಡುವವರ ಸಂಖ್ಯೆ ೫೦೦ಕ್ಕೂ ಮಿಕ್ಕಿರುವಂತೆ ವಿಶಾಲಗೊಳಿಸಿದುದಾಯಿತು. ಫೆಡರೇಟೆಡ್ ಮಲಯಾ ಸ್ಟೇಟ್ಸಿನಲ್ಲಿಯೂ, ಈಸ್ಟ್ ಆಫ್ರಿಕದಲ್ಲಿಯೂ ಈ ಸಂಸ್ಥೆಯ ಶಾಖೆಗಳನ್ನು ಹೊಸದಾಗಿ ಸ್ಥಾಪಿಸಿದುದಾಯಿತು. ಅಲ್ಲದೆ ಆಫೀಸಿನ ಉಪಯೋಗಕ್ಕಾಗಿ ಕೆಲವೊಂದು ಅಗತ್ಯವಾದ ಯಂತ್ರಸಾಧನಗಳನ್ನು ಕೊಳ್ಳಲಾಯಿತು. ಏನಂಚ, ಅಗತ್ಯವಿರುವ ಎಲ್ಲ ಸೌಕರ್ಯಗಳನ್ನೂ, ಏರ್ಪಾಡುಗಳನ್ನೂ ಆ ವರ್ಷದಲ್ಲಿ ಸಾಧ್ಯವಿರುವಷ್ಟು ಮಟ್ಟಿಗೆ ಪೂರೈಸಿದುದಾಯಿತು.

ಒಟ್ಟಿನಲ್ಲಿ, ಸುಭದ್ರವಾದ ತಳಹದಿಯ ಮೇಲೆ ನಿಂತು, ದೇಶೀಯರ ವಿಶ್ವಾಸವನ್ನು, ಪ್ರೋತ್ಸಾಹವನ್ನು ಪಡೆದು, ಮುಂಬರಿಯುತ್ತಿರುವ ಈ ಸಂಸ್ಥೆ ಪುನಃ ಇನ್ನೊಂದು ಶುಭಪ್ರದವಾದ ವರ್ಷವನ್ನು ಕಳೆಯಲೆಂದು ಕೋರಲಾಗಿದೆ.


WEST END
'SECUNDUS'
ವೆಸ್ಟ್ ಎಂಡ್ "ಸೆಕುಂಡಸ್"
ಅತ್ಯಲ್ಪ ಬೆಲೆಯಲ್ಲಿ ಅತ್ಯಧಿಕ ಬಾಳಿಕೆಗಾಗಿ
ಅತ್ಯುತ್ಕೃಷ್ಟ ವಾಚು.
'ಸೆಕುಂಡಸ್' ನ್ಯೂ ಕ್ಯಾಲಿಬರ್ ರೆಕ್ಟ್ಯಾಂಗ್ಯುಲರ್
ನಿಕ್ಕೆಲ್ ಬೆಳ್ಳಿಯದು ... ರೂ. 32
ಎವರ್‌ಬ್ರೈಟ್ ಸ್ಟೀಲ್ ... ರೂ. 35
ರೋಲ್ಡ್ ಗೋಲ್ಡ್ ... ರೂ. 37
9 ಕ್ಯಾರೆಟಿನ ಚಿನ್ನ ... ರೂ. 60
'ಸೆಕುಂಡಸ್' ಮಿನಿಯೇಚರ್ ಟೊನೆಯ್
ರೋಲ್ಡ್ ಗೋಲ್ಡ್ ... ರೂ. 35
9 ಕ್ಯಾರೆಟ್ ಚಿನ್ನ ... ರೂ. 45
18 ಕ್ಯಾರೆಟ್ ಚಿನ್ನ ... ರೂ. 60
ಎರಡೂ ಮಾದರಿಗಳು ವಿಶ್ವಾಸಾರ್ಹ
ನಿಖರ ಸಮಯಸೂಚಿಗಳೆಂದು ಗ್ಯಾರಂಟಿ ಇದೆ. ದೊಡ್ಡ ಕ್ಯಾಟಲಾಗು ಉಚಿತ.
WEST END WATCH Co.
BOMBAY CALCUTTA
ವೆಸ್ಟ್ ಎಂಡ್ ವಾಚ್ ಕೋ., ಬೊಂಬಾಯಿ ಮತ್ತು ಕಲ್ಕತ್ತ.

JAYA LAXMI BANK, LT'D.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.
ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರಟರಿ.

FOR YOUR DIAMONDS
ENQUIRE AT
SOWCAR
SRINIVAS RANGA PAI,
SOWCAR MAHAL,
Car Street,
MANGALORE.



ಅನೇಕತ್ವದಲ್ಲಿ ಏಕತ್ವವೂ, ಏಕತ್ವದಲ್ಲಿ ಅನೇಕತ್ವವೂ ಸೃಷ್ಟಿಯ ಅನುಸಂಧಾನಗಳು.

ಸ್ವಾಮಿ ವಿವೇಕಾನಂದ.

XVIII] ಮಂಗಳೂರು, ತಾ. ೨೩—೬—೧೯೩೬ [೨೫
೧೮೫೮ ಧಾತು ಸಂ। ಆಷಾಢ ಶು। ೪ ಕುಜವಾರ.

ಕೊಡಗಿನ ಆಯವ್ಯಯದ ವ್ಯವಸ್ಥೆ.

ಕಳೆದ ಮೇ ೨೮ನೆ ತಾರೀಕಿನ ಪ್ರಾಂತಿಕ ಸರಕಾರದ ಗಜೇಟಿನ ವಿಶೇಷ ಸಂಚಿಕೆಯಲ್ಲಿ, ಕೊಡಗಿನ ಸಾಂಪತ್ತಿಕ ಸ್ಥಿತಿಯನ್ನು ವಿಮರ್ಶಿಸಿ, ಆ ಸರಕಾರಕ್ಕೆ ಇಂಡಿಯಾ ಸರಕಾರದವರಿಂದ ವಾಗ್ದತ್ತವಾದ ದ್ರವ್ಯ ಸಹಾಯದ ಪ್ರಕಟನೆ ಇದೆ. ಅದರ ಮೇರೆಗೆ, ೧೯೩೭ನೇ ಮಾರ್ಚಿ ಆಖೈರ ವರೆಗೆ, ಕೊಡಗಿನ ಸರಕಾರಕ್ಕೆ ಮುಂಗಡವಾಗಿ ಸಾಲ ಕೊಟ್ಟ ೯॥ ಲಕ್ಷ ರೂಪಾಯಿಯನ್ನು ಲೆಕ್ಕದಿಂದ ವಜಾ ಮಾಡಿ, ಮುಂದಿನ ನಾಲ್ಕು ವರ್ಷಗಳಿಗಾಗಿ, ಮೊದಲನೆ ವರ್ಷಕ್ಕೆ ರೂ. ೨ ಲಕ್ಷ, ಎರಡನೆಗೆ ರೂ. ೧॥ ಲಕ್ಷ, ಮೂರನೆಗೆ ರೂ. ೧ ಲಕ್ಷ, ನಾಲ್ಕನೆಗೆ ರೂ. ೫೦,೦೦೦ ಈ ರೀತಿ, ಕ್ರಮವಾಗಿ ಇಳಿತರದ ದ್ರವ್ಯ ಸಹಾಯ ಮಾಡುವುದಾಗಿ, ನೀಮಾಯರ್ ರಿಪೋರ್ಟಿನ ಮೇರೆಗೆ, ಇಂಡಿಯಾ ಸರಕಾರದವರು ತಿಳಿಸಿರುವರು.

ಈಗ, ಎರಡು-ಮೂರು ವರ್ಷಗಳಿಂದ, ಬರುವ ಆದಾಯದಿಂದಲೇ ಖರ್ಚು ಪೂರೈಸಲಾರದೆ, ಇಂಡಿಯಾ ಸರಕಾರದಿಂದ ಸಾಲ ಪಡೆಯುತ್ತಲೇ ಇದ್ದಾಗ, ಮುಂದೆಯೂ, ಇದೇ ರೀತಿಯ ಸಾಲದ ಮೇಲೆ ಹೊಂದಿಕೊಂಡು, ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿರಿಸುವ ಒಣ ಅಭಿಮಾನವನ್ನು ಕೊಡಗಿನವರು ಎದೆಗೆ ಅವುಚಿಕೊಂಡು ಧನ್ಯರಾಗಬೇಕೇ, ಅಥವಾ ಚೆನ್ನಾಗಿ ವಿಚಾರಮಾಡಿ, ತಮ್ಮ ಕಾಲ್ಮೇಲೆ ತಾವು ನಿಲ್ಲುವಂತೆ, ಅಥವಾ ಬೇರೆ ದೊಡ್ಡ ಪ್ರಾಂತಗಳ ಛತ್ರದೊಳಗೆ ಆಶ್ರಯ ಪಡೆಯುವಂತೆ ಪ್ರಯತ್ನ ಮಾಡಬೇಕೇ ಎಂಬುದು ವಿಚಾರಾರ್ಹವಾಗಿದೆ.

ಈಗ ಹಿಂದುಸ್ಥಾನದೊಳಗಿರುವ ೧೩, ಒರಿಸ್ಸಾ ಕೂಡಾ ೧೪ ಪ್ರಾಂತಗಳಲ್ಲಿ ಕೊಡಗು ಪ್ರಾಂತವು ೮೨ ಚಿಕ್ಕದು. ವಿಸ್ತೀರ್ಣ ಬರೆ ೧೫೮೨ ಚ. ಮೈಲು ಅಂದರೆ, ಈ ಜಿಲ್ಲೆಯಷ್ಟು ಸುಮಾರು ೧೨೦೦ ಚ. ಮೈಲು ಇರುವ ಪುತ್ತೂರು ತಾಲೂಕಿನಗಿಂತ ಸ್ವಲ್ಪ ದೊಡ್ಡದು. (ಪುತ್ತೂರು ೧೨೫೯ ಚ. ಮೈಲು) ಜನಸಂಖ್ಯೆ ಸುಮಾರು ೧॥ ಲಕ್ಷ. ಮಳೆ ಧಾರಾಳವಾಗಿದ್ದರೂ, ಹೆಚ್ಚಿನ ಭಾಗವು ಕಾಡುಗುಡ್ಡಗಳ ಪ್ರದೇಶವಾಗಿದ್ದು, ಗುಡ್ಡಗಳ ಬದಿಯಲ್ಲಿ ಕಾಫಿ ತೋಟಗಳಿವೆ. ತಗ್ಗುಗಳಲ್ಲಿ ಬತ್ತ ಚೆನ್ನಾಗಿ ಬೆಳೆಯುತ್ತದೆ. ಬತ್ತದ ಪೈರು ಬೆಳೆಯುವ ವಿಸ್ತೀರ್ಣವು ಸುಮಾರು ೪೬೦೦ ಎಕ್ರೆ. ಈ ಚಿಕ್ಕ ಪ್ರಾಂತದಲ್ಲಿ ೬ ತಾಲೂಕುಗಳಿವೆ. ಈ ಪ್ರಾಂತವು ಮೈಸೂರಿನ ಬ್ರಿಟಿಷ ರೆಸಿಡೆಂಟರ ಕೈಕೆಳಗಿದೆ. ಇವರೇ ಕೊಡಗಿನ ಚೀಫ್ ಕಮ್ಮಿಶನರ್. ಇವರ ಕೆಳಗೆ ಕೊಡಗಿನಲ್ಲಿ ಸಬ್ ಕಲ್ಲೆಕ್ಟರ್ ಗ್ರೇಡಿನ ಒಬ್ಬ ಕಮ್ಮಿಶನರು, ಅವರಿಗೆ ಸಹಾಯಕರಾಗಿ ಒಬ್ಬ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ ಮತ್ತು ಮುಖ್ಯ ಪೋಲೀಸ ಅಧಿಕಾರಿ. ಒಬ್ಬ ಎಸಿಸ್ಟಾಂಟ ಕಮ್ಮಿಶನರು (ಇಲ್ಲಿಯ ಡೆಪ್ಯುಟಿ ಕಲ್ಲೆಕ್ಟರರಂತೆ) ರೆವಿನ್ಯು ಖಾತೆಯ ಮೇಲ್ವಿಚಾರಕರು. ತಾಲೂಕಿಗೆ ಒಬ್ಬರಂತೆ ೬ ಸುಭೆದಾರರು; ಇಲ್ಲಿಯ ಡೆಪ್ಯುಟಿ ತಹಸಿಲ್ದಾರರ ಗ್ರೇಡಿನವರು. ಖಜಾನಾ ಡೆಪ್ಯುಟಿ ಕಲ್ಲೆಕ್ಟರ್, ೧ನೆ ಕ್ಲಾಸು ಮೆಜಿಸ್ಟ್ರೇಟ ಮತ್ತು ಸಬ್ ಜಡ್ಜರಾಗಿ ಒಬ್ಬರೇ ಆಫಿಸರರು ಈ ಮೂರು ಕೆಲಸಗಳನ್ನೂ ನಡೆಸುತಿದ್ದಾರೆ. ಇನ್ನೂ ಮಡಿಕೇರಿ ಮತ್ತು ವೀರರಾಜ ಪೇಟೆಗಳಲ್ಲಿ ಇಬ್ಬರು ಮುನಸೀಫರು ಇದ್ದಾರೆ. ಇವ್ವರ ಮೇಲೆ, ಎಗ್ಸಿಕ್ಯೂಟಿವ ಎಂಜಿನಿಯರು, ಸೆಕ್ಶನ್ ಆಫೀಸರುಗಳು, ಡಿಸ್ಟ್ರಿಕ್ಟ ಫೊರೆಸ್ಟ್ಟ ಆಫೀಸರು, ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರು ಇತ್ಯಾದಿ ಸಿಬಂದಿ ಎಲ್ಲವೂ ಭರ್ತಿ ಇದೆ.

ಈ ಪ್ರಾಂತದ ಮುಖ್ಯ ಬೆಳೆಯಾದ ಕಾಫಿಯ ಬೆಲೆ ತಗ್ಗುತ್ತಾ ಬಂದುದರಿಂದ, ಕಾಫಿ ತೋಟಗಳ ಉತ್ಪತ್ತಿ ತಗ್ಗುತ್ತಾ ಬಂದಿದೆ. ಇಷ್ಟು ಸಣ್ಣ ವಿಸ್ತೀರ್ಣದ ಒಂದು ಪ್ರತ್ಯೇಕ ಪ್ರಾಂತವನ್ನು ಇರಗೊಡಿಸಿ, ಒಂದು ದೊಡ್ಡ ಜಿಲ್ಲೆಯ ಸಿಬಂದಿಯಷ್ಟನ್ನು ನೇಮಕ ಮಾಡುವುದು ಅಗತ್ಯವೇ ಮತ್ತು ಖರ್ಚಿನ ಭರ್ತಿಗೆಂದು ಇಂಡಿಯಾ ಸರಕಾರದವರು ಸಹಾಯಧನ ಕೊಡುವುದು ಅನಿವಾರ್ಯವೇ? ಈ ವಿಷಯವನ್ನೀಗ ವಿಮರ್ಶಿಸೋಣ.

ಈ ಸಣ್ಣ ಪ್ರದೇಶವನ್ನು—ದಕ್ಷಿಣ ಕನ್ನಡಾ ಜಿಲ್ಲೆಯ ಒಂದು ತಾಲೂಕಿಗಿಂತ ತುಸು ದೊಡ್ಡದಿರುವ ಒಂದು ಪ್ರದೇಶವನ್ನು-ಕನ್ನಡ ಪ್ರಾಂತದ ಒಂದು ಅಂಗವಾಗಿ ಮಾರ್ಪಡಿಸುವುದು ಯುಕ್ತ. ಅದನ್ನು ಒಂದು ಜಿಲ್ಲೆಯಾಗಿ-ಅಗತ್ಯವಿದ್ದರೆ-ಪ್ರತ್ಯೇಕಿಸಿ, ದಕ್ಷಿಣಕನ್ನಡದ ಒಂದು ಅಂಗವಾಗಿಮಾಡಿದರೆ, ಖರ್ಚು ಎಷ್ಟೋ ಕಡಿಮೆಯಾಗುವುದು. ಇದಲ್ಲದೆ ಕೊಡಗಿನಲ್ಲಿ ವಿದ್ಯಾಪ್ರಚಾರವು ಹೆಚ್ಚಿ, ನಿರುದ್ಯೋಗಿಗಳ ಸಂಖ್ಯೆ ಏರುತ್ತಿದೆ; ಗ್ರೆಡ್ಯುವೇಟರು ಕೂಡಾ, ಚಿಕ್ಕ ತಲಬಿನ ಕೆಲಸಕ್ಕೆ ಹಾತೊರೆಯುತ್ತಾರೆಂದು ತಿಳಿದು ಬರುವಾಗ, ಆರೋಗ್ಯವೂ, ಮೇಧಾಶಕ್ತಿಯೂ ಇರುವ ಕೊಡಗರು ಒಂದೇ ಸಣ್ಣ ಜಿಲ್ಲೆಯಲ್ಲಿ ಬಡೆದಾಟ ಮಾಡುವುದಕ್ಕಿಂತಲೂ, ಇಡೀ ಮದ್ರಾಸು ಸಂಸ್ಥಾನದಷ್ಟು ದೊಡ್ಡ ವ್ಯವಹಾರಕ್ಷೇತ್ರವು ಸಿಕ್ಕಿದರೆ ಮತ್ತಷ್ಟು ಅನುಕೂಲವಲ್ಲವೇ? ತನ್ನುಗೆ ಸಿಕ್ಕಿದ ಒಂದು ಕೌನ್ಸಿಲನ್ನು ಅಪ್ಪಿಕೊಂಡು, ತಾವೂ ದೊಡ್ಡ ಭಾಷಣಗಳನ್ನು ಮಾಡಿದೆವು, ಠರಾವುಗಳನ್ನು ತಂದೆವು ಎಂದು ಬರೀ ಬೊಕ್ಕಸದ ಒಂದು ಸಂಸ್ಥಾನವನ್ನು ಕಟ್ಟಿಕೊಳ್ಳುವುದಕ್ಕಿಂತ, ವಿಚಾರಶೀಲರಾಗಿ, ತವ್ಮ ಪ್ರಯೋಜನವನ್ನು, ಸ್ವಲ್ಪ ವಿಕಾಸದೃಷ್ಟಿಯಿಂದ, ತಾವೇ ತಿಳಿದುಕೊಳ್ಳುವುದು ಯೋಗ್ಯವಲ್ಲವೇ? ಕೊಡಗು ಪ್ರತ್ಯೇಕ ಪ್ರಾಂತವಾಗಿರುವುದು ಯುರೋಪಿಯನ್ ಪ್ಲೇಂಟರರಿಗಾಗಿ ಅಲ್ಲದೆ, ದೇಶೀಯ ಜನರ ಅನುಕೂಲತೆಗಾಗಿ ಅಲ್ಲ; ಜನತೆಯ ಬಗೆಗೆ ಅಲ್ಲ ಎಂಬುದು ತಿಳಿದೇ ಇದೆ. ಆದರೆ, ಅಧಿಕಾರಿವರ್ಗವು, ದೇಶೀಯರು ಕೂಡಾ, ಇನ್ನು ಈ ಪದ್ಧತಿಯನ್ನೇ ಅನುಸರಿಸಿ ಅನೇಕ ಸಲ ಕ್ರಮ ತಪ್ಪಿ ಹೋಗುತ್ತಾರೆ. ಇದೆಲ್ಲ ವ್ಯವಸ್ಥೆಯಾಗಬೇಕಾದರೆ, ಕೊಡಗು ಒಂದು ದೊಡ್ಡ ಪ್ರಾಂತದ ಅಂಗವಾಗಬೇಕು. ಹಾಗಾಗಲೆಂದು ನಮ್ಮ ಹಾರೈಕೆ.

ಒಬ್ಬ ಉಪಾಧ್ಯಾಯರ ಕೆಲಪ್ರೊಂದು ಉದ್ಗಾರ!

ಕೂತಲ್ಲೊಂದು ಗ್ರೆಹಚಾರ. ಮಹನೀಯರೊಬ್ಬರ ಮೇಲೆ 'ಬರೆದ ವಿಮರ್ಶೆಯನ್ನು ಓದಿ, ಓದಿ ಕೊನೆಗೆ ಬೇಸತ್ತ' 'ಉಪಾಧ್ಯಾಯ'ರೊಬ್ಬರು, ಆ ವಿಮರ್ಶೆ ಬರೆದ ನಮ್ಮ ಎಸ್. ಏಯ ಕುರಿತು, ಸ್ಥಳೀಯ ಪತ್ರಿಕೆಯೊಂದರಲ್ಲಿ, ಬೇಕಾದಷ್ಟು ಟೀಕಿಸಿ ಅಷ್ಟರಿಂದಲೂ ತೃಪ್ತರಾಗದೆ, ದನವಿನೊಡನೆ ಕರುವನ್ನೂ ಎಳೆದು ತಂದಂತೆ, 'ಕಂಠೀರವ'ನ ಸುತ್ತ ಬಳಸಿ, ಒಂದು ಉರುಳು ಪ್ರದಕ್ಷಿಣೆಯನ್ನೂ ಮಾಡಿ, ಕೊಂಚ ಜಿಗುಟಿದ್ದಾರೆ.

'ಎಸ್. ಏಯವರಂಥ ಇನ್ನೂ ಒಬ್ಬಿಬ್ಬರು ಕಂಠೀರವನ ಬಾತ್ಮೀದಾರರಾಗಿ ಇರುವುದಾದರೆ, ಕಂಠೀರವನು ಡೈಲಿ ಪತ್ರಿಕೆಯಾಗಿ ಮೆರೆದಾಡಲು ಅಡ್ಡಿ ಇಲ್ಲ'—ಇದೀಗ ಆ ಉಪಾಧ್ಯ ಅಯ್ಯರ ಕೋಪ್ಪಕದ ಮೊದಲನೆಯ ಉದ್ಗಾರ.

ಇದೊಂದು 'ಅವಸರದಲ್ಲಿ....ನೆರೆದಂತೆ' ಶುಭಸೂಚನೆಯೇ. ಬಹಳ ಸ್ತಂತೋಷ. ನಾವು 'ಕಂಠೀರವ'ನ ಡೈಲಿಗೆ ಬಾತ್ಮೀದಾರರು 'ಇನ್ನೂ ಒಬ್ಬಿಬ್ಬರು ಸಿಕ್ಕದೆ' 'ಮೆರೆದಾಡಲು' ಮಾರ್ಗವಿಲ್ಲದೆ ಬಹಳ ಪೇಚಾಡುತ್ತಿದ್ದೆವು. ನಮಗೆ, ಶಾಲಾ ಮಾಸ್ತಿಕೆ ಇದ್ದು, ಆ ಮಾಸ್ತಿಕೆಗೆ ಸರಾಸರಿ ಸಂಬಳವಿದ್ದೂ, ಆ ಶಾಲಾ ಕೆಲಸ ಮಾತ್ರ ಮಾಡದ, ನಮ್ಮ ಡೈಲಿ ಕೆಲಸ ಮಾತ್ರ ಮಾಡುವ ಒಂದೆರಡು ಧಾಂಡಿಗ ಆಸಾಮಿಗಳು ಅಗತ್ಯ ಬೇಕಿದ್ದಿತು. ಅವರಲ್ಲಿ ಡೈಲಿ ಬಾತ್ಮೀದಾರರಾಗಿ ಬರೆಯಬಲ್ಲ ಒಬ್ಬರು ಈಗ, 'ಸೋಡ್ತಿಯಲ್ಲಿ ಪ್ರಥನು ಬಹುಮಾನ ಬಂದಂತೆ' ಕೂತಲ್ಲಿ ಸಿಕ್ಕಿದ ಹಾಗಾಯಿತು; ಬಿಡಿ! ಇನ್ನು ಬೇಕಾದುದೊಬ್ಬರೇ. ಅವರೂ ಸಿಕ್ಕಿಯಾರು ನೋಡೋಣ. ಕೊನೆಗೆ ನಮ್ಮ ಈ ಉಪಾಧಿ ಅಯ್ಯರರೇ, 'ಕಂಠೀರವ'ನ ಡೈಲಿಯ ಮೇಲೆ ಕನಿಕರವಿಟ್ಟು ಸಂಪಾದಿಸಿ ಕೊಟ್ಟಾರು, ನೋಡೋಣ.

ಏನಂಚ ಅದೆಲ್ಲಾ ಸರಿ. ಶುಭಮಸ್ತು! ಆದರೆ, 'ಕಂಠೀರವ'ನ ಡೈಲಿಗೆ ಮೊದಲಾಗಿ, ಈ ಉಪ ಅಧ್ಯಾಯರು, ನಮ್ಮಲ್ಲಿಂದ ಗಂಟುಮೂಟೆ ಕಟ್ಟಿ ಹೊರಡಲು ಅನುವಾದ ಯಾವುದೊಂದು ಬೆಳದಿಂಗಳ ಪತ್ರಿಕೆಗೋ, ಕರಿದಿಂಗಳ ಸಾಪ್ತಾಹಿಕಕ್ಕೋ ಪ್ರಶಂಸಾಪರವಾದ ತಮ್ಮ ಅಮೂಲ್ಯ, ಅವೇಘ ಲೇಖನಾಲೆಗಳನ್ನು ಬರೆದು ಅವುಗಳ ಉದ್ಧಾರಸಾಧನೆಗೆ ಯತ್ನಿಸಿದ್ದರೆ, ಬೇಸತ್ತ ಪವಿತ್ರ ಆತ್ಮಕ್ಕೆ ಎಂತಹ ಶಾಂತಿಯುಂಟಾಗುತ್ತಿದ್ದಿತು!

'ಹಳೆಯ ಬೋರ್ಡ್ ಆಡಳಿತವನ್ನು ಯದ್ವಾತದ್ವಾವಾಗಿ ದೂರಿದ್ದು' ಎಸ್. ಏಯವರದು ದೊಡ್ಡ ತಪ್ಪು. ಅದನ್ನೇ 'ಕಂಠೀರವ'ನು ಪ್ರಕಟಿಸಿದುದೂ ಅಷ್ಟೇ ದೊಡ್ಡ ತಪ್ಪು. ಈ ಅಪರಾಧಿಗಳಿಬ್ಬರ ವಿಚಾರಣೆಯೂ ಅಗತ್ಯವಾಗಿ ಆಗಬೇಕೀಗ. ಅದಕ್ಕೊಂದು - ಸಮಿತಿಯನ್ನೇರ್ಪಡಿಸುವುದು ಸುಲಭ. ಆ 'ಯದ್ವಾತದ್ವ'ದ ಗುಟ್ಟು ಬಲ್ಲ ನಮ್ಮ ಉಪಾಧ್ಯರು ಹೇಗೂ ಇದ್ದಾರೆ-ಹಳೆಯ ಆಡಳಿತದ ತುತ್ತೂರಿಯನ್ನು ಊದಲಿಕ್ಕೆ. ಅವರೇ 'ಸಿಕ್' ರಜಾ ತೆಗೆದುಕೊಂಡು, ಆ ಸಮಿತಿಯ ಅಧ್ಯಕ್ಷರಾಗಿ, ಆ 'ಯದ್ವಾತದ್ವ'ದ ವಿಚಾರಣೆ ನಡೆಸಿ, ಅಪರಾಧಿಗಳನ್ನು ದಂಡಿಸುವ ಒಂದು ರಿಪೋರ್ಟನ್ನಾದರೂ ಬರೆಯುವ ಈ ಲೋಕಸೇವೆಯ, ಲೋಕಶಿಕ್ಷಣದ ಪುಣ್ಯವನ್ನು ಕಟ್ಟಿಕೊಳ್ಳಬಾರದೇ?

'ಎಸ್. ಏಯ ಉದ್ದೇಶ ಕಂಠೀರವನನ್ನು ಪ್ರೋತ್ಸಾಹಿಸಬೇಕೆಂಬುದೇ?' ಎಂದಿಗೂ ಅಲ್ಲ; ಅವರ ಉದ್ದೇಶ 'ಕಂಠೀರವ'ನನ್ನು ಬಯ್ಗುಳಿಗೆ ಗುರಿಮಾಡುವುದು. ಅವು ನಮಗೂ ಗೊತ್ತಿದೆ. ಮಾತ್ರವಲ್ಲ; 'ಉಪಾಧ್ಯಾಯರು ತಮ್ಮ ಕಷ್ಟಗಳನ್ನು ನಿವಾರಿಸುವ ಪ್ರಯತ್ನದ ಪ್ರಸಂಗದಲ್ಲಿ ಅಧಿಕಾರಿ ವರ್ಗದವರು ಉಪಾಧ್ಯಾಯರ ಮೇಲೆ ಬೀಳುವಂತೆ ಉದ್ರೇಕಿಸುವ ಎಸ್. ಏಯು ವರ್ತನವನ್ನು' ಆ ಉಪ ಅಧ್ಯಾಯರಂತೆ ನಿಷೇಧಿಸಲು, ಸಂಪೂರ್ಣ ನಿಷೇಧಿಸಲು, ನಮಗೂ ಸಂಪೂರ್ಣ ಇಚ್ಛೆ ಇದೆ. ಆದರೇನು? ಆ ನಿಷೇಧಪ್ರದರ್ಶನವು ಬಿಸಿ ತುಪ್ಪವಾಗಿದೆ. ಉದ್ರೇಕಿಸಿದ ಮಾತ್ರದಿಂದಲೇ ಅಧಿಕಾರಿಗಳು ಉದ್ರೇಕಗೊಳ್ಳುವರೆಂದು ಅವರ ಮೇಲೆಯೂ ಒಂದು ಆರೋಪ ಹೊರಿಸಬೇಕಾಗಿದ್ದರೆ, ಎದೆ ಸ್ವಲ್ಪ ಗಟ್ಟಿ ಬೇಕು. ಅದೇನು, ಆ ಅಧಿಕಾರಿಗಳು ಎಸ್. ಏಯವರ ಗುಲಾಮರೇ? ವಿನಾಕಾರಣವಾಗಿ ಉದ್ರೇಕಗೊಳ್ಳಲು ಅವರೇನು ಹುಚ್ಚರೆ? ಉಪಾಧ್ಯಾಯರೆ! ಯಾರ ಮೇಲೆ ಬೇಕಾದರೂ ಬರೆಯಿರಿ. ದಕ್ಕೀತು. ಆದರೆ ತಾಬೇದಾರರಾಗಿ, ನೀವು ಯಾವುದಾದರೂ ನೆವದಿಂದ, ನಿಮ್ಮ ಮೇಲಿನ ಅಧಿಕಾರಿಗಳ ಮೈಮೇಲೆಯೂ ಬೀಳಹೋದರೆ ಮಾತ್ರ ನಿಮಗೆ ಸಿಕ್ಕೀತು. ಇಲ್ಲಿ ನಿಮ್ಮ ಪೂರ್ವಾಪರ ಜ್ಞಾನವನ್ನೆಲ್ಲಿ ಇಟ್ಟಿದ್ದೀರಿ? ಬಲ್ಲಿರಾ? ಇಲ್ಲಿ, ನೀವೇ ಸ್ವತಃ, ನಿಮ್ಮ ನಿಜರೂಪವನ್ನು, ಯಾರ ಸೇವಕರೆಂಬುದನ್ನು ಮೈಮರೆತಾದರೂ ಸೂಚಿಸುತ್ತಿದ್ದೀರಲ್ಲ!

'ಕಂಠೀರವ'ನ ಅಲಂಕಾರಕ್ಕೆ ಯಾರ ಭಾವಚಿತ್ರಗಳು ಬೇಕೆಂಬುದನ್ನು ಕೇಳಿ ತಿಳಿಯಲು ನಮಗಿನ್ನು ಕಷ್ಟವೇನೂ ಇಲ್ಲ. ಅದು ಡೈಲಿ ಮಾಡುವುದಕ್ಕಿಂತಲೂ ಹೆಚ್ಚು ಸುಲಭ. ಸ್ವಂತ ಕೆಲಸವನ್ನಾದರೂ ಬಿಟ್ಟು, ಪರರ ಶ್ರೇಯಸ್ಸಿಗಾಗಿ ಓಡಾಡುವ ಇಂತಹ ಉಪಾಧ್ಯರು ನನುಗೆ ಗಂಟುಬಿದ್ದಿರುವಾಗ ನನುಗಿನ್ನೇತರ ಚಿಂತೆ ಅದರಲ್ಲಿ? ಆದರೆ, ಯಾರ ಚಿತ್ರ ಮೊದಲು ಅಲಂಕರಿಸಬೇಕು? ನನುಗೆ ಉಚಿತಸೇವೆಯನ್ನು ಮಾಡಲು, ಭಾವಚಿತ್ರಗಳ ಆಲೋಚನೆ ಕೊಡಲೂ ಸೊಂಟಕಟ್ಟಿ ನಿಂತವರನ್ನು ಬಿಟ್ಟು, ಬೈಗಳಿಗೆ ತಲೆಯೊಡ್ಡಿಸುತ್ತಿರುವವರ ಚಿತ್ರವನ್ನು ಅಲಂಕರಿಸಿದರೆ ಜನವು ನಗಲಾರರೆ? ಆದುದರಿಂದ, ಎಸ್. ಎ. ಯವರು ಯಾರೆಂದು ವಿಚಾರಿಸುವ, ಆದರೆ ನೀವು ಇಂತಹವರೆಂದು ಹೆಸರು ಕೊಡಲು ಅನ್ನದ ಭಯವಿರುವ, ಶೂರ ಹೇಡಿಗಳಾದ ಒಕ್ಕೂಟ! ಉಪಾಧ್ಯಾಯರೆ! ನಿಮ್ಮ ಭಾವಚಿತ್ರವನ್ನು ಒಮ್ಮೆ ನಮ್ಮ ಪತ್ರಿಕೆಯಲ್ಲಿಯಾದರೂ ಅಲಂಕರಿಸುವಂತೆ ಮಾಡಿ ಸ್ವಾವಿೂ! ನಾವೆಲ್ಲರೂ ಕಣ್ಣಣಿಯೆ ದರ್ಶನವಾಡಿ, ಧನ್ಯರಾಗುತ್ತೇವೆ!

ಹಿಂದೂದೇಶ

ಕಾನ್‌ಸ್ಟೇಬಲ್ ವರ್ಗಕ್ಕೆ ಶಿಕ್ಷಣಕೊಡುವ ಸಾಮಾನ್ಯ ಲೇಖಗಳುಳ್ಳ ಒಂದು ಹಿಂದೀ ಮಾಸಪತ್ರಿಕೆಯನ್ನು ಹೊರಡಿಸ ಬೇಕಾಗಿ ಸಂಯುಕ್ತ ಪ್ರಾಂತದ ಪೊಲೀಸ್ ಅಧಿಕಾರಿಗಳು ಯೋಚಿಸುತ್ತಿದ್ದಾರೆ.

ಜಯಪುರದಲ್ಲಿ ಒಂದು ಹಳ್ಳಿಯಲ್ಲಿ ಚರ್ಮಾರರು ಸೇರಿ ನಡೆಸಲಿದ್ದ ಒಂದು ಉತ್ಸವವನ್ನು ತಡೆಯಲು ೧ ಸಾವಿರ ಮಂದಿ ಆಯುಧಪಾಣಿಗಳಾದ ಗುಜರರು ನೆರೆದಿದ್ದ ಸಂದರ್ಭದಲ್ಲಿ ಪೊಲೀಸರು ಅನಿರ್ವಾಹಪಕ್ಷದಿಂದ ಗುಂಡು ಹಾರಿಸಲಾಗಿ ೩ ಮಂದಿ ಸತ್ತು, ಚನ್ನೂರರ ಉತ್ಸವವು ಸಾಗಿತೆಂದು ತಿಳಿದು ಬರುತ್ತಿದೆ.

ಬರ್ಮಾ ಪ್ರಾಂತದ ಎಂ. ಎಲ್. ಎ.ಗಳಾದ ಡಾ. ತಿಯನ್‌ಮಂಗ್ ಎಂಬವರು ಸಂಪಾದಕರಾಗಿರುವ, ವಾರಕ್ಕೆ ಮೂರು ಸಲ ಹೊರಡುವ 'ನ್ಯೂ ಬರ್ಮ' ಎಂಬ ಆಂಗ್ಲ ಪತ್ರಿಕೆಯು ಹಿಂದೆ ಕಟ್ಟಿದ ಸೆಕ್ಯುರಿಟಿಯಲ್ಲಿ ರೂ. ೫೦೦೦ನ್ನು ಸರಕಾರವು ಈಗ ಮುಟ್ಟುಗೋಲು ಹಾಕಿದೆ.

ಕುರುಕ್ಷೇತ್ರದ ಮಹಾಯಾತ್ರಾಕಾಲದಲ್ಲಿ ವಿಪರೀತ ಮಳೆ, ಬಿರುಗಾಳಿಯಿಂದ ಪ್ರಯಾಣಿಕರು ಬಹಳ ಕಷ್ಟಕ್ಕೀಡಾದರು. ಮರಗಳುರುಳಿ ಕೆಲವು ಪ್ರಾಣನಷ್ಟವೂ ಆಗಿರಬೇಕು.

ಕಟಕಿನ ಬಳಿ ಟಿಕೆಟಿಲ್ಲದೆ ಪ್ರಯಾಣಮಾಡುತ್ತಿದ್ದ ಒಬ್ಬ ೧೩ ವರ್ಷದ ಪೋರನಿಗೆ, ಬಿ. ಎಸ್. ರೈಲ್ವೆಯ ಟಿಕೆಟ್ ಕಲೆಕ್ಟರು ಚೆನ್ನಾಗಿ ಹೊಡೆದ ಪರಿಣಾಮವಾಗಿ, ಆ ಹುಡುಗ ಹೆದರಿ ಓಡುವ ಟ್ರೈನಿನಿಂದ ಕೆಳಗೆ ಬೀಳುವಂತಾಯಿತೆಂದೂ, ಈಗ ಆ ಟಿಕೆಟ್ ಕಲೆಕ್ಟರನ ಮೇಲೆ ಮೊಕದ್ದಮೆಯಾಗಿದೆ ಎಂದೂ ತಿಳಿದುಬರುತ್ತಿದೆ.

ಶ್ರೀಯುತ ಬಿಲ್ಲಾರವರು ತಿರುವಾಂಕೂರಿನ ಹರಿಜನ ಕೇಂದ್ರಗಳನ್ನು ಸಂದರ್ಶಿಸುತ್ತ ಅಲ್ಲಲ್ಲಿ ಭಾಷಣಗಳನ್ನು ಕೊಡುತ್ತಿದ್ದಾರೆ.

ನಮ್ಮ ಪ್ರಾಂತದ ಮಾಜಿ ರೆವಿನ್ಯೂ ಬೋರ್ಡ್ ಮೆಂಬರರಾಗಿದ್ದ ಸರ್. ಎಫ್. ಎ. ನಿಕೋಲ್‌ಸನ್‌ರವರು ದೈವಾಧೀನರಾದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಹಿಳೆಯರಿಗೂ ಸ್ಥಾನ ಕೊಡಬೇಕೆಂಬ ಅರ್ಥದ ಮನವಿಯೊಂದು ಗುಜರಾತಿನ ಹಲವು ಕಾಂ॥ ಮೆಂಬರರಾದ ಮಹಿಳೆಯರಿಂದ ಪಂ. ಜವ್ಹರ ಲಾಲರಿಗೆ ಕಳುಹಿಸಲ್ಪಟ್ಟಿದೆ.

ನಮ್ಮ ಆಧಿಪತ್ಯದಲ್ಲಿರುವ ಹಲವು ಸಾಲದ ಮತ್ತೂ ಮಾರಾಟದ ಸಂಸ್ಥೆಗಳ ಹಾಗೂ ಸ್ಪೋರ್ಸ್ ಸಂಘಗಳ ಚಟುವಟಿಕೆಗಳನ್ನು ಜತೆಗೂಡಿಸುವ ಒಂದು ಪ್ರಾಂತಿಕ ಮಾರ್ಕೆಟಿಂಗ್ ಸೊಸೈಟಿಯ ನಿರ್ಮಾಣದ ಸಲವಾಗಿ ಕೊಒಪರೇಟಿವ್ ಸಂಘಗಳ ರಿಜಿಸ್ಟ್ರಾರರಾದ ಶ್ರೀ. ಎಂ. ಗಿರಿಯಪ್ಪನವರು, ಜ್ಯಾಂಟ್ ರಿಜಿಸ್ಟ್ರಾರ್ ಮತ್ತೂ ಶ್ರೀ. ಟಿ. ಎ. ರಾಮಲಿಂಗಂ ಚೆಟ್ಟಿಯಾರವರ ಸಲಹೆಸೂಚನೆಗಳೊಡನೆ, ಒಂದು ಯೋಜನೆಯನ್ನು ತಯಾರಿಸುತ್ತಿದ್ದಾರೆ. ಈ ಯೋಜನೆಯು ಬೇಗನೆ ಸರಕಾರದ ಸಮಾಲೋಚನೆಗೆಂದು ಒಪ್ಪಿಸಲ್ಪಡಲಿದೆ.

ನಮ್ಮ ಸಾರ್ವಭೌಮರ ಪಟ್ಟಾಭಿಷೇಕದ ಸಂಬಂಧದ ಢಿಲ್ಲಿ ದರ್ಬಾರಿನ ಸಮಯದಲ್ಲಿ ಸಾರ್ವಭೌಮರ ಬದಲಾಗಿ ಅರ್ಲ್ ಆಫ್ ಎತ್ಲೋನ್‌ರವರೋ, ಯಾರ್ಕಿನ ಡ್ಯೂಕ್ ಮತ್ತೂ ಡಚಸ್‌ರವರೋ ನಿಯೋಜಿಸಲ್ಪಡಬಹುದೆಂದು ವಾರ್ತೆ ಇದೆ.

ಹೈದರಾಬಾದ್ ಸಂಸ್ಥಾನದ ವಿದ್ಯಾರ್ಥಿವೇತನದ ಕಮಿಟಿಯು ಈ ಬಾರಿ ೯೦೮ ಬಡ ವಿದ್ಯಾರ್ಥಿಗಳಿಗೆ ೨೫ ಸಾವಿರ ರುಪಾಯಿಗಳ ವಿದ್ಯಾರ್ಥಿವೇತನವನ್ನು ಹಂಚಿದೆ.

ದೇವಸ್ಥಾನದಲ್ಲಿ ನಡೆದುದೆಂಬ ಒಂದು ಜುಗಾರಾಟದ ಸಂಬಂಧ ಒಪ್ಪಿಗೆ ಪಡೆಯಬೇಕೆಂದು ಆ ಪೆನಕೊಂಡ ಪ್ರಾಂತದ ದೇವಸ್ಥಾನದ ಅರ್ಚಕನನ್ನು ಅಕ್ರಮನಿರ್ಬಂಧದಲ್ಲಿರಿಸಿ ಹಿಂಸಿಸಿದರೆಂದು ಆಲ್ಲಿನ ಸಬ್ ಇನಸ್ಪೆಕ್ಟರರು ನ್ಯಾಯಾಧೀಶರ ಮುಂದೆ ವಿಚಾರಣೆಗೆ ಗುರಿಯಾಗಿದ್ದಾರೆ.

ಬೊಂಬಾಯಿಯ ಸೆನೆಟ್ ಮಂದಿರದಲ್ಲಿ ವಿದ್ಯಾರ್ಥಿಗಳು ಗಲಭೆ ಎಬ್ಬಿಸಲು ಹುರಿದುಂಬಿಸಿದ ಆ ಸೆನೆಟ್ ಮೆಂಬರರ ಮೇಲೆ ಒಂದು 'ಸೆನ್ಸರ್ ಮೋಶನ್' ಬರುವ ವಿಾಟಿಂಗಿನಲ್ಲಿ ಬರಲಿದೆ.

ಸಾಮಾಜಿಕ ಅತೃಪ್ತಿಗೂ ಅಶಾಂತಿಗೂ ಕಾರಣವಾದೀತೆಂಬ ಕಾರಣದಿಂದ 'ಪಂಡಿತ ಜವ್ಹರಲಾಲರ ಸಂದೇಶ'ವೆಂಬ ಟೂಕಿ ಫಿಲ್ಮನ್ನು ಬೊಂಬಾಯಿಯ ಫಿಲ್ಮ್ ಸೆನ್ಸರರು ಅನುಮತಿ ಕೊಡಲು ತಿರಸ್ಕರಿಸಿದ್ದಾರೆ.

ಲಕ್ನೋವಿನಲ್ಲಿ ಒಂದು ಮಿಲಿಟರಿ ಬಸ್ಸು ಮಗುಚಿ ೩ ಮಂದಿಗೆ ಗಾಯವಾಗಿದೆ. ಅವರಲ್ಲಿ ಒಬ್ಬರು ಲೆಫ್ಟನೆಂಟರು.

ಪಾಟ್ನಾದ ಬಳಿ ವಿಷವಾಯುನಿಂದ ಇಬ್ಬರು ಕೂಲಿಗಳು ಸತ್ತರು. ಅವರು ಅಲ್ಲಿಯೊಂದು ನಾಲಾ ಕೆಲಸ ಮಾಡುತ್ತಿದ್ದರು.

ದಕ್ಷಿಣ ಆಫ್ರಿಕೆದ ಡೆಲಿಗೇಶನಿನವರ ಇಂಡಿಯದ ಸಂಚಾರ ಕ್ರಮದಲ್ಲಿ ದಕ್ಷಿಣ ಇಂಡಿಯವನ್ನೂ ಸೇರಿಸುವ ಏರ್ಪಾಡಾಗಿದೆ.

ಶ್ರೀ. ಎಸ್. ಪಿ. ವರ್ಮರವರು ೪ ತಿಂಗಳ ರಜೆ ಪಡೆದಿರುವುದರಿಂದ ಮಿ. ಗುಲಾಮ್ ಮಹಮ್ಮದರು ಫ್ಯಾನೆನ್ಸಿಯಲ್ ಆಫೀಸರರಾಗಿಯೂ, ಮಿ. ಟಿ. ಎನ್. ರಾಜಗೋಪಾಲನ್‌ರವರು ಪೋಸ್ಟು ಮತ್ತು ಟೆಲಿಗ್ರಾಫಿನ ಫ್ಯಾನೆನ್ಸ್ ಡೆಪ್ಯುಟಿ ಡ್ಯಾರೆಕ್ಟರ್ ಜನರಲರಾಗಿಯೂ ನೇಮಕಹೊಂದಿದ್ದಾರೆ.

ನಮ್ಮ ಗವರ್ನರರಾದ ಲಾರ್ಡ್ ಎರಸ್ಕೈನ್ ಪ್ರಭುಗಳು ಪತ್ನೀಸಹಿತರಾಗಿ ಉದಕಮಂಡಲದಿಂದ ಮದ್ರಾಸಿಗೆ ಬಂದು, ಬೊಂಬಯಿಗೆ ತೆರಳಿರುವರು—ವಿಲಾಯಿತಿಗೆ ಪ್ರಯಾಣ ಮಾಡಲಿಕ್ಕೆ.

ಸೂರ್ಯಗ್ರಹಣದ ಯಾತ್ರಾರ್ಥಿಗಳಾಗಿ, ಕುರುಕ್ಷೇತ್ರದಲ್ಲಿ ೧೦ ಸಾವಿರ ಸಾಧುಗಳು ಕೂಡ ಒಂದೂಕಾಲು ಲಕ್ಷ ಮಂದಿ ಸೇರಿರುವರು. ಇಲ್ಲೀಗ ಕಾಲೆರಾ ಕಲೆಹಾಕಿದೆ.

ಎಲಿಮೆಂಟರಿ ಶಾಲೆಗಳು ವಿದ್ಯಾಭ್ಯಾಸದ ಪದ್ಧತಿಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಲು ವಿದ್ಯಾಂಗದ ಸಬ್ ಕಮಿಟಿಯೊಂದು ಉದಕಮಂಡಲದಲ್ಲಿ ನೆರೆದು ೩ ರೀತಿಯ ಎಲಿಮೆಂಟರಿ ಶಾಲೆಗಳನ್ನು ಸ್ಥಾಪಿಸಬೇಕು, ಕಲಿಯುವ ಅವಧಿ ಕಡಿಮೆಯಾಗಬೇಕು, ಚುರುಕು ವಿದ್ಯಾರ್ಥಿಗಳಿಗೆ ಬೇಗನೆ ಪ್ರಮೋಶನ್ ಸಿಕ್ಕುವಂತಾಗಬೇಕು, ಶಿಕ್ಷಣದ ಕ್ರಮ ಪೂರಾ ಬೇರೆಯಾಗಬೇಕು, ಶಿಕ್ಷಣವು ದೇಶಭಾಷೆಯಲ್ಲಾಗಬೇಕು, ಪ್ರತಿ ಹಾಯರ್ ಎಲಿಮೆಂಟರಿ ಶಾಲೆಗಳಿಗೂ ಹೂದೋಟಗಳಿರಬೇಕು, ಧಾರ್ಮಿಕ ಶಿಕ್ಷಣವೂ ಮಕ್ಕಳಿಗೆ ದೊರೆಯಬೇಕು ಎಂದು ಮುಂತಾದ ಶಿಫಾರಸುಗಳು ಹೊರಟಿವೆ.

ಮಧ್ಯಾರಾ ಪ್ರಾಂತದ ಅವನಿಪಟ್ಟಿ ಗ್ರಾಮದಲ್ಲಿ ಒಂದು ಕುಟುಂಬದ ಗಂಡ, ಹೆಂಡತಿ, ಮಗ, ಮತ್ತೊಬ್ಬ ಹೀಗೆ ೪ ಮಂದಿಯ ಕೊಲೆಯಾಗಿದೆ. ಇವರ ತಲೆಗಳನ್ನು ಕಡಿದು ಮುಂಡದಿಂದ ಬೇರೆ ಮಾಡಿಟ್ಟಿವೆ.

ಮುನಿಸಿಪಲ್ ಸೆನಿಟರಿ ಸಿಬಂದಿಯನ್ನು ಸೆನಿಟರಿ ಕಾರ್ಯಗಳಿಗೆ ಅಲ್ಲದೆ ಇತರ ಕೆಲಸಗಳಿಗೆ ಉಪಯೋಗಿಸಕೂಡದೆಂದು ನಮ್ಮ ಆಧಿಪತ್ಯದ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಇವರ ಅಪ್ಪಣೆ.

ಕರಾಚಿಯಲ್ಲಿ ನೀರಿನ ವೀರಕ್ಷಾಮ—ಆ ಸಂಬಂಧ ಆ ಕಾರ್ಪರೇಶನಿನವರು, ತಮ್ಮದೊಂದು ವಿಾಟಿಂಗಿನಲ್ಲಿ ಅಲ್ಲಿಗೊಬ್ಬ ಜಲಪರೀಕ್ಷೆಯ ಪಂಡಿತರನ್ನು ತಮ್ಮ ಪರವಾಗಿ ಒದಗಿಸಿಕೊಡಲು ಸರಕಾರವನ್ನು ಪ್ರಾರ್ಥಿಸಬೇಕೆಂದು ನಿರ್ಧರಿಸಿರುವರು.

ಮಹಾತ್ಮಾಜಿಯವರು, ಕೆಲವು ಮಂದಿ ವಾರ್ಧಾ ಆಶ್ರಮವಾಸಿಗಳೊಡನೆ, ವಾರ್ಧಾಕ್ಕೆ ಏಳು ಮೈಲು ದೂರವಿರುವ ಶಿವಗಾಂವ್ ಎಂಬ್ಯಗ್ರಾಮಕ್ಕೆ ತೆರಳಿರುವರು. ಇನ್ನವರ ಶಾಶ್ವತ ನಿವಾಸವು ಅಲ್ಲಿಯೇ.

ಇಂಡಿಯಾ ಸರಕಾರದ ಅಧೀನವರ್ಗದಲ್ಲಿ, ೧೯೩೮ರಲ್ಲಿ ತಾತ್ಕಾಲಿಕವಾಗಿ ಕಡಿಮೆ ಮಾಡಿದ ಸ್ಥಳೀಯ ಭತ್ತೆ ಮತ್ತೂ ಎಲೊವೆನ್ಸ್‌ಗಳ ಕಡಿತವನ್ನು ಈಗ ಶಾಶ್ವತವಾಗಿ ಮಾಡಲಾಗಿದೆ.

ಸೆಕೆಂಡರಿ ವಿದ್ಯಾಭ್ಯಾಸದ ಪದ್ಧತಿಯಲ್ಲಿ ತಕ್ಕ ಮಾರ್ಪಾಡುಗಳನ್ನು ಮಾಡಬೇಕೆಂದು, ಪ್ರಾಂತಿಕ ಸರಕಾರಗಳು ಸಲಹೆ ಕೊಟ್ಟಂತೆ, ಇಂಡಿಯಾ ಸರಕಾರವೂ ಆ ಪದ್ಧತಿಯನ್ನು ಪುನಃ ವ್ಯವಸ್ಥೆಗೊಳಿಸಲಿದೆ. ಇದಕ್ಕಾಗಿ ಸದ್ಯದಲ್ಲೇ ಇಂಡಿಯಾಕ್ಕೆ ಕೆಲವು ಪಂಡಿತರನ್ನು ಇಂಗ್ಲೆಂಡಿನಿಂದ ಕರೆಯಿಸಿಕೊಳ್ಳುವ ಏರ್ಪಾಡಾಗುತ್ತಿದೆ.

ಕಲ್ಕತ್ತೆಯಲ್ಲಿ ಭಿಕ್ಷುಕರ ಹಾವಳಿಯನ್ನು ಅಡಗಿಸಲು ಪೋಲೀಸರು ಉದ್ಯುಕ್ತರಾಗಿದ್ದಾರೆ. ೧ ಸಾವಿರ ಮಂದಿ ಭಿಕ್ಷುಕರನ್ನು ಕೈದು ಮಾಡಿ ವಿಚಾರಣೆಗೊಳಪಡಿಸಿದುದರಲ್ಲಿ ಕೆಲವರಿಗೆ ಕೋರ್ಟ್ ಏಳುವ ತನಕ ದಂಡನೆ; ಕೆಲವರಿಗೆ ೧ ತಿಂಗಳು.

ನಮ್ಮ ವೈಸರಾಯರು ಜುಲಾಯಿಯ ಕೊನೆಯ ವಾರದಲ್ಲಿ ಹೊಂಟು, ರಾಂಪುರ, ರಾಂಚಿ, ಕಲ್ಕತ್ತಾ, ಕಟಕ್ ಮೊದಲಾದ ಪ್ರದೇಶಗಳನ್ನು ಸಂದರ್ಶಿಸಿ, ಆಗೋಸ್ತು ೧೦ಕ್ಕೆ ಹಿಂತಿರುಗುವರು.

ದಿ ಸ್ವಸ್ತಿಕಾ ಆಯಿಲ್ ಮಿಲ್ಸ್, ಲಿಮಿಟೆಡ್, ಬೊಂಬಯಿ, 15.

ಮಂಗಳೂರು

ಇದೇ ತಿಂಗಳ ತಾ. ೨೮ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ, ಇಲ್ಲಿಯ ಸೈಂಟ್ ಎಲೋಶಿಯಸ್ ಕಾಲೇಜಿನ ಸಂಸ್ಕೃತ ಪಂಡಿತರಾದ ಶ್ರೀಮಾನ್ ನಿಡ್ಡೋಡಿ ಅನಂತ ಉಪಾಧ್ಯಾಯರವರು ಇಲ್ಲಿಯ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ, 'ಸಮಾಜ ಸುಧಾರಣೆ'ಯ ಕುರಿತು ಉಪನ್ಯಾಸ ಕೊಡುವರು. ಸರ್ವರಿಗೂ ಸುಸ್ವಾಗತ.

ನಮ್ಮ ಡಿ. ಬೋ. ಉದ್ಯೋಗಿಗಳ ಸಮಿತಿಯ ಒಂದು ವಿಾಟಿಂಗು, ಇಲ್ಲಿಯ ಗಣಪತಿ ಹ್ಯಾ ಸ್ಕೂಲ್ ಹಾಲಿನಲ್ಲಿ ಕಳೆದ ಶನಿವಾರ ಸಂಜೆ ಶ್ರೀ. ಶ್ರೀನಿವಾಸ ಕಿಣಿ, ಕಾಸರಗೋಡು ಬೋ॥ ಹ್ಯಾ ಸ್ಕೂಲ್ ಹೆಡ್‌ಮಾಸ್ಟರ್ ಇವರ ಅಧ್ಯಕ್ಷತೆಯಲ್ಲಿಯೂ, ಆದಿತ್ಯವಾರ ಬೆಳಗ್ಗೆ ಬೋರ್ಡ್ ಸೆಕ್ರಟರಿ ಶ್ರೀ. ಸುಂದರರಾಯರ ಅಧ್ಯಕ್ಷತೆಯಲ್ಲಿಯೂ ನೆರೆದು, '೧ ಆಣೆಯ ಕಟ್' ಮೊದಲಾದ ಕೆಲವೊಂದು ವಿಷಯಗಳ ಕುರಿತು ಆಲೋಚಿಸಿತು. ಪ್ರೆಸಿಡೆಂಟರಲ್ಲಿ ತಮ್ಮ ಅರಿಕೆಯನ್ನು ಮಾಡಿಕೊಳ್ಳುವುದಕ್ಕಾಗಿ, ಆ ಡೆಪ್ಯುಟೇಶನಿನ ಪ್ರತಿನಿಧಿಗಳಾಗಿ ಆಗಿ॥ ಇಂಜಿನಿಯರ್ ಶ್ರೀ. ಶ್ರೀನಿವಾಸರಾವ್, ಉಡುಪಿ ಶಾಲಾ ಉಪಾಧ್ಯಾಯ ಶ್ರೀ. ಎಚ್. ದೇವರಾವ್, ಇಂಜಿನಿಯರ್ ಆಫೀಸಿನ ಶ್ರೀ. ರಾಮಕೃಷ್ಣರಾವ್ ಮೊದಲಾದವರನ್ನು ಆರಿಸಲಾಯಿತು. ನಮ್ಮ ಡಿ॥ ಬೋ॥ ಪ್ರೆಸಿಡೆಂಟರು, ಈ ಡೆಪ್ಯುಟೇಶನಿನವರಿಗೆ ಸಮಾಧಾನಕರವಾದ ಉತ್ತರ ಹೇಳುತ್ತ 'ಈ ದಶಂಬರದ ಸುಮಾರಿಕ್ಕೆ ಬೋರ್ಡ್ ಉದ್ಯೋಗಿಗಳೆಲ್ಲರ ಸಂಬಳದ ಕಡಿತವನ್ನೂ ನಿವಾರಿಸಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಈ ಸಂಘಕ್ಕೆ ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳನ್ನೂ ಸೇರಿಸಿಕೊಳ್ಳಲು ಮನಸ್ಸುಮಾಡಿರುವುದು ಬಹಳ ಸಂತೋಷಕರ. ನಿಮ್ಮ ಬಿನ್ನವತ್ತಳೆಯನ್ನು ಸರಕಾರಕ್ಕೆ ಒಪ್ಪಿಸಲು ಅಡ್ಡಿ ಇಲ್ಲ' ವೆಂದು ಸ್ಪಷ್ಟಪಡಿಸಿರುವರಾಗಿ ತಿಳಿದುಬರುತ್ತಿದೆ.

ನಮ್ಮ ಹೊಸ ಪೋರ್ಟ್ ಆಫೀಸರರಾದ ಎಂ. ಸ್ಮೀಯವರು ನಿನ್ನೆ ಚಾರ್ಜು ವಹಿಸಿಕೊಂಡರು.

'ಸೆಂಟ್ರಲ್ ಮ್ಯುಚುವಲ್ ಲ್ಯಾಫ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್, ಬೊಂಬಯಿ' ಎಂಬೀ ಸಂಸ್ಥೆಯ ಚೀಫ್ ಏಜೆಂಟರಾದ 'ದಿ ಪಯನಿಯರ್ ಜನರಲ್ ಇನ್ಶುರೆನ್ಸ್ ಏಜೆನ್ಸಿ—ಪಶ್ಚಿಮ ಕರಾವಳಿ' ಇವರು ನಿನ್ನೆ ಸಂಜೆ, ಇಲ್ಲಿನ ರಥಬೀದಿಯ ಮೆ॥ ಸರ್‌ಕಾರರವರ ಪಾಪಿನ ಬಳಿ, ತಮ್ಮ ಕಾರ್ಯಾಲಯವನ್ನು, ಸಮುಚಿತವಾದ ಉತ್ಸವ ಕ್ರಮ ಸಂಪ್ರದಾಯಗಳೊಡನೆ ತೆರೆದಿರುವರು. ಆಮಂತ್ರಿತರಾದ ಅನೇಕ ಮಂದಿ ಪುರಪ್ರಮುಖರು ಈ ಆರಂಭಸಮಾರಂಭಕ್ಕೆ ಪಡೆ ಮಾಡಿಸಿದ್ದರು.

ತಾಲೂಕು ವರ್ತಮಾನ.

ಕಾರ್ಕಳ:—ಇಲ್ಲಿಯ ಬಾಣಂತಿ ಮತ್ತು ಶಿಶುಸಂಗೋಪನಾಲಯದ ಹೊಸ ಕಟ್ಟೋಣದ ಪ್ರವೇಶೋತ್ಸವವು ಇದೇ ತಾರೀಕು ೧೫—೬—೧೯೩೬ರ ದಿನ ಸಾಯಂಕಾಲ ಆ ಕಟ್ಟೋಣದಲ್ಲಿಯೇ ನಡೆಯಿತು. ಸ್ಥಳೀಯ ಹೆಲ್ತ್ ಇನ್ಸಪೆಕ್ಟರ ಶ್ರೀ. ವೇಣುಗೋಪಾಲ ರಾಯರು ಸಂಗೋಪನಾಲಯದಿಂದ ಈ ವರೆಗೆ ಆದ ಮತ್ತು ಇನ್ನು ಮುಂದೆ ಆಗಬೇಕಾದ ಕಾರ್ಯಗಳು, ಮಹಾಜನರಿಂದ ದೊರೆಯಬೇಕಾದ ಸಹಾಯ ಪ್ರೋತ್ಸಾಹಗಳ ಕುರಿತು ಮಾತನಾಡಿದ ಬಳಿಕ, ಕಟ್ಟೋಣವನ್ನು ಕಟ್ಟಿಸಿ ಕೊಟ್ಟ ಶ್ರೀ ವೆಂಕಟ್ರಮಣ ದೇವಾಲಯದ ಕಡೆಯಿಂದ ಆದರ ಅಡಳ್ತೆ ಮೊಕ್ತೇಸರ ಶ್ರೀ। ಕಾರ್ಕಳ ಸ್ವೊರು ಪ್ರಭುಗಳವರು ಭಾಷಣ ಮಾಡುತ್ತ ತನ್ನ ಕಾರ್ಯದಲ್ಲಿ ಉಚಿತ ಸಲಹೆಗಳನ್ನಿತ್ತವರೆಲ್ಲರಿಗೂ ಆಭಾರವನ್ನು ಸೂಚಿಸಿ ಆದೇ ಪ್ರಕಾರದಲ್ಲಿ ತೋಡಿದ ಬಾವಿಯ ಕೆಲಸವು ಪೂರ್ಣವಾದ ಬಳಿಕ ಯಾವುದು ಜಾತಿ-ಮತಭೇದವಿಲ್ಲದೆ ಎಲ್ಲರ ಉಪಯೋಗಕ್ಕೆ ಬರುವಂತೆ ಮಾಡುವೆನೆಂದರು. ಅನಂತರ ಸಂಗೋಪನಾಲಯದ ಪರವಾಗಿ ಶ್ರೀ. ವಕೀಲ ಎಚ್. ಎಸ್. ಹುಸ್ಸೇನ ಸಾಹೇಬರವರು ದೇವಸ್ಥಾನಗಳಂಥ ಸಂಪನ್ನಸಂಸ್ಥೆಗಳಿಂದ ಹೀಗೆ ಆಗಬೇಕಾದ ವಿದ್ಯಾಪ್ರಚಾರ ಆರೋಗ್ಯಪ್ರಚಾರ ಮೊದಲಾದ ಸಾರ್ವಜನಿಕ ಉಪಕಾರದ ಕಾರ್ಯಗಳನ್ನು ಬಹಳವಾಗಿ ಪ್ರಶಂಸಿಸಿ ಕಾರ್ಕಳದ ಶ್ರೀ ವೆಂಕಟ್ರಮಣ ದೇವಾಲಯವು ಈ ಭಾಗದಲ್ಲಿ ಅಗ್ರಸ್ಥಾನವನ್ನು ಪಡೆದಿರುವದಕ್ಕಾಗಿ ತನಗಾಗಿರುವ ಮಹತ್ತಾದ ಸಂತೋಷವನ್ನು ಸೂಚಿಸಿ ನೆರೆದವರಿಗೆ ಧನ್ಯವಾದಗಳನ್ನು ಕೊಡುತ್ತ ಮುಕ್ತಾಯಭಾಷಣ ಮಾಡಿದ ಬಳಿಕ ವಕೀಲ ಶ್ರೀ. ಇಡ್ಯ ವಾಸುದೇವ ರಾಯರು ತನ್ನ ಹಾಸ್ಯರಸಗರ್ಭಿತ ಮಾತುಗಳಿಂದ ಕಟ್ಟೋಣದ ಸ್ಥಳವಾಹ್ಯತ್ಯೆಯನ್ನು ತಿಳಿಸಿದರು. ಆ ಮೇಲೆ ಕಾಫಿ ಕಿಂಡಿ, ಸಂಗೀತದೊಡನೆ ಸಭಾಂತ್ಯವಾಯಿತು. ಕಾರ್ಕಳದ ಎಲ್ಲ ಉಚ್ಚ ಸರಕಾರಿ ನೌಕರರೂ ಪ್ರತಿಷ್ಠಿತ ಸದ್ಗೃಹಸ್ಥರೂ ಈ ಸಮಾರಂಭಕ್ಕೆ ಅಮಂತ್ರಿತರಾಗಿದ್ದರು.

ಕಾಸರಗೋಡು:—ಮದ್ರಾಸು ಹೈಕೋರ್ಟಿನ ಜಸ್ಟೀಸರಾದ ಹೊನರೇಬಲ್ ಜಸ್ಟೀಸ್ ದಿವಾನ ಬಹದೂರ್ ಕೆ. ಪಿ. ಲಕ್ಷ್ಮಣ ರಾಯರು ಇಲ್ಲಿಗೆ ತಾ. ೧೪ರಲ್ಲು ಚಿತ್ತೈಸಿದರು. ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನವನ್ನು ಸಂದರ್ಶಿಸಿ ಪೂಜೆ-ಫಲಾಹಾರಾದಿಗಳು ಕಳೆದ ಬಳಿಕ ಟೌನು ಬೋರ್ಡು ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಲೇಜಿವ್ ಮುಂತಾದ ಚಟುವಟಿಕೆಗಳನ್ನು ನೋಡಿ ಸದಭಿಪ್ರಾಯ ಪಟ್ಟರು.

ಜಿಲ್ಲಾ ಬೋರ್ಡಿನ ವೈಸ್ ಪ್ರೆಸಿಡೆಂಟರಾದ ಮಿ. ಎ. ಸಿ. ಗೊನ್ಸಾಲ್ವಿಸರೂ ಮೆಂಬರುಗಳಾದ ರಾಗಣ್ಣಾದ ಪಿ. ವಿಠಲ ಭಂಡಾರಿ, ಕೆ. ಕೃಷ್ಣ ಭಟ್, ಮದರಾ, ಜನಾಬ್ ಕುಂಞ ಕಲಂದ ಸಾಹೇಬ್ ಬಹದೂರ್, ಜನಾಬ್ ಮಹಮ್ಮದ್ ಶೆರೂಲ್ ಸಾಹೇಬ ಬಹದೂರ್ ಮುಂತಾದ ಮಹನೀಯರೂ ಕೃತ್ರಿಕೆರೆಗೆಯ ಬಾಬಿನಲ್ಲಿ ತಾ. ೧೪ಕ್ಕೆ ಇಲ್ಲಿಗೆ ಚಿತ್ತೈಸಿದ್ದರು.

ಶ್ರೀಯುತ ಪಿ. ವಿಠಲ ಭಂಡಾರಿಯವರ ಡಿಸ್ಪೆನ್ಸರಿಯ ಬಳಿ ಮೊಗ್ರಹ ಬದಿಯ ನೀಳವಾದ ತೆಂಗಿನ ಮರವೊಂದು ರಾತ್ರಿ ಕಾಲದಲ್ಲಿ ಬೀಳುವಾಗ ಟೆಲಿಗ್ರಾಫ್ ತಂತಿಗೆ ತಾಗಿ ಜಾರಿ ಇನ್ನೊಂದು ದಿಕ್ಕಿಗೆ ಬಿತ್ತು. ತಂತಿಯು ತುಂಡಾಗಿ ತಂತಿ ಚಲಾವಣೆಗೆ ಕೆಲವು ಗಂಟೆ ತೊಡಕಾದರೂ ದೊಡ್ಡ ಕಟ್ಟೋಣವೊಂದು ಸುರಕ್ಷಿತವಾಯಿತು.

ಮಂಗಲಪಾಡಿ:—ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೧೭ರಲ್ಲು ಒಂದು ಯಕ್ಷಗಾನ ಕೂಟವು ವಿಜೃಂಭಣೆಯಿಂದ ಜರಗಿತು. ಶ್ರೀಯುತ ಗೋಪಾಲ ಮಯ್ಯರ ಗಾನವೂ ರಾ। ಎಂ. ನಾರಾಯಣ ಶ್ಯಾನುಭಾಗರ ಮೃದಂಗವಾದನವೂ ಸುಶ್ರಾವ್ಯವಾಗಿದ್ದುವು.

ಮೂಡಬಿದ್ರೆ:—ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯ ಜನಪ್ರೀತ ಕಂಪೌಂಡರಾದ ಮು. ರಾ. ರಾ. ಜಿ. ರಾಮರಾಯರಿಗೆ ಏರ್ಪಡಿಸಿದ್ದ ಒಂದು ಸತ್ಕಾರ ಕೂಟವು ಇದೇ ತಾ. ೯—೬—೧೬ರಲ್ಲು ಇಲ್ಲಿಯ ಗ್ರಾಮ ಪಂಚಾಯತ ಕೋರ್ಟಿನಲ್ಲಿ ಮು. ಮೂಡಬಿದ್ರೆ ಫಿರ್ಕಾ ಮುಣಿಗಾರರಾದ ಕೆ. ಎಂ. ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಮು. ರಾ. ರಾ. ಜಿ. ರಾಮರಾಯರು ಶಿವಮೊಗ್ಗ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟು ಅವರ ಸ್ಥಾನದಲ್ಲಿ ಅಲ್ಲಿಯ ಮು. ಕಾರ್ಕಳ ಮಂಗೇಶ ರಾಯರು ನಿಯಮಿಸಲ್ಪಟ್ಟಿರು.

ಉಡುಪಿ:—ಇದೇ ತಾ. ೧೪ನೇ ಆದಿತ್ಯವಾರ ಸಂಜೆ ಶ್ರೀಕೃಷ್ಣ ಸನ್ನಿಧಿಯಲ್ಲಿ ಮೈಸೂರು ಆಸ್ಥಾನ ಸಂಗೀತ ವಿದ್ವಾನ್ ದೇವೇಂದ್ರಪ್ಪ ಸವರ ಶಿಷ್ಯರೂ ನಮ್ಮೂರವರೂ ಆದ ಶ್ರೀ. ಸಿ. ನಾರಾಯಣ ಶಾಸ್ತ್ರಿಗಳವರ ಬಾಯಿಪಾಡುವಿಕೆಯ ಸಂಗೀತ ಸೇವೆಯು ಸಂಗೀತಾಭಿಮಾನಿಗಳಾದ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರ ಉದಾರಾಶ್ರಯದಲ್ಲಿ, ಪರ್ಯಾಯ ಶ್ರೀ ಪೇಜಾವರ ಸ್ವಾಮಿಯವರ ಹಾಗೂ ಮಹಾಜನರ ಸಮುಸ್ಸಮ ಜಯಶೀಲವಾಗಿ ನಡೆಯಿತು. ಅತೀವ ಹರ್ಷಚಿತ ರೂಪದಿಂದ ಪರಮಹಂಸರುಗಳವರು ಶ್ರೀ ಶಾಸ್ತ್ರಿಗಳವರಿಗೆ ರಜತಪೀಠದ ಮಾನಮರ್ಯಾದೆಗೊಪ್ಪುವ ರಜತನಾಣ್ಯಗಳನ್ನು ಕೊಟ್ಟು ಹರಸಿ ಸನ್ಮಾನಿಸಿದರು.

ಕಳೆದ ತಾ. ೮ರಲ್ಲು ಮೂಡುತೋನ್ಸೆ ಕನ್ನಾರ ಕುದ್ರುಲ್ಲಿ ಕೊಸ್ಮೊ ಪೊಲಿಟನ್ ಪ್ರಾಥಮಿಕ ಶಾಲೆಯೊಂದು ಪಂಚಾಯತ ಕೋರ್ಟಿನ ಮೆಂಬರರಾದ ರಾಜೇಶ್ರೀ ವಿಟ್ಠಲ ಹೆಗ್ಡೆಯವರಿಂದ ತೆರೆಯೋಣಾಯಿತು. ಈ ಸಮಾರಂಭದಲ್ಲಿ ಗ್ರಾಮಸ್ಥರೂ ಪಂಡಿತ ಶೇಕ್ ಉಸ್ಮಾನ್ ಸಾಹೇಬರೂ, ಎ. ಪಿ. ಪಿ. ಲುವೀಸ್ ಮೊದಲಾದವರೂ ಹಾಜರಿದ್ದರು. ಜಾತಿಮತಭೇದವೆಣಿಸದ ಈ ಶಾಲೆಗೆ ಮಿ. ಟಿ. ಜಿಲ್ಲಪ್ಪ ಜತ್ತನ್ನರೇ ಉಪಾಧ್ಯಾಯರಾಗಿರುವರು. ಶಾಲಾ ರಿಕೊಗ್ನಿಶನ್ ಬಗ್ಗೆ ಗ್ರಾಮಸ್ಥರ ಅರ್ಜಿಯು ತಯಾರಾಗುತ್ತಲಿದೆ.

ಕರ್ನಾಟಕ

ಆಕ್ಟೋಬರದಲ್ಲಿ ರಾಣಿಬೆನ್ನೂರಿನಲ್ಲಿ ಜರುಗಲಿರುವ ಕರ್ನಾಟಕ ರಾಜಕೀಯ ಪರಿಷತ್ತಿಗೆ, ಆಗ ದಕ್ಷಿಣ ಇಂಡಿಯಾದಲ್ಲಿ ಸಂಚರಿಸುವ ಪಂ. ಜವ್ಹರಲಾಲರನ್ನು ಅಧ್ಯಕ್ಷರನ್ನಾಗಿ ಮಾಡುವ ಪ್ರಯತ್ನ ನಡೆದಿದೆ. ಇದಕ್ಕಾಗಿ ಕಮಿಟಿಗಳೇರ್ಪಟ್ಟಿವೆ. ಹಣದ ಸಹಾಯಕ್ಕಾಗಿಯೂ ವಿನಂತಿ ಹೊರಟಿದೆ.

ಕೃಷ್ಣರಾಜ ನಗರದ ತಾಲೂಕಿನ ಗಲಿಕೆಕೆರೆ ಗ್ರಾಮ ಪಂಚಾಯಿತಿಯವರು ಆ ಹಳ್ಳಿಯಲ್ಲಿ ಒಂದು ಬಾವಿಯನ್ನು ಆಗೆಯಿಸುತ್ತಿದ್ದಾಗ, ಅಲ್ಲಿ ಬಂಗಾರದಿಂದ ಕೂಡಿದ ಕಲ್ಲುಗಳು ದೊರಕಿದುವು. ಮುಂದೆ ಭೂಗರ್ಭಪಂಡಿತರ ಅಭಿಪ್ರಾಯದ ಮೇರೆಗೆ ಅಲ್ಲಿ ಅ ಕ್ಷೇತ್ರದಲ್ಲಿ ಬಂಗಾರವು ದೊರಕಬಹುದೆಂದು ಅಂದಾಜಾಗಿದೆ.

ಮೈಸೂರು ಸರಕಾರವು ರೋಡ್ ಫಂಡೆಂಬ ಒಂದು ಪ್ರತ್ಯೇಕ ನಿಧಿಯನ್ನು ಸ್ಥಾಪಿಸಿ ಆ ನಿಧಿಗೆ ರಸ್ತೆಗಳ ಆದಾಯವನ್ನು ಜಮೆ ಕಟ್ಟಿಕೊಳ್ಳಬೇಕೆಂದು ಆಜ್ಞೆ ಮಾಡಿದೆ.

ಬೆಂಗಳೂರಿನಲ್ಲಿ ಚಿತ್ರಾಪುರ ಮಠದ ಶ್ರೀ ಶ್ರೀಗಳವರು.

ಶ್ರೀ ಸ್ವಾಮಿಗಳವರು ಬೆಂಗಳೂರಿಗೆ ಚಿತ್ತೈಸಿದ ಮೊದಲನೆಯ ಎರಡು ದಿನಗಳ ವಿವರಗಳು 'ಕಂಠೀರವ'ದ ಜೂನ್ ೧೬ನೇ ತಾರೀಕಿನ ಪತ್ರಿಕೆಯಲ್ಲಿ ಪ್ರಚುರವಾಗಿರುವುದಷ್ಟೆ. ಅಂದಿನಿಂದೀಚೆಗೆ ಪ್ರತಿ ಸಾಯಂಕಾಲವೂ ಸ್ವಜಾತಿಯ ಗೃಹಸ್ಥರ ದೊಡ್ಡ ಸಭೆಯು ಸೇರುತ್ತಿದ್ದಿತು. ಹಾಗೂ ಬೆಳಿಗಿನ ಮತ್ತು ರಾತ್ರಿಯ ಪೂಜಾಕಾಲಗಳಲ್ಲಿ ಗಂಡುಸರೂ ಹೆಂಗುಸರೂ ಕೂಡ ಬಂದು ಶ್ರೀಯವರ ಆಶೀರ್ವಾದವನ್ನು ಪಡೆಯುತ್ತಿದ್ದರು.

ಮೂರನೆಯ ದಿನ ಎಂದರೆ ತಾ. ೧೦ನೇ ಸೋಮವಾರ ಸಾಯಂಕಾಲದಲ್ಲಿ ಮೈಸೂರು ಹೈ ಕೋರ್ಟಿನ ಆ॥ ಚೀಫ್ ಜಜ್ ಮಾ। ಕೆ. ಶಂಕರ ನಾರಾಯಣ ರಾಯರು—'ಈಗಿನ ಕಾಲದಲ್ಲಿ ನಮ್ಮ ತರುಣ ಪೀಳಿಗೆಯವರು ತಮ್ಮ ಧರ್ಮವನ್ನು ಹೇಗೆ ಮತ್ತು ಎಷ್ಟು ಮಟ್ಟಿಗೆ ಕಾಪಾಡಿಕೊಂಡು ಅನುಸರಿಸಿ ಬರಲು ಸಾಧ್ಯ?'—ಎಂಬ ವಿಷಯವಾಗಿ ಬಹು ಯುಕ್ತಿಯುಕ್ತವಾದ ಒಂದು ಉಪನ್ಯಾಸವನ್ನು ಉತ್ತಮವಾದ ರೀತಿಯಿಂದ ಉಪಪಾದಿಸಿ ಸುಮಾರು ೧½ ಘಂಟೆಯ ಕಾಲ ಮಾತನಾಡಿದರು. ತಾ. ೧೧ನೇ ಸಾಯಂಕಾಲ ಮೈಸೂರು ಸೀಮೆಯ ಒಂದು ವಾದ್ಯಗಾರ ಮಂಡಲಿಯವರು ಅನೇಕ ವಿಧವಾದ ವಾದ್ಯಗಳನ್ನು ಒಂದೇ ಕಾಲದಲ್ಲಿ (Orchestra) ಬಾರಿಸಿ ತಮ್ಮ ಕೌಶಲವನ್ನು ಪ್ರಕಟಗೊಳಿಸಿದರು. ೧೨ನೇ ತಾ. ಶುಕ್ರವಾರ ಶ್ರೀಮಾನ್ ಕೆ. ಜಿ. ಸಂಪತ್ಕುಮಾರಾಚಾರ್ಯ, ಬಿ. ಏ., ಬಿ. ಟಿ. ಅವರು ಕೆಲಕೆಲವು ದೇವರ ನಾಮಗಳನ್ನೂ, ಅವಾ ಚೀನ ಕವಿತೆಗಳನ್ನೂ ಕನ್ನಡ ಭಾರತದ ಮತ್ತು ಜೈಮಿನಿ ಭಾರತದ ಕೆಲ ಕೆಲವು ಭಾಗಗಳನ್ನೂ ತಮಗೆ ಸ್ವಭಾವಸಿದ್ಧವಾದ ಸುಮಧುರ ಸ್ವರದಿಂದ ಹಾಡಿ ಸಭಾಸ್ತಾರರನ್ನು ತುಂಬ ಸಂತೋಷಗೊಳಿಸಿದರು.

೧೩ನೇ ತಾ. ಶನಿವಾರ ಸಾಯಂಕಾಲ ಸ್ವಜಾತಿಯ ತರುಣರಿಂದೂಸ್ಥಾನಿ (Concert) ಗಾಯನವು ನಡೆಯಿತು. ಮತ್ತು ರಾತ್ರಿ ಸ್ವಜಾತಿಯವರ ಯುವಕರು 'ಸಾವಿನ ಸಮಸ್ಯೆ'ಯೇ ಮುಂತಾದ ಎರಡು ಮೂರು ಚಿಕ್ಕ ಚಿಕ್ಕ ನಾಟಕಗಳನ್ನಾಡಿದರು. ತಾ. ೧೪ನೇ ಭಾನುವಾರ ಬೆಳಿಗಿನ ೯ ಘಂಟೆಗೆ ಸ್ವಜಾತಿಯ ಯುವಕರ ಎಂಬ್ಯೂಲೆನ್ಸ್ ಬ್ರಿಗೇಡ್‌ನ ಪ್ರದರ್ಶನವೂ ಮಧ್ಯಾಹ್ನ ಸ್ವಜಾತಿಯ ಸಾವಿರಾರು ಸ್ತ್ರೀಪುರುಷರ ಮಹಾಸಮಾರಾಧನೆಯೂ ನಡೆಯಿತು. ಇಲ್ಲಿಯ ಪ್ರಸಿದ್ಧ ಗಮಕಿಗಳಾದ ಶ್ರೀಮಾನ್ ಎಸ್. ಜಿ. ಬಿಂದೂ ರಾಯರು ಕುಮಾರ ವ್ಯಾಸ ಭಾರತದೊಳಗಿಂದ 'ದೂರ್ವಾಸಭೋಜನ' ಮತ್ತು 'ಶ್ರೀಕೃಷ್ಣ-ಸಂಧಾನ'ದ ಕೆಲಕೆಲವು ಭಾಗಗಳನ್ನು ಅನೇಕ ವಿಧವಾದ ರಾಗಗಳಿಂದ ಓದಿ ಸಮಸ್ತರನ್ನೂ ಆನಂದಸಮುದ್ರದಲ್ಲಿ ಮುಳುಗಾಡಿಸಿದರು.

೧೫ನೇ ತಾ. ಸೋಮವಾರ ಶ್ರೀ ಶ್ರೀಯವರ, ಶ್ರೀಮಾನ್ ಶಂಕರ ನಾರಾಯಣರಾಯರು ಮಾಡಿದ್ದ ಉಪನ್ಯಾಸವನ್ನೇ ಪುನಃ ಎತ್ತಿಕೊಂಡು ಅದನ್ನು ಮತ್ತಿಷ್ಟು ವಿಸ್ತಾರವಾಗಿಯೂ ಮಾರ್ಮಿಕವಾಗಿಯೂ ವಿವರಿಸಿ, ಇಷ್ಟು ದಿನವೂ ಸಪರಿವಾರರಾದ ತಮ್ಮನ್ನು ಅನನ್ಯಸಾಧಾರಣವಾದ ಭಕ್ತಿಭಾವದಿಂದ ಆದರಿಸಿದ್ದುದಕ್ಕಾಗಿ, ಶಿಷ್ಯಮಂಡಲಿಯವರನ್ನು ಕೊಂಡಾಡಿ, ಆಶೀರ್ವದಿಸಿ, ಫಲಮಂತ್ರಾಕ್ಷತೆಗಳನ್ನು ಕೊಟ್ಟು ಗೌರವಿಸಿದರು.

ಮರುದಿನ, ಎಂದರೆ ೧೬ನೇ ತಾ. ಮಂಗಳವಾರ ಪೂಜಾ-ಹಾರತಿಗಳನ್ನು ಮುಗಿಸಿ ೧೨ ಘಂಟೆಯ ಹೊತ್ತಿಗೆ ಶ್ರೀ ಶ್ರೀಯವರು ಪರಿವಾರದೊಡನೆ ಮೈಸೂರು ಮಾರ್ಗವಾಗಿ ಸ್ವದೇಶಕ್ಕೆ ಮೋಟರ್ ಕಾರಿನಿಂದ ಪ್ರಯಾಣ ಬೆಳೆಸಿದರು. ಇಷ್ಟು ದಿನವೂ ಹಗಲು ರಾತ್ರಿ ಉತ್ಸವಕಾಲದಂತೆ ಸುಖಕರವಾಗಿದ್ದ ಶ್ರೀ ಸ್ವಾಮಿಗಳವರ ಸಹವಾಸದ ಈ ವಿಯೋಗವು ತುಂಬ ಖೇದಕಾರಿಯಾಗಿದ್ದಿತೆಂಬುದು ನೆರೆದ ಶಿಷ್ಯಮಹಾಜನರ ಮುಖಭಾವದಿಂದಲೇ ತಿಳಿದುಬರುವಂತಿದ್ದಿತು.

ಶ್ರೀಮಾನ್ ರಾವ್ ಬಹದ್ದೂರ್ ಪ್ರಾಕ್ತನವಿಮರ್ಶಾವಿಚಕ್ಷಣ ಆರ್. ನರಸಿಂಹಾಚಾರ್ಯರವರು, ಶ್ರೀಮಾನ್ ಪ್ರೊ॥ ಬಿ. ಎಂ. ಶ್ರೀಕಂಠಯ್ಯ, ಎಂ. ಏ., ಬಿ. ಎಲ್. ಆವರು, ಸಬ್ ಡಿವಿಜನಲ್ ಆಫೀಸರು ಶ್ರೀಮಾನ್ ಶಾಮಣ್ಣನವರು ಇವರೇ ಮೊದಲಾದ ಮೈಸೂರು ದೇಶದ ಪ್ರಮುಖ ನಾಗರಿಕರೂ ವಿದ್ವಾಂಸರೂ ಎಷ್ಟೋ ಜನರು, ಮಠಕ್ಕೆ ಹಯವೆಮಾಡಿಸಿ, ಶ್ರೀಯವರ ದರ್ಶನವನ್ನೂ ಪರಿಚಯಲಾಭವನ್ನೂ ಪಡೆದು ಕೃತಾರ್ಥರಾದರೆಂಬ ವಿಷಯವು ಕೂಡ ಗಮನಾರ್ಹವಾಗಿದೆ.



"ಹಿಸ್ ಮಾಸ್ಟರ್ಸ್ ವಾಯ್ಸ್"

ಶಬ್ದೋತ್ಪನ್ನದಲ್ಲಿ
ಔನ್ನತ್ಯವನ್ನು
ಪಡೆದಿರುತ್ತದೆ!

ಟ್ರಾನ್ಸ್‌ಪೋರ್ಟಬಲ್ ಮಾಡಲ್
ನಂ. 113
ಬೆಲೆ ರೂ. 180.

ಶಬ್ದಪುನರೋತ್ಪನ್ನತೆಯಲ್ಲಿ "ಹಿಸ್ ಮಾಸ್ಟರ್ಸ್ ವಾಯ್ಸ್" ಕಂಪೆನಿಯವರು ವರ್ಷಾಂತರಗಳ ಪರಿಶೋಧನಾಫಲಿತವಾಗಿ ಕೇವಲ ನಿರ್ಜೀವವಾದ ಗ್ರಾಮಫೋನು ರಿಕಾರ್ಡುಗಳಿಂದ ವಿಸ್ಮಯಗೊಳಿಸುವ ಜೀವನಾದವನ್ನು ಪ್ರಕಟಿಸಿ ಗಾಂಧರ್ವಗಾನವನ್ನು ಸರ್ವ ಜನರಿಗೂ ಸದಾಕಾಲ ಸುಲಭವಾಗುವಂತೆ ಮಾಡಿರುವರು. ಇವುಗಳನ್ನೀಗಲೇ ನಮ್ಮ ವ್ಯಾಪಾರಿಗಳಲ್ಲಿ ಕೊಂಡು ಕೇಳಿ ಆನಂದಿಸುವಿರಿ.

ಕೇಟಲಾಗುಗಳು ಉಚಿತ

ದಿ ಗ್ರಾಮಫೋನ್ ಕಂಪೆನಿ, ಲಿಮಿಟೆಡ್,
45, ಸೌತ್ ಪೆರೇಡ್, ಬೆಂಗಳೂರು.

ದೊರೆಯುವ ಸ್ಥಳ:—
ಎಮ್. ಎಮ್. ಶ್ಯಾನುಭಾಗ ಎಂಡ್ ಸನ್, ಮಂಗಳೂರು.

ಪ್ರಾಥಮಿಕ—ಶಿಕ್ಷಣಕ್ರಮ

ಡೈರೆಕ್ಟರರ ಅಭಿಪ್ರಾಯಗಳು.

ನಮ್ಮ ಪ್ರಾಂತ್ಯದ ಇಕೊನೊಮಿಕ್ ಕೌನ್ಸಿಲಿನ ಸಭೆಯು ಸೇರಿ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಕುರಿತು ಕಳುಹಿಸಿ ಕೊಟ್ಟ ಪ್ರಶ್ನೆಗಳನ್ನು ಚರ್ಚಿಸಿ ಸರಕಾರಕ್ಕೆ ಶಿಫಾರಸುಗಳನ್ನು ಬರೆಯುವುದಾಗಿ ನಿರ್ಧರಿಸುವಾಗ ಡೈರೆಕ್ಟರ ಸಾಹೇಬರು ಈ ಸಲ ಹಾಜರಿದ್ದು ತಮ್ಮ ಹಲವು ಅಭಿಪ್ರಾಯಗಳನ್ನು ನಿಶ್ಚಿತವಾಗಿ ಹೇಳಿದಂತೆ ತಿಳಿದುಬರುತ್ತದೆ.

ಮೊದಲನೆಯದಾಗಿ ಪ್ರಾಥಮಿಕ ಶಿಕ್ಷಣವನ್ನು ನಾಲ್ಕು ದರ್ಜೆಗಳಲ್ಲಿ ಮುಗಿಸಬೇಕೆಂಬ ಸಲಹೆಗೆ ಅವರು ವಿರೋಧವಾಗಿದ್ದಾರೆ. ನಾಲ್ಕು ವರ್ಷ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ವಿದ್ಯಾರ್ಥಿಯು ನಿಜವಾಗಿಯೂ ಅಕ್ಷರಸ್ಥನಾಗುತ್ತಾನೆಂದು ಖಂಡಿತ ಹೇಳಬರುವುದಿಲ್ಲ. ಬೇರೆ ದೇಶಗಳಲ್ಲಿ ಖಡ್ಡಾಯ ವಿದ್ಯಾಭ್ಯಾಸವಿದ್ದರೂ ಪ್ರಾಥಮಿಕ ಶಿಕ್ಷಣವು ಇಲ್ಲಿರುವದಕ್ಕಿಂತಲೂ ಹೆಚ್ಚು ವರ್ಷಗಳ ವರೆಗೆ ಮುಂದುವರಿಯುತ್ತಿದೆ. ಹೀಗಿರುವಾಗ ಇಲ್ಲಿ ಇದ್ದ ಶಿಕ್ಷಣಕ್ರಮವನ್ನು ಇನ್ನಷ್ಟು ಕಡಿಮೆ ಕಾಲದಲ್ಲಿ ಮುಗಿಸಿಬಿಡುವುದಕ್ಕೆ ಆಲೋಚಿಸುವುದು ಬಾಧಕಕರವಾಗುತ್ತಿದೆ. ಈಗಿನ ಪದ್ಧತಿಯಲ್ಲಿ ಕುಂದುಗಳು ಎಷ್ಟೇ ಇದ್ದರೂ ಐದು ದರ್ಜೆಗಳುಳ್ಳ ಶಾಲೆಗಳು ಹೆಚ್ಚಾಗಿರುವ ಪ್ರಯುಕ್ತ ಜನತೆಯಲ್ಲಿ ಶಿಕ್ಷಣಪ್ರಚಾರವು ಹೆಚ್ಚು ವಿಸ್ತಾರಕ್ಕೆ ಹರಡಲು ಕಾರಣವಾಗಿದೆ. ಇಂಥದನ್ನು ಈಗ ಸಂಕೋಚಗೊಳಿಸಿದರೆ ಅಭಿವೃದ್ಧಿಯಾಗುವ ಬದಲಾಗಿ ಹಾನಿಯೇ ಉಂಟಾಗುವುದು. ವಾಸ್ತವವಾಗಿ ಹೇಳುವುದಾದರೆ ನಾಲ್ಕನೇ ಅಥವಾ ಐದನೆ ತರಗತಿಗಳಲ್ಲಿ ಆಗುವಷ್ಟು ಹೆಚ್ಚು ವಿದ್ಯಾರ್ಥಿಗಳು ಇರುವಂತಾಗಬೇಕೆಂದು ಪ್ರಯತ್ನಿಸುವ ಬದಲಾಗಿ ಎರಡನೆ ತರಗತಿಯಲ್ಲಿ ಓದುವ ಮಕ್ಕಳ ಸಂಖ್ಯೆ ಆಗುವಷ್ಟು ಹೆಚ್ಚಾಗುವಂತೆ ಪ್ರಯತ್ನ ಪಡಬೇಕಾದುದು ಅತ್ಯಾವಶ್ಯಕವಾಗಿರುವ ಸಂಗತಿಯಾಗಿದೆ, ಎಂದು ಡೈರೆಕ್ಟರರು ಹೇಳಿದರು.

ಖಡ್ಡಾಯಶಿಕ್ಷಣವನ್ನು ಈಗ ಜ್ಯಾರಿಗೆ ತಂದಿರುವಲ್ಲಿ ಅದನ್ನು ಸರಿಯಾಗಿ ಅನುಸರಿಸುತ್ತಾರಾದರೆ ಮಕ್ಕಳನ್ನು ಇನ್ನು ಒಂದು ಹೆಚ್ಚಿಗೆ ವರ್ಷ ಶಾಲೆಗಳಲ್ಲಿ ಇಟ್ಟುಕೊಳ್ಳುವುದು ಕಷ್ಟವಾಗದೆಂದು ತೋರುತ್ತದೆ. ಈಗ ಐದರಿಂದ ಒಂಭತ್ತರ ವರೆಗೆ ವಯಸ್ಸುಳ್ಳ ಮಕ್ಕಳನ್ನು ಶಾಲೆಗಳಲ್ಲಿ ಇಟ್ಟುಕೊಳ್ಳಬೇಕೆಂಬ ನಿರ್ಬಂಧವು ಅಷ್ಟು ಪ್ರಯೋಜನಕರವಾಗಿಲ್ಲ. ಚಿಕ್ಕ ಮಕ್ಕಳು ಐದನೇ ವಯಸ್ಸಿನಲ್ಲಿ ಶಾಲೆಗೆ ಬರಬೇಕೆಂದು ನಿರ್ಬಂಧಿಸುವುದು ಅಷ್ಟು ಚೆನ್ನಾಗಿಲ್ಲ. ನಗರಗಳಲ್ಲಾದರೆ ಕಿಂಡರ್‌ಗಾರ್ಡನ್ ಪದ್ಧತಿಯ ಅಥವಾ ಅವುಗಳಿಗೆ ಸಮಾನವಾದ ತರಗತಿಯ ಶಾಲೆಗಳಿಗೆ ಅಷ್ಟು ಎಳೆಯ ಕೂಸುಗಳನ್ನು ಸೇರಿಸಬಹುದು. ಆದರೆ ಹೆಚ್ಚಿನ ಶಾಲೆಗಳು ಇಂತಹ ವ್ಯವಸ್ಥೆ, ಅನುಕೂಲತೆ, ಉಪಕರಣ ಸನ್ನಾಹ ಮೊದಲಾದುವುಗಳಿಂದ ಕೂಡಿಲ್ಲ. ಆದುದರಿಂದ ಅಧಿಕಾಧಿಕವಾಗಿ ಹಣವನ್ನು ವ್ಯಯಿಸುತ್ತ, ಯೋಗ್ಯವಾದಷ್ಟು ಶಿಕ್ಷಣಪ್ರಗತಿಯನ್ನು ತೋರಿಸದೆ ಇರುತ್ತಾ ಹೋಗುವುದು ಯೋಗ್ಯವಾಗಿಲ್ಲ. ಹೀಗಾಗಿ ಸರಿಯಾದ ಪ್ರಯೋಜನ ದೊರೆಯುವ ಸಂಭವನವಿಲ್ಲದೆ ಇನ್ನೂ ಇನ್ನೂ ಯಾವ ತರದಲ್ಲಿಯೂ ವಿದ್ಯಾಪ್ರಚಾರಕ್ಕೆಂದು ಹಣವನ್ನು ಖರ್ಚುಮಾಡುವುದು ಡೈರೆಕ್ಟರರಿಗೆ ಯುಕ್ತವೆಂದು ತೋರುವುದಿಲ್ಲ.

ಶಾಲೆಗಳಿಗೆ ಸೇರುವ ವಯಸ್ಸಿನ ಮಕ್ಕಳಿಗೆ ಅರಿಹೊತ್ತಿನ ಶಾಲೆಗಳನ್ನು ಏರ್ಪಡಿಸುವುದು ಸರಿಯಲ್ಲವೆಂದೂ ಇಂಥವುಗಳಲ್ಲಿ ಸಾಮಾನ್ಯವಾದ ಪ್ರಾಥಮಿಕ ಶಾಲೆಗಳಲ್ಲಿ ದೊರೆಯುವಷ್ಟಾದರೂ ಶಿಕ್ಷಣವು ದೊರೆಯುವುದಾಗಲಿ, ಅವುಗಳ ಮೇಲೆ ಸರಿಯಾದ ತನಿಖೆ ನಡೆಯುವುದಾಗಲಿ ಸಾಧ್ಯವಿಲ್ಲವೆಂದೂ, ಶಾಲಾದಿನಗಳು ಮತ್ತು ರಜಾದಿನಗಳು, ಇವುಗಳನ್ನು ಸರಿಯಾಗಿ ಪುನಃ ನಿರ್ಧರಿಸಿ ಶಾಲಾ ಕೆಲಸವನ್ನು ಹಂಚಿ ಹಾಕಿದರೆ ಈ ಬಗೆಯ ಅರಿಹೊತ್ತಿನ ಶಾಲೆಗಳ ಅವಶ್ಯವೆ ಉಂಟಾಗಲಾರದೆಂದೂ, ಶಾಲೆ ನಡೆಯುವ ಸಮಯದ ಬದಲಾವಣೆಯಿಂದ ಇದು ಸರಿಯಾಗುವುದೆಂದೂ ವಿದ್ಯಾರ್ಥಿಗಳ ಸ್ಥಿತಿಗತಿಗಳಂತೆ ಪಠ್ಯ ವಿಷಯಗಳನ್ನೂ ಪಾಠಕ್ರಮಗಳನ್ನೂ ಬದಲಿಸುತ್ತಾ ಬಂದರೆ ಅರಿಹೊತ್ತಿನ ಶಾಲೆಗಳಲ್ಲಿ ನಡೆಯುವಷ್ಟೆ ಶಿಕ್ಷಣವು ಇನ್ನಷ್ಟು ಚೆನ್ನಾಗಿ ನಡೆಯುವುದೆಂದು ಡೈರೆಕ್ಟರರ ಅಭಿಪ್ರಾಯವು.

ಖಡ್ಡಾಯದಿಂದಲ್ಲದೆ ವಿದ್ಯಾರ್ಥಿಗಳು ಶಾಲೆಗೆ ಸೇರುವುದಾಗಲಿ ಸಂಪೂರ್ಣವಾಗಿ ಪ್ರಾಥಮಿಕ ತರಗತಿಗಳಲ್ಲಿ ತೇರ್ಗಡೆ ಹೊಂದುವ ವರೆಗೆ ಶಾಲೆಯಲ್ಲಿ ಉಳಿಯುವುದಾಗಲಿ ಸಾಧ್ಯವಾಗಲಾರದು. ಶಿಕ್ಷಣದಿಂದ ಪ್ರಯೋಜನವಿದೆಯೆಂದು ಉಪದೇಶ ಮಾಡುತ್ತಾ ಬರುವುದರಿಂದ ಮಾತ್ರ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಹೊಂದುವುದಕ್ಕೆ ಶಾಲೆಗಳಿಗೆ ಬರುವರಾಗಿ ನಂಬಲಾಸ್ಪದವಿಲ್ಲ. ಆದರೆ ಜನರಲ್ಲಿ ಶಿಕ್ಷಣ ಹೊಂದುವುದಕ್ಕೆ ಬೇಕಾಗಿರುವ ಉತ್ಸುಕತೆ ಉಂಟಾಗುವ ವರೆಗೆ ಸುಮ್ಮನೆ ಖಡ್ಡಾಯ ಶಿಕ್ಷಣವನ್ನು ವಿಧಿಸಿ ಹಣವನ್ನು ವ್ಯಯಿಸಬಹುದಲ್ಲದೆ ಗುಣವೇನೂ ಉಂಟಾಗಲಾರದು. ಉಪಕರಣ–ಸನ್ನಾಹವೂ ಸಾಕಷ್ಟು

ಶಿಕ್ಷಣ ವಿಚಾರ

ತರಬೇತಿ ಹೊಂದಿದ ಉಪಾಧ್ಯಾಯರ ಸಂಖ್ಯೆಯೂ ದೊರೆಯುವ ತನಕ ಶಿಕ್ಷಣವು ಖಡ್ಡಾಯವಾಗಬೇಕೆಂದು ವಿಧಿಸುವುದು ತಪ್ಪಾಗಿದೆ. ಕಾಗದದ ಮೇಲೆ ಶಿಕ್ಷಣವು ಖಡ್ಡಾಯವಾಗಲೆಂದು ಅಪ್ಪಣೆ ಕೊಟ್ಟರೆ ಇತರ ಸಹ್ಯಾಹವನ್ನು ಮಾಡದಿರುವಲ್ಲಿ ಸರಕಾರವು ಹಣವನ್ನು ನಿಷ್ಪಯೋಜಕವಾಗಿ ಖರ್ಚುಮಾಡಿದಂತಾಗುವುದು.

ಮೇಲಣ ಅಭಿಪ್ರಾಯಗಳನ್ನು ನೋಡಿದರೆ ಡೈರೆಕ್ಟರರ ಅಭಿಪ್ರಾಯಗಳು ಕೆಲವು ಟೀಕೆಗಳಿಗೆ ಆಸ್ಪದ ಕೊಡುವಂತಾಗಿದೆ. ಖಡ್ಡಾಯಕ್ರಮದಿಂದಲ್ಲದೆ ನಿರಕ್ಷರತೆಯು ನಿರ್ಮೂಲಹೊಂದುವಂತಿಲ್ಲ. ಅದಕ್ಕಾಗಿ ಸರಕಾರವು ತುಂಬಾ ಔದಾರ್ಯವನ್ನು ತೋರಿಸಿ ಈ ಕ್ರಮವನ್ನು ನಿರ್ದೇಶಿಸಬೇಕಾಗಿದೆ. ಆದರೆ ಜನತೆಯ ಮೇಲೆ ಇಂತಹ ಸತ್ಪರಿಣಾಮವನ್ನುಂಟುಮಾಡುವ ಉತ್ತಮ ಶಾಸನಕ್ಕೆ ಇನ್ನೂ ಅಧಿಕಾರಿಗಳು ಅಷ್ಟು ಮನಕೊಡುವಂತಿಲ್ಲ. 'ಗ್ರೇಂಟ್ ಇನ್ ಎಯ್ಡ್' ಕೋಡನ್ನು ಯಥಾರ್ಥ ರೀತಿಯಲ್ಲಿ ತಿದ್ದಿಕೊಡಬೇಕೆಂದು ಎಷ್ಟು ಹೇಳಿಕೊಂಡರೂ ಇದಕ್ಕಾಗಿ ಪ್ರತಿಯೊಂದು ಜಿಲ್ಲೆಯಿಂದಲೂ ಪದೇ ಪದೇ ಮನವಿ ಒರೆದುಕೊಂಡರೂ ಸರಕಾರವು ಯಾವ ತಿದ್ದುಪಡಿಯನ್ನೂ ಮಾಡಿದ್ದಿಲ್ಲ. ಅದರ ಬದಲಾಗಿ ಈಗ ಸಿಕ್ಕುವಷ್ಟು ಗ್ರೇಂಟು ಸಹ ಮುಂದಿನ ವರ್ಷಗಳಲ್ಲಿ ಕೊಡಲಿಕ್ಕಾಗಲಾರದು ಎಂದು ಸರಕಾರವು ಹೇಳಿದುದನ್ನು ನೋಡಿದರೆ ಶಿಕ್ಷಣಪ್ರಚಾರದ ವಿಷಯವಾಗಿ ನಿರಾಶೆಯೆ ಹೊರತು ಯಾವ ಭರವಸೆಯೂ ಹುಟ್ಟುವಂತಿಲ್ಲ.

ಮುಂಬಾಯಿ ಮೆಟ್ರಿಕ್ಯುಲೇಶನ್ ಪರೀಕ್ಷೆ

ಕಳೆದ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ ಅತಿ ಕಡಮೆಯಾಗಿದೆ ಎಂದು, ಯುನಿವರ್ಸಿಟಿಯ ವಾರ್ಷಿಕ ಸಭಾ ಕಾಲದಲ್ಲಿ, ಅಲ್ಲಲ್ಲಿಂದ ಪಾಸಾಗದ ವಿದ್ಯಾರ್ಥಿಗಳೂ ಅವರ ಹಿತ ಚಿಂತಕರೂ ತುಂಬಾ ಯುನಿವರ್ಸಿಟಿ ಸಭಾಗೃಹದ ಬಳಿ ನೆರೆದು ಗದ್ದಲವೆಬ್ಬಿಸಿದರು. ವಿದ್ಯಾರ್ಥಿಗಳ ಕೊಲೆಯನ್ನು ಕುರಿತಾಗಿ ಹಲವು ಭಾಷಣ ಮಾಡಿ, ಈ ಪರೀಕ್ಷೆಯ ಕ್ರಮವನ್ನೇ ಮಾತ್ರ ವಲ್ಲದೆ, ಯುನಿವರ್ಸಿಟಿಯನ್ನೇ ಬೇರೆ ವ್ಯವಸ್ಥೆಗೆ ಒಳಪಡಿಸಬೇಕೆಂದೂ ನಿರ್ಧಾರಗಳನ್ನು ಈ ಹೊರ ಸಭೆಯು ಮಾಡಿತು. ಸೆನೆಟ್ ಸಭೆಯಲ್ಲಿ ನಡೆದ ತರ್ಕದಿಂದ ತಿಳಿಯಬರುವ ಅಂಶಗಳಿವು:—

ಯುನಿವರ್ಸಿಟಿಗೆ ಮೆಟ್ರಿಕ್ಯುಲೇಶನ್ ಪರೀಕ್ಷೆಯೊಂದರಿಂದಲೇ ಸುಮಾರು ನಾಲ್ಕುಮುಕ್ಕಾಲು ಲಕ್ಷ ರೂಪಾಯಿ ಫೀಸು ವಸೂಲಾಗಬಹುದು. ಅಕ್ಟೋಬರಿಂದಲ್ಲಿ ಪುನಃ ಈ ಪರೀಕ್ಷೆಯನ್ನು ಆ ಪ್ರಾಂತ್ಯದಲ್ಲಿ ಜರಗಿಸುವ ವಾಡಿಕೆಯಿದೆ.

ವಿದ್ಯಾರ್ಥಿಗಳು ಇಷ್ಟು ಕಡಮೆ ದಾಮಾಶಾಯದಲ್ಲಿ ಪಾಸಾಗುವ ಹಾಗೆ ಉಂಟಾಗಿರುವ ವಿದ್ಯಮಾನಗಳಿಗೆ ವಿದ್ಯಾರ್ಥಿಗಳನ್ನೇ ಮಾತ್ರ ದೂರಿ ಫಲವಿಲ್ಲ. ಶಾಲೆಗಳಿಗೆ ಯೋಗ್ಯ ಉಪಾಧ್ಯಾಯರ ಸಂಖ್ಯೆ ಕಡಮೆ; ವಿದ್ಯಾದಾನದ ಕ್ರಮಗಳಲ್ಲಿ ಯಾವ ತೆರದ ಸುಧಾರಣೆಗಳನ್ನು ಮಾಡಲೂ ಅಗತ್ಯವಾಗಿರುವ ಪರಿಶೋಧನೆಗಳನ್ನು ಸಹ ಯುನಿವರ್ಸಿಟಿಯು ಮಾಡುತ್ತಿಲ್ಲ.

ವಿದ್ಯಾರ್ಥಿಗಳು ಯಾವ ಶಾಲೆಗಳಿಂದ ಪರೀಕ್ಷೆಗೆ ಬರುವರೋ, ಆ ಶಾಲೆಗಳನ್ನೆಲ್ಲ ಯುನಿವರ್ಸಿಟಿಯು ಮಂಜೂರು ಮಾಡಿರುವುದು. ಕಳೆದ ಐದು ವರ್ಷಗಳಿಂದ ಪಾಸಾಗುವ ವಿದ್ಯಾರ್ಥಿಗಳ ಸಂಖ್ಯೆಯ ದಾಮಾಶಾಯವು ಕಡಿಮೆಯಾಗುತ್ತಲೇ ಬರುತ್ತಿದೆ. ಹೀಗಿರುವ ಕಾರಣ, ಶಿಕ್ಷಣಕ್ರಮದಲ್ಲಿ ಕೊರತೆಗಳಿವೆಯೋ ಪರೀಕ್ಷಾಕ್ರಮದಲ್ಲಿ ಕೊರತೆಗಳಿವೆಯೋ ಎಂಬುದನ್ನು ವಿಮರ್ಶೆಮಾಡುವುದಕ್ಕೆ ಅಗತ್ಯವಾಗಿಯೂ ಯುನಿವರ್ಸಿಟಿಯು ಒಂದು ಕಮ್ಮಿಟಿಯನ್ನು ನೇಮಿಸಬೇಕಾಗಿದೆ ಎಂದು ವಾದವಿದೆ.

ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ಸಾಮಾನ್ಯ ಜ್ಞಾನವನ್ನಷ್ಟೆ ಪರೀಕ್ಷೆಮಾಡಬೇಕಾಗಿದೆ ಹೊರತು, ವಿದ್ವತ್ತಿಕೆಯನ್ನು ಅಪೇಕ್ಷಿಸಿ ಪ್ರಶ್ನೆಗಳನ್ನು ಕೊಟ್ಟು ಫಲವಿಲ್ಲ. ಪರೀಕ್ಷೆಯ ಫಲಿತಾಂಶವನ್ನು ಒಂದು ನಟ್ಟಕ್ಕೆ ತರುವುದಕ್ಕೆ ಹಿಂದೆ ಒಂದು ಕಮಿಟಿಯನ್ನು ನೇಮಿಸುತಿದ್ದರು; ಆ ಕ್ರಮವನ್ನು ಈಗಲೂ ಊರ್ಜಿತವಿರಿಸಿದರೆ ಚೆನ್ನಾಗಬಹುದು.

ತಮ್ಮ ಮಕ್ಕಳು ಒಂದು ಸಲ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ ಉಳಿದೆವೆಂದು ಭಾವಿಸಿ, ತಮ್ಮ ಸರ್ವಸ್ವವನ್ನು ಖರ್ಚುಮಾಡುವ ಮಕ್ಕಳ ರಕ್ಷಕರಿಗೆ ಈ ತೆರದ ಫೈಲುಗಳ ಸಂಖ್ಯೆಯ ದೆಸೆಯಿಂದ ಭಯಂಕರ ಹಾವಳಿ ಉಂಟಾಗಿದೆ ಎಂದು ದೂರುವವರಿದ್ದಾರೆ.

ಮೇಲ್ತೆರದ ಪರೀಕ್ಷೆಗಳಲ್ಲಾದರೆ, ಪರೀಕ್ಷಕರೆಲ್ಲರೂ ಒಂದುಕೂಡಿ, ಫಲಿತಾಂಶವನ್ನು ಚೆನ್ನಾಗಿ ಚರ್ಚಿಸಿ, ಒಂದೆರಡು ಮಾರ್ಕುಗಳಿಗಾಗಿ ಫೈಲಾದವರ ವಿಷಯ ಪುನಃ ವಿಮರ್ಶಿಸಿ, ಆಗುವಷ್ಟು ವಿವೇಚನೆಯಿಂದ ಪಾಸುಗಳನ್ನು ಸರಿಪಡಿಸುತ್ತಾರೆ. ಅದರಂತೆ, ಮೆಟ್ರಿಕ್ಯುಲೇಶನ್ ಪರೀಕ್ಷೆಯ ವಿಷಯ ಏಕೆ ವರ್ತಿಸಬಾರದು?

ಈ ಪರೀಕ್ಷೆಗೆ ಮೊಡರೇಟರನ್ನು ನೇಮಿಸುವ ಹಿಂದಣ ಸೂತ್ರಗಳನ್ನು ಯುನಿವರ್ಸಿಟಿಯ ಸೆನೆಟ್, ಸಿಂಡಿಕೇಟ್, ಎಕೆಡೆಮಿಕ್ ಕೌನ್ಸಿಲ್ ಎಲ್ಲವೂ ಒಪ್ಪಿಕೊಂಡು ರದ್ದುಗೊಳಿಸಿವೆ!

ಮೆಟ್ರಿಕ್ಯುಲೇಶನ್ ಪರೀಕ್ಷಾ ವಿಷಯಗಳು ೧೫–೨೦ ಇದ್ದರೆ, ವಿದ್ಯಾರ್ಥಿಗಳು ತಮಗೆ ಬೇಕಾದ ವಿಷಯಗಳನ್ನೇ ಆರಿಸಿಕೊಂಡು ಅವುಗಳಲ್ಲಿ ಉತ್ತೀರ್ಣರಾಗಲು ಚೆನ್ನಾಗುತಿದ್ದಿತು; ಈಗ ಕಡ್ಡಾಯವಾಗಿ ಕೆಲವು ವಿಷಯಗಳನ್ನು ಮಾತ್ರ ಇಟ್ಟಿರುವ ಕಾರಣ ಅವುಗಳನ್ನೇ, ತಮಗೊಪ್ಪದ ವಿಷಯಗಳೆಂತಾದರೂ, ವಿದ್ಯಾರ್ಥಿಯರು ಕಲಿತುಕೊಳ್ಳಲೇಬೇಕಾಗುತ್ತಿದೆ; ಹೀಗಾಗಿ ಅವರು ಅಷ್ಟು ಚೆನ್ನಾಗಿ ಪಾಸಾಗುವುದಿಲ್ಲ ಎಂದು ಒಬ್ಬರ ತರ್ಕ.

ಎಲ್ಲ ಪರೀಕ್ಷೆಗಳಲ್ಲೂ ಆಗುವಷ್ಟು ಹೆಚ್ಚಾಗಿ ವಿದ್ಯಾರ್ಥಿಗಳು ಉತ್ತೀರ್ಣಗೊಳಿದಂತೆ ಪರೀಕ್ಷಕರು ಪ್ರಯತ್ನಪಡುತ್ತಿರುವರೆಂದೂ; ಯುನಿವರ್ಸಿಟಿಗೆ ಸೇರಬೇಕಾದರೆ ಈ ಪರೀಕ್ಷೆಯೊಂದು ಅತ್ಯಾವಶ್ಯಕವಾದುದೆಂದು ಮಾಡಿರುವ ಕಾರಣ, ಬಾಯಿಪಾಠವೇ ಸರ್ವಸ್ವವೆಂದು ವಿದ್ಯಾರ್ಥಿಗಳಲ್ಲಿ ನಂಬುಗೆ ಹುಟ್ಟಿರುವ ಪ್ರಯುಕ್ತ, ಹೀಗೆಲ್ಲ ದುಷ್ಫಲಗಳು ಉಂಟಾಗಿವೆ. ಈ ಮೆಟ್ರಿಕ್ಯುಲೇಷನ್ ಪರೀಕ್ಷಾಕ್ರಮವನ್ನೇ ಪೂರ್ಣವಾಗಿ ವಿಮರ್ಶಿಸುವುದಕ್ಕೆ ಒಂದು ಕಮಿಟಿಯನ್ನು ನೇಮಿಸಿದರೆ ಚೆನ್ನಾಗುವುದಾಗಿ, ಅದರಂತೆ ಪರೀಕ್ಷಕರು ಚುನಾಯಿಸುವ ಕ್ರಮವನ್ನು ತಿದ್ದಬೇಕಾಗಿ ಒಬ್ಬ ಪ್ರೊಫೆಸರರು ಸೂಚಿಸಿದರು.

ಎರಡು ಮೂರು ಮಾರ್ಕುಗಳು ಮಾತ್ರ ಕಡಮೆಯಾಗಿ ಪೂರಾ ಪಾಸಾಗದವರನ್ನು ಕುರಿತಾಗಿ ಪುನರ್ವಿಮರ್ಶೆ ಮಾಡುವ ಅಧಿಕಾರವುಳ್ಳ ಒಂದು ಕಮಿಟಿಯನ್ನು ನೇಮಿಸುವುದುತ್ತಮ ಎಂದು ಒಂದು ಸೂಚನೆ.

ಎಷ್ಟು ಮಂದಿ ವಿದ್ಯಾರ್ಥಿಯರು ಉತ್ತೀರ್ಣರಾಗಬೇಕೆಂದು ನಿಶ್ಚರ್ಷಿಸುವುದಕ್ಕಿಂತ, ವಿದ್ಯಾರ್ಥಿಗಳ ಕಡೆಗೆ ತೀರ ನಿಷ್ಪಕ್ಷಪಾತದಿಂದಲೇ ಪರೀಕ್ಷಕರು ವರ್ತಿಸಬೇಕೆಂದು ಒಂದು ನಿಯಮವಿರುವುದು ಉತ್ತಮವೂ ಅಗತ್ಯವೂ ಆಗಿದೆ; ಆಯಾ ಪರೀಕ್ಷಕರು ತಮ್ಮ ಮನಸ್ಸಿಗೆ ತೋಚಿದ ಮಾರ್ಕುಗಳನ್ನು ಕೊಡುವಂತಾಗ ಬಾರದೆಂದು ಈ ಕ್ರಮವಾಗಬೇಕು.

ಒಂದು ಶಾಲೆಯಲ್ಲಿ ವಿದ್ಯಾರ್ಥಿಯನ್ನು ಮೇಲ್ತರಗತಿಗೆ ಸೇರಿಸಿಕೊಳ್ಳದಿದ್ದರೆ, ಆತನನ್ನು ಮತ್ತೊಂದು ಶಾಲೆಯವರು ಸೇರಿಸಿಕೊಳ್ಳುವ ಹಾಳು ರೂಢಿಯು ಈ ಸಂಸ್ಥಾನದಲ್ಲಿ ಬೆಳೆದ ಕಾರಣ, ಅಯೋಗ್ಯರಾಗಿರುವ ವಿದ್ಯಾರ್ಥಿಗಳೇ ತುಂಬ ಮೆಟ್ರಿಕ್ ವರೆಗೂ ಏರುತ್ತ ಬಂದು, ಅಲ್ಲಿ ಹತಾಶರಾಗುತ್ತಾರೆ. ಒಂದೇ ಊರಲ್ಲಿ, ಒಂದು ಶಾಲೆಯಿಂದ ಪರೀಕ್ಷೆಗೆ ಬಂದ ಹನ್ನೊಂದು ಮಂದಿಯಲ್ಲಿ ಹತ್ತು ಪಾಸಾಗಿರುವಾಗ, ಮತ್ತೊಂದು ಶಾಲೆಯಿಂದ ಬಂದ ೫೦ ಮಂದಿಯಲ್ಲಿ ಒಬ್ಬರೂ ಪಾಸಾದುದಿಲ್ಲವೇಕೆ? ನಾಪಾಸುಗಳ ಜತೆಗೆ ಸೇರಿ, ಅವರೊಡನೆ ಗಲಭೆ ಎಬ್ಬಿಸುವ ವಯೋವೃದ್ಧರ ದೆಸೆಯಿಂದ, ವಿದ್ಯಾರ್ಥಿಗಳ ಕೊಲೆಯಾಗುತ್ತದೆ ಎಂಬ ಅವವಾದವು ಹರಡಲು ಉಪಕ್ರಮವಾಗಿದೆ. ಈ ಬಗೆಯ ಚಳವಳಿಗಳಿಂದ ಮಕ್ಕಳಲ್ಲಿ ಸದ್ಗುಣಗಳು ಉಂಟಾಗುವಂತಿದೆಯೆ? ಎಂದೊಬ್ಬರು ನಿರ್ದಾಕ್ಷಿಣ್ಯವಾಗಿ ಟೀಕಿಸಿದರು.

ಇಂಗ್ಲಿಷಿನಲ್ಲಿ ಮುಖ್ಯ ಪರೀಕ್ಷಕರು ಎದ್ದು, ಇವೆಲ್ಲ ಆಕ್ಷೇಪಗಳನ್ನು ಖಂಡಿಸಿ, ಅಷ್ಟು ಹೆಚ್ಚು ಮಂದಿ ಫೈಲಾಗಲು ಮುಖ್ಯ ಕಾರಣಗಳನ್ನು ವಿವರಿಸಿದರು.

ಈ ವರ್ಷದ ಪ್ರಶ್ನಾಪತ್ರವು ಎಲ್ಲ ಶಾಲೆಗಳಿಂದಲೂ ಬರುವ ವಿದ್ಯಾರ್ಥಿಗಳನ್ನು ನಿಷ್ಪಕ್ಷವಾಗಿ ಪರೀಕ್ಷಿಸುವ ಬಗೆಯ ಪ್ರಶ್ನೆಗಳನ್ನುಳ್ಳದಾಗಿದ್ದಿತು. ವಿದ್ಯಾರ್ಥಿಗಳು ತಾವಾಗಿ ಏನಾದರೊಂದು ಪ್ರಶ್ನೆಗೆ ತಮ್ಮ ಆಲೋಚನೆಯ ಮೂಲಕವೇ ಸದುತ್ತರ ಕೊಡಬಲ್ಲರೋ ಎಂದು ನೋಡುವುದಕ್ಕಾಗಿ ಈ ಪ್ರಶ್ನೆಗಳನ್ನು ಕೊಟ್ಟುದೇ ಹೊರತು, ಇತರರು ಸಿದ್ಧಪಡಿಸಿ ಬರೆದಿಟ್ಟುದನ್ನು ಬಾಯಿಪಾಠ ಮಾಡಿ ವಿದ್ಯಾರ್ಥಿಗಳು ಬರೆಯಬಲ್ಲರೇ ಎಂದು ನೋಡುವುದಕ್ಕಲ್ಲ. ಬಾಯಿಪಾಠದಿಂದ ಪಾಸಾಗುವುದು ಕಷ್ಟವೆಂದು ಅವರು ತಿಳಿಯುವ ಹಾಗೆಯೇ ಈ ಪ್ರಶ್ನೆಗಳು ಇದ್ದುವು.

ಉತ್ತಮ ಶಾಲೆಗಳಲ್ಲಿ ಸೇಕಡಾ ೪೦–೫೦ ಮಂದಿ ಪಾಸಾಗಿದ್ದಾರೆ. ಶಾಲೆಗಳೆಂಬ ಹೆಸರನ್ನು ಹೊರಲು ಯೋಗ್ಯವಾಗಿಲ್ಲದ ಶಾಲೆಗಳಿಂದ ಬಂದವರಲ್ಲಿ ಅತ್ಯಲ್ಪ ಮಂದಿ ಜಯಶಾಲಿಗಳಾಗಿದ್ದಾರೆ. ಈ ಶಾಲೆಗಳು ಇತರ ಶಾಲೆಗಳ ವ್ಯರ್ಥ ವಿದ್ಯಾರ್ಥಿಗಳನ್ನೆಲ್ಲ ಕೂಡಿಸಿ, ಆಶ್ರಯ ಕೊಟ್ಟು ಪರೀಕ್ಷೆಗಳಿಗೆ ಕಳುಹುವವು. ಇವುಗಳ ದೆಸೆಯಿಂದಲೇ ಹೆತ್ತವರ ಹಣವು ನೀರಾಗುವುದು, ಫಲಕ್ಕೆ ಬಾರದು.

(೧೭ನೇ ಪುಟಕ್ಕೆ ಮುಂದರಿಸಿಯುದೆ)

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗ ಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಪರತ

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ, ದಾರುಣವಾದ ಚಿಂತೆಯಿಂದಲೂ, ಹಾಲುಣಿಸಿದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೈಪ್ಪಟ್ಟುಪ್ಪವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರವೃದ್ಧಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3.
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ-ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಮಲೆಯಾಳ ಔಷಧಾ ಕಂಪೆನಿ

MALAYALA OUSHADHA CO., Post CHALAPURAM.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.
1. ಮುಟ್ಟುದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಶ್ವೇರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED.,

OPPOSITE TALUK POLICE STATION.

MANGALORE.

ESTD. 1933.

AS ON 30TH APRIL 1936.

BENEFIT AMOUNT PAID EXCEEDS RS. 20,150/—

RESERVE FUND EXCEEDS RS. 6,250/—

WE HAVE THREE SCHEMES FOR YOU.

LIFE **MARRIAGE** **BIRTH**

ADMISSION FEE RS. 5—8—0 ONLY. (By Instalments if required)

MONTHLY PREMIUM RUPEE ONE ONLY.

WANTED SPECIAL AGENTS & REPRESENTATIVES ON LIBERAL TERMS.

For Full Prospectus & Agency Terms please call at or write to:—

THE GENERAL INSURANCE BANK OF INDIA LIMITED,
MANGALORE, S. K.

Mangalore, Dated 8th May '36.

P. K. MENON, *Secretary.*

ಝೂಂಡೂರವರ ಎರಡು ಬಹಳ ಜನಪ್ರಿಯ ಔಷಧಗಳು.

ಝೂಂಡೂ ದ್ರಾಕ್ಷಾಸವ

ಜೀರ್ಣವನ್ನು ವರ್ಧಿಸುತ್ತದೆ
ಯಕೃತ್ತನ್ನು ಕ್ರಮಗೊಳಿಸುತ್ತದೆ
ಆಯಾಸವನ್ನು ನಿವಾರಿಸುತ್ತದೆ
ಮತ್ತು
ನರಗಳನ್ನು ಬಲಗೊಳಿಸುತ್ತದೆ.

ಬೆಲೆ: 1½ ಪೌಂಡು ರೂ. 1/12/-
1 ಪೌಂಡು ರೂ. 1/6/-
½ ಪೌಂಡು ರೂ. -/14/-

ಝೂಂಡೂ ಕೇಸರಿ ಜೀವನ

ಟಾನಿಕುಗಳಲ್ಲಿ ರಾಜ.

ಕಾರ್ಯದಲ್ಲಿ ತೀವ್ರ ಮತ್ತು ಪರಿಣಾಮದಲ್ಲಿ ಚಿರಶಾಶ್ವತ.

ಮೆದುಳಿನ ಕೆಲಸಗಾರರಿಗೂ, ಶ್ವಾಸಕೋಶ ಮತ್ತು ಎದೆಯ ಬಾಧೆಯುಳ್ಳವರಿಗೂ ಇದು ಬಹಳ ಯೋಗ್ಯವಾದುದು.

1 ಪೌಂಡು ರೂ. 5/-
¼ ಪೌಂಡು ರೂ. 1/9/-

ಸಿದ್ಧಮಾಡುವವರು:
ದಿ ಝೂಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಯಿ.
ಮದ್ರಾಸ್ ಆಧಿಪತ್ಯದ ಏಜಂಟರು:—ದಾಮೋದರ್ ಎಂಡ್ ಕೋ.,
78, ಜೈನಾ ಬಜಾರ್ ರೋಡ್, ಜಿ. ಟಿ., ಮದ್ರಾಸ್.
ಸಬ್ ಏಜಂಟರು:—ಷಾ ಅಂಡ್ ಕೋ., ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು.
ಉಡುಪಿ:—ಪಿ. ಎ. ಪೈ ಬ್ರದರ್ಸ್. — ಕಾರ್ಕಳ:—ವಿ. ವಿ. ಶೆಣೈ.

INVEST YOUR SAVINGS IN A East and West Policy.

OWN A EAST & WEST POLICY AND INCREASE YOUR SAVINGS! FOR THE EAST & WEST IS MAKING ASTOUNDING PROGRESS AND A EAST AND WEST POLICY IS, THEREFORE, A PROFITABLE INVESTMENT. IT ENCOURAGES THRIFT, ENSURES THE HIGHEST RETURNS AND OFFERS UTMOST SECURITY.

For Prospectus, Valuation Reports & Agency Terms apply to:—

MESSRS. PADUBIDRI BROS.,
Chief Agents,
MAHARASHTRA AND KARNATAKA,
East & West Insurance Co., Ltd.,
BOMBAY No. 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.
ಶೀಸೆ 1ಕ್ಕೆ 12 ಆಣೆ; ಟಿ. ಖ. 11 ಆಣೆ.

ಸ್ಪೀನೋಫ್ಲೀವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಬೆಕ್ಕಬಿಂದು ದಿವ್ಯೌಷಧವು.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.
ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟಿ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸಪ್ಲಾ ಸಿಪ್ಪವರು ವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.

'ಮೊಸಮೆ' ಮತ್ತು ನಾವು

ಪಡುವಣ ಕಡಲಿನ
ಕಸ್ತೂರಿ ನಾಡಿನ
ಕಾರ್ಗಾಲದ ವೈಭವವೇನು!
ಚೆಲ್ಲಿದರಿನಿತೊ
ತೀರದ ನೀರಿನ
ಜಡದೇಹದ ಕಾಮುರ್ಗಿಲೇನು?

(—ನಲ್ಮೆ)

ಹೀಗೆಲ್ಲ ಕವಿಗಳು ಅದನ್ನು ಕೊಂಡಾಡಿದ್ದಾರೆ—ಆ ಮೊಸ ಮನ್ನು. ಬಯಲಿನಲ್ಲಿ ಚಂಡಾಟದಲ್ಲಿ ನಿರತರಾಗಿರುವ ಚಿಕ್ಕ ಪ್ರಾಯದ ಹುಡುಗರಿಗೆ ಮಳೆಯ ಆಗಮನವನ್ನು ಕಂಡು ಆಗುವ ವಿಸ್ಮಯ, ಬೆರಗು, ನಿರಾಶೆಯೆಂದರೆಷ್ಟು! ಇದು ನಾವು ಚಿಕ್ಕವರಾಗಿರುವಾಗ ಪಡೆದ ಅನುಭವ. ಆ ಸಮಯವನ್ನು ಹುಡುಕಿ ಯಾರಾದರೊಬ್ಬ ಗಮುಕಿಯು ನಮ್ಮ ಕೂಡೆ ಇಂಥ ಕವನಗಳನ್ನು ಹಾಡುತ್ತಿದ್ದಲ್ಲಿ, ಮರುಕ್ಷಣದಲ್ಲಿ ಜೇಡಿಮಣ್ಣು, ಆವೆಮಣ್ಣು, ಮಳಲುಗಳಿಂದ ಆತನ ಮುಖವು ತುಂಬಿಹೋಗುತ್ತಿತ್ತೆಂಬುದರಲ್ಲಿ ಕಿಂಚಿತ್ತಾದರೂ ಸಂಶಯವಿಲ್ಲ. ಹೊಸ ಲಾಲಸೆಗಳಿಂದ ಮೈಯ್ಯು ಸ್ಫುರಿತವಾಗಿರುವಾಗ, ಬಾಲ್ಯಪ್ರಾಯದಲ್ಲಿ ಬರುವ ಬಾಲಭಾವಗಳ ಬಡ್ಡಾಳಿಕೆಯು ಮನಸ್ಸನ್ನು ಚಂಚಲಗೊಳಿಸಿರುವಾಗ, ಬಯಲಾಟಗಳಲ್ಲಿ ಪೂರ್ಣ ಮಮತೆಯು ಮೂಡಿರುವಾಗ, ಇಡೀ ದಿನ ಕ್ಲಾಸಿನಲ್ಲಿ ಕುಳಿತು, ಸಂಬಳಕೊಡುತ್ತಾರೆಂಬ ನೆಪವಿರುವುದರಿಂದ ಪಾಠಗಳ ಓದುವಿಕೆಯಿಂದ ಕಾಲಾಪಹರಣೆ ಮಾಡುವ ಉಪಾಧ್ಯಾಯರ ಹುರಿಮಾತುಗಳನ್ನು ಕೇಳಿಬೇಸತ್ತು, ಮನೋಲ್ಲಾಸವನ್ನು ಪಡೆಯಬೇಕೆಂದು ಹಾತೊರೆಯುತ್ತಿರುವಾಗ, ಈ ಮಳೆಯ ಆಗಮನವು ಆದಲ್ಲಿ ಯಾವ ಜೀವಿಗಾದರೂ ನಿರಾಶೆ, ದುಃಖವು ಆಗುವುದು ಸಹಜವಾಗಿದೆ. ಮೊನ್ನೆ ನಮ್ಮನ್ನು 'ಡಿಫೀಟ್' ಮಾಡಿದವರು ಪುನಃ ನಮ್ಮೊಡನೆ 'ಮೇಚ್' ಆಡಲಿಕ್ಕೆ ಬಂದಿದ್ದಾರೆ; ಮೊನ್ನೆ ಊರಿಗೆ ಹೋದ ನಮ್ಮ 'ಬೆಸ್ಟ್ ಪ್ಲೇಯರ್' ಸುಬ್ಬಕೃಷ್ಣ ಇಂದು ಆಟವಾಡಲಿದ್ದಾನೆ. ಹೀಗಿರುವಾಗ, ಆಟ ಮೊದಲುಗೊಳ್ಳುವ ಐದಾರು ನಿಮಿಷಗಳ ಮುಂಚಿತವಾಗಿಯೆ ಮಳೆಯ ಉಪಟಳಿಗಾರಂಭವಾದಲ್ಲಿ, ಹೃದಯದ ಉದ್ವೇಗವು ತಲ್ಲೀನವಾಗುವುದೆ?

'ಹಳೆಯ ನೆನಹು'ಗಳನ್ನು ಬಿಟ್ಟುಬಿಡುವ.

ಮಳೆಯು ಸುಮ್ಮನೆ ಬರುವುದೆ? ಉಪಕಾರಿಯೆಂದು ತೋರುತ್ತಿದ್ದರೂ ಮಳೆಯು ಹೊಲಸುಕಾರಿಯೂ ಆಗಿದೆ. ಮೊಸಮಿನ ಕಾಠುಬಾರೆಂದರೇನು? ಚೀನ ದೇಶದ ಅರಸನ (ಮಾಜಿ) ವರಿವಾರದಂತೆ, ಹಲವು ವಿಧದ ಕಠಿಣತರವಾದ ಅಂಟುರೋಗಗಳ ವಿಡಾಯವನ್ನೆ ತರುವನು. ತಂದು, ಊರಿನ ಒಂದು ಭಾಗದಲ್ಲಿ ಒಬ್ಬನನ್ನು, ಇನ್ನೊಂದು ಭಾಗದಲ್ಲಿ ಇನ್ನೊಬ್ಬನನ್ನು, ಹೀಗೆ ಹಲವು ಭಾಗಗಳಲ್ಲಿ ಹಲವರನ್ನು ಕಾವಲಿಗಾಗಿ ಇಡುವನು. ಇನ್ಫ್ಲುಯೆಂಝಾ, ಟ್ಯಾಫ್ಫೋಡ್, ವಾತ ದೋಗ ಇವೆಲ್ಲಾ ಊರನ್ನೆಲ್ಲಾ ಆಕ್ರಮಿಸುವುವು.

ಸಂಜೆಯ ಕಾಲವನ್ನು ಬಾವುಟಕಟ್ಟೆ, ಗುಡ್ಸು ಸ್ಟೇಶನ್, ಮುಂತಾದ ಸ್ಥಳಗಳಲ್ಲಿ ವಿಹಾರಕಾರ್ಯದಲ್ಲಿ ಕಳೆಯುತಿದ್ದ ನನ್ನಂಥವರಿಗೆ ಮಳೆ ಬಂದಲ್ಲಿ ಪ್ರಾಣಸಂಕಟವಾಗುವುದು, ಹೆಂಡಕುಡಿಕನಿಗೆ ಹೆಂಡ ದೊರೆಯದಂತೆ, ಬೀಡಿ ಸೇದುವವನಿಗೆ ಕೈಯಲ್ಲಿ ಮುಕ್ಕಾಲಿದ್ದರೂ ಬೀಡೀ ಅಂಗಡಿ ದೊರೆಯದಂತೆ, ಮೂರು ಮಿನಿಟಿಗೊಮ್ಮೆ ಮೂಗು ತುಂಬ ಹುಡಿ ಸೇದುವವನಿಗೆ ಹುಡಿಬುರುಡೆಯು ಸಿಗದಂತೆ, 'ಎಪ್ಪತ್ತೆಂಟು ರೂಪಾಯಿಗೆ ವಿಕ್ರಯಿಸಿದ ಸೀರೆಯನ್ನು ಪಡಕೊಳ್ಳಬೇಕೆಂದಲ್ಲಿ ರಾಯರ ಚೀಲದಲ್ಲಿ ಎಪ್ಪತ್ತೇಳು ರೂಪಾಯಿಯಷ್ಟೆ ಇರುವುದನ್ನು ಕಂಡ ರಾಯರ ಅರ್ಧಾಂಗಿಯಂತೆ, ಸದಾ ಆ ಸ್ಥಳಗಳ ಕೋಡಿಗೆಯ ರುಚಿಯನ್ನೂ, ವಿಶೇಷತೆಯನ್ನೂ, ಭಾರವಣೆಯನ್ನೂ ಬಲ್ಲ ನಮ್ಮ ಅವಸ್ಥೆಯಾಗುವುದು. ಮನೆಯಿಂದ ಹೊರಬೀಳಲು ಚಳಿಯ ತಾಡನದ ಭಯವಾಗುವುದು. ಉಪಾಯವಿಲ್ಲದೆ ಹೊರಬಿದ್ದಲ್ಲಿ ಮನೆ ಸೇರುವಾಗ ಮಳೆಯಾಳಿ ಭಿಕ್ಷುಕನಂತಾಗಬೇಕಾಗುವುದು. ಅಖಂಡವಾದ ಪಾಪಿಗಳಂತೆ, ಕೊಡೆಯೊಂದನ್ನು ಆತ್ಮರಕ್ಷಣೆಯ ಕೃಪೆಗಾಗಿ ಬಿಡಿಸಿ ಹಿಡಿದುಹೋಗುವ ದಾರಿಹೋಕರಾದ ನಮ್ಮನ್ನು, ನಿಶ್ಚಿಂತರಾಗಿ ಆ ಕಾರುಮ್ಹಾಲಿಕರು ಉಪದ್ರವಿಸುವರು! ಇನ್ನೂ ಬದಿಗೆಂದು ಸರಿದಲ್ಲಿ ತೋಡಿನ ಕೆಂಬಣ್ಣದ ನೀರಿನಲ್ಲಿ ಬೀಳಬೇಕಾಗುವುದು. ಇಲ್ಲದಿದ್ದಲ್ಲಿ ವಾಹನಗಳ ಚಕ್ರಗಳು ಮಾರ್ಗದಲ್ಲಿರುವ ಹೊಂಡಗಳಲ್ಲಿ ಮಲೆತು ನಿಂದಿರುವ ಕೊಳಕುನೀರನ್ನು ಸೀಳಿ ದೂರ ಚೆಲ್ಲಿ, ನಮ್ಮನ್ನೆಲ್ಲಾ ಒಕುಳಿಸ್ನಾನಕ್ಕೀಡುಮಾಡುವುವು. ಮಳೆಗಾಲದ ಮಾರ್ಗಗಳಲ್ಲಿ ನಡೆವಾಗ ಹಿಂದೆ ಕಲಿತ ಕೆಲವು ಹಾಡುಗಳ ನೆನಪಾಗುವುದು.

ಅವೇಶದ ವೇ
ಪದ ಬಿರುಸುಟ್ಟುರಿ
ಊರೂರಲಿ ಹಾರೋಡುವುದು
ಮರಗಳ ಕೀಳುತ
ಬಂಡೆಯ ಹೋಳುತ
ಜಗಜಟ್ಟಿಯು ತೆರನಾಡುವುದು

ಬಾಲವಿನೋದ

ಮನೆಗಳ ಮನಗಳ
ಒಳಗೂ ಹೊರಗೂ
ಜನುಗುತಿರುವ ಹನಿಸೋನೆಗಳು
ಆತ್ತತ್ತೂ ಆ
ಯಿದಲ್ಲಿ ಸತ್ತೂ
ಸಾಯ್ದುದೆ ನೋವನು ಹಿಂಗಿಸುತ
ಏಂತಾದರೂ ಬಾ
ಳಲಿ ಬೀಕೆನ್ನುತ
ದೆಸೆಯಿರ್ದುದು ಬಗೆ ತಿಳಿಯಿಸುತ

ಅಲ್ಲದೆ ಕೆಲವು ಗಾದೆಗಳೂ ಮನದಲ್ಲಿ ಮೂಡುವುವು.

'ಮಳೆ ಜೋಯಿಸನ ಗಂಡ, ಕಪ್ಪೆ ಗುಡಿಗಾರನ ಗಂಡ, ಹಣ ನೋಟಗಾರನ ಗಂಡ, ಶವಣೆ ಶಾನುಭಾಗನ ಗಂಡ':.....
